## ಗುರುವಾರ ೨೮ನೇ ಆಗಸ್ಟ್, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನದ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಸಭಾಧ್ಯಕ್ಷರು ಗೌರವಾನ್ವಿತ ಡಾ. ರಾಜೇಂದ್ರಪ್ರಸಾದ್ ಅವರು ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ಪ್ರತಿಜ್ಞೆ ಸ್ವೀಕರಿಸಿದ ಸದಸ್ಯರು

ಈ ಕೆಳಗಿನ ಸದಸ್ಯರು ಪ್ರತಿಜ್ಞೆ ಸ್ವೀಕರಿಸಿದರು

ಪ್ರೊ. ಎನ್.ಜಿ. ರಂಗಾ

ಶ್ರೀ ಕಾಮರಾಜ್ ನಾಡಾರ್, ಎಂ.ಎಲ್.ಎ.

### ಅಲ್ಪಸಂಖ್ಯಾತರ ಹಕ್ಕುಗಳನ್ನು ಕುರಿತ ವರದಿ

**ಶ್ರೀ ಬಿ. ದಾಸ್** (ಒರಿಸ್ಸಾ : ಸಾಮಾನ್ಯ) : ಮಾನ್ಯರೆ, ಒಂದು ಕ್ರಿಯಾಲೋಪ ಕುರಿತು. ನೆನ್ನೆ ಸದನವು ಹಿಂದೂ ಸಮುದಾಯದ ಭಾಗವಾಗಿ, ಅನುಸೂಚಿತ ಜಾತಿಗಳನ್ನು ವಿವರಿಸಲು ಶ್ರೀ ಕೆ.ಎಂ. ಮುನ್ಷಿ ಅವರು ಮಂಡಿಸಿದ ಖಂಡ ೧(ಎ)ಅನ್ನು ಅಂಗೀಕರಿಸಿತು. ಮಾನ್ಯರೆ, ಅದಕ್ಕೆ ನಾನು ಒಂದು ತಿದ್ದುಪಡಿ ಮಂಡಿಸಿದೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ದಾಸ್ ಅವರೆ ಇಂದು ನಾವು ಕಾಯಿದೆಯ ಕರಡುಪ್ರತಿ ಮಾಡುತ್ತಿಲ್ಲ ಎಂದು ನಾನು ನಿಮಗೆ ಹೇಳಬಹುದಾಗಿದೆ. ವಿವರಣೆಯಲ್ಲಿ ಏನಾದರೂ ಖಚಿತವಾದುದಿಲ್ಲದಿದ್ದರೆ, ಅದನ್ನು ಕರಡುಗಾರರು ಸರಿಪಡಿಸುತ್ತಾರೆ. ಆದುದರಿಂದ ಅದರ ಬಗೆಗೆ ನಾವು ಚಿಂತಿಸುವ ಅಗತ್ಯವಿಲ್ಲ. ಅದು ಕೇವಲ ಒಂದು ತಾಂತ್ರಿಕ ವಿಷಯ.

**ಶ್ರೀ ಬಿ. ದಾಸ್** : ಅನುಸೂಚಿ ೧ ಆಗಸ್ಟ್ ೧೫ರಿಂದ ಅಸ್ತಿತ್ವದಲ್ಲಿಲ್ಲ. ಅದನ್ನು ಹೊಂದಾಣಿಕೆ ಕಾಯಿದೆ (ಭಾರತದ ತಾತ್ಕಾಲಿಕ ಸಂವಿಧಾನ) ಆದೇಶ, ೧೯೪೭ರಲ್ಲಿ ಕೈಬಿಡಲಾಗಿದೆ.

**ಮಾನ್ಯ ಸಭಾಧ್ಯಕ್ಷರು** : ಅದು ಅಸ್ತಿತ್ವದಲ್ಲಿಲ್ಲದಿದ್ದರೂ, ಕರಡುಗಾರ (ಡ್ರಾಫ್ಟ್ಸ್‌ಮನ್) ಅದು ಏನೆಂದು ಅರ್ಥಮಾಡಿಕೊಳ್ಳುತ್ತಾರೆಂದು ಅನಿಸುತ್ತದೆ.

**ಶ್ರೀ ಗೋಪಾಲಕೃಷ್ಣ ವಿಜಯ ವರ್ಗೀಯ** (ಗ್ವಾಲಿಯರ್ ರಾಜ್ಯ) : ಮಾನ್ಯರೆ, ಬಂಗಾಳದ ಸದಸ್ಯರು ಪಶ್ಚಿಮ ಬಂಗಾಳದಲ್ಲಿ ಅಲ್ಪಸಂಖ್ಯಾತರಿಗೆ ಹೆಚ್ಚುವರಿ ಸ್ಥಾನಗಳಿಗೆ ಸ್ಪರ್ಧಿಸುವ ಹಕ್ಕು ಕೊಟ್ಟಲ್ಲಿ ಅದು ಅಲ್ಲಿನ ಸ್ಥಿತಿಯನ್ನು ಅಲಕ್ಷಿಸುತ್ತದೆ ಮತ್ತು ಇಡೀ ಅನುಪಾತವನ್ನು ಪಲ್ಲಟಗೊಳಿಸುತ್ತದೆ ಎಂದು ಭಾವಿಸುತ್ತಾರೆ. ನಾನು ಆ ಪ್ರಶ್ನೆಯನ್ನು ಮುಂದಿನ ಅವಗಾಹನೆಗೆ ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ.

**ಮೌಲಾನಾ ಹಸ್ರತ್ ಮೋಹಾನಿ** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ಕಾಂಗ್ರೆಸ್ ಹೈಕಮ್ಯಾಂಡ್‌ನ ಸದಸ್ಯರು ಮತ್ತು ಅಲ್ಪಸಂಖ್ಯಾತರ ಸದಸ್ಯರು ಅಲ್ಪಸಂಖ್ಯಾತರ ವರದಿ ಕುರಿತು ಮಾತನಾಡುವ ಈ ಸಮಯದಲ್ಲಿ ಹೇಗೆ ಅವರು ಅಲ್ಪಸಂಖ್ಯಾತರು ಎಂದರೆ ಯಾವಾಗಲೂ ಮುಸ್ಲಿಮರು ಮಾತ್ರ ಎಂದು ಅರ್ಥಮಾಡಿಕೊಳ್ಳುತ್ತಾರೆ

ಎಂದು ನಾನು ತಿಳಿಯಬಹುದೆ? ನಾನು ಮುಸ್ಲಿಮರನ್ನು ಒಂದು ಅಲ್ಪಸಂಖ್ಯಾತ ಎಂದು ಒಪ್ಪಲು ನಿರಾಕರಿಸುತ್ತೇನೆ. ಈಗ ತಾವು ಈ ಕೋಮುವಾದದಿಂದಾಚೆ ಹೋಗಿದ್ದೇವೆ ಎಂದು ಹೇಳುತ್ತೀರಿ. ನಾವು ಮುಸ್ಲಿಮರನ್ನು ಮಾತ್ರ ಉಲ್ಲೇಖಿಸಿ ಒಂದು ಅಲ್ಪಸಂಖ್ಯಾತ ಎಂದು ಕರೆಯುತ್ತಿಲ್ಲವೆ?

**ಮಾನ್ಯ ಸಭಾಧ್ಯಕ್ಷರು** : ಗೌರವಾನ್ವಿತ ಸದಸ್ಯರು ಏನು ಹೇಳುತ್ತಿದ್ದಾರೆ ಎಂದು ಗ್ರಹಿಸಲಾಗಲಿಲ್ಲ ಎಂದು ನನಗೆ ಆತಂಕವಾಗಿದೆ.

**ಮೌಲಾನಾ ಹಸ್ರತ್ ಮೋಹಾನಿ** : ಮಾನ್ಯರೆ, ನಾನು ಉದ್ದೇಶಪೂರ್ವಕವಾಗಿ ಈ ಅಲ್ಪಸಂಖ್ಯಾತ ವರದಿ ಕುರಿತ ಚರ್ಚೆಗಳಲ್ಲಿ ಯಾವ ರೀತಿಯಲ್ಲೂ ಭಾಗವಹಿಸಲಿಲ್ಲ. ನನ್ನ ಅಭಿಪ್ರಾಯ ಇದ್ದುದೆಂದರೆ....

**ಸೇಠ್ ಗೋವಿಂದ ದಾಸ್** : (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ನಾವು ಯಾವ ವಿಷಯವಾಗಿ ಚರ್ಚಿಸುತ್ತಿದ್ದೇವೆ ಎಂದು ನಾನು ತಿಳಿಯಬಹುದೆ?

**ಮಾನ್ಯ ಸಭಾಧ್ಯಕ್ಷರು** : ಯಾವ ವಿಷಯವೂ ಚರ್ಚೆಯಲ್ಲಿಲ್ಲ; ಮೌಲಾನಾ ಅವರು ಒಂದು ಕ್ರಿಯಾಲೋಪ ಎತ್ತುತ್ತಿದ್ದಾರೆಂದು ನಾನು ಆಲೋಚಿಸಿದ್ದೆ. ಗೌರವಾನ್ವಿತ ಸದಸ್ಯರು ತಮ್ಮ ವಿಷಯವನ್ನು ನಮೂದಿಸಿ ಅನಂತರ ಆವಶ್ಯವಿದ್ದರೆ ತಮ್ಮ ಭಾಷಣ ಮಾಡಲಿ.

**ಮೌಲಾನಾ ಹಸ್ರತ್ ಮೋಹಾನಿ** : ಮಾನ್ಯರೆ, ನಾನು ಈ ಅಲ್ಪಸಂಖ್ಯಾತರ ವರದಿಗೆ ತುಂಬ ಮೂಲಭೂತವಾಗಿ ಆಕ್ಷೇಪಣೆ ಎತ್ತಿದ್ದೇನೆ. ನೀವು ಅಲ್ಪಸಂಖ್ಯಾತರನ್ನು ಕುರಿತು ಮಾತನಾಡುವಾಗ ಅದು ಹೇಗೆ ಮುಸ್ಲಿಮರು ಮಾತ್ರ ಎಂದು ಅರ್ಥೈಸುವಿರಿ ಮತ್ತು ಮೀಸಲಾತಿ ಬಗ್ಗೆ ಮಾತನಾಡುವಾಗ ಮುಸ್ಲಿಮರನ್ನು ಮಾತ್ರ ನೀವು ಉಲ್ಲೇಖಿಸುತ್ತೀರಿ?

**ಮಾನ್ಯ ಸಭಾಧ್ಯಕ್ಷರು** : ಈ ಹಂತದಲ್ಲಿ ನಾವು ಯಾವುದನ್ನೂ ಚರ್ಚಿಸುತ್ತಿಲ್ಲವಾದ ಕಾರಣ ನಾನು ಗೌರವಾನ್ವಿತ ಸದಸ್ಯರನ್ನು ಮನಬಂದಂತೆ ಮಾತನಾಡಲು ಅವಕಾಶ ಕೊಡುತ್ತಿಲ್ಲ ಎಂಬುದು ನನ್ನ ಆತಂಕವಾಗಿದೆ.

**ಮೌಲಾನಾ ಹಸ್ರತ್ ಮೋಹಾನಿ** : ನಾವು ಅಲ್ಪಸಂಖ್ಯಾತರನ್ನು ಕುರಿತು ಮಾತನಾಡುವಾಗ ಹೇಗೆ ಮುಸ್ಲಿಮರನ್ನು ಮಾತ್ರ ಒಂದು ಧಾರ್ಮಿಕ ಅಲ್ಪಸಂಖ್ಯಾತರಾಗಿ ಉಲ್ಲೇಖಿಸಲಾಗುತ್ತಿದೆ ಎಂದು ನಾನು ಹೇಳುತ್ತಿದ್ದೇನೆ. ಮುಸ್ಲಿಮರು ಪಕ್ಷಗಳನ್ನು ರಾಜಕೀಯ ಮಾರ್ಗದಲ್ಲಿ ರೂಪಿಸಿದಲ್ಲಿ ತಮ್ಮನ್ನು ಒಂದು ಅಲ್ಪಸಂಖ್ಯಾತ ಎಂದು ಕರೆಯಲು ನಿರಾಕರಿಸುತ್ತಾರೆ.

**ಮಾನ್ಯ ಸಭಾಧ್ಯಕ್ಷರು** : ಗೌರವಾನ್ವಿತ ಸದಸ್ಯರು ಈಗಾಗಲೇ ಚರ್ಚೆಯಾಗಿ ಅಂಗೀಕಾರವಾಗಿರುವ ಒಂದು ವಿಷಯದ ಗುಣಾವಗುಣಗಳ ಬಗ್ಗೆ ಚರ್ಚಿಸುತ್ತಿದ್ದಾರೆ ಎಂದು ನನಗೆನಿಸುತ್ತಿದೆ.

**ಮೌಲಾನಾ ಹಸ್ರತ್ ಮೋಹಾನಿ** : ಇದನ್ನೇ ನಾನು ಹೇಳಬೇಕೆಂದಿದ್ದುದು.

**ಮಾನ್ಯ ಸಭಾಧ್ಯಕ್ಷರು** : ನಾವು ನೆನ್ನೆ ಅನುಬಂಧದ ಖಂಡ ೪ನ್ನು ಚರ್ಚಿಸುತ್ತಿದ್ದೆವು ಮತ್ತು ಈಗ ನಾವು ತಿದ್ದುಪಡಿಗಳನ್ನೆತ್ತಿಕೊಳ್ಳುತ್ತೇವೆ.

**ಶ್ರೀ ದೇವಿಪ್ರಸಾದ್ ಖೈತಾನ್** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯರೆ, ಇದರ ಸಂಬಂಧವಾಗಿ ನಾನು ತಿದ್ದುಪಡಿ ಸಂಖ್ಯೆ ೪೪ ಎತ್ತಿದ್ದೇನೆ. ಇದು ಅನುಬಂಧದ ಕಂಡಿಕೆ ೪ ಕೂಡ ಆಗಿರುವ ವರದಿಯ ಖಂಡ ೪ಕ್ಕೆ ಸಂಬಂಧಿಸಿದೆ. ತಾವು ಸೂಕ್ತ ಸಮಯದಲ್ಲಿ ಅದನ್ನು ಮಂಡಿಸಲು ನನಗೆ ಅವಕಾಶ ಮಾಡಿದರೆ ನಾನು ಉಪಕೃತ. ತಾವು ಈಗ ನಾನು ಅದನ್ನು ಮಂಡಿಸಲು ಅಪೇಕ್ಷಿಸಿದರೆ ನಾನು ಹಾಗೆ ಮಾಡಲು ತಯಾರಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಆಗಲಿ, ನೀವು ಅದನ್ನು ಮಂಡಿಸಬಹುದು.

**ಶ್ರೀ ರೋಹಿಣಿ ಕುಮಾರ ಚೌಧುರಿ** (ಅಸ್ಸಾಮ್ : ಸಾಮಾನ್ಯ) : ಮಾನ್ಯರೆ, ಆದೇಶ ಕಾಗದದಂತೆ ನಾವು ಮೊದಲು ಮೂಲಭೂತ ಹಕ್ಕುಗಳನ್ನು ಕುರಿತು ಚರ್ಚಿಸಬೇಕು ಮತ್ತು ಅನಂತರ ಯಾವುದೇ ಇತರ ವಿಷಯವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.

**ಮಾನ್ಯ ಸಭಾಧ್ಯಕ್ಷರು** : ನಾವು ಇದನ್ನು ಮೊದಲು ಚರ್ಚಿಸುತ್ತಿದ್ದೇವೆ.

**ಶ್ರೀ ದೇವಿಪ್ರಸಾದ್ ಖೈತಾನ್** : ಮಾನ್ಯರೆ, ನಾನು ಮಂಡಿಸುತ್ತೇನೆ :

"ಕಂಡಿಕೆ ೪ಕ್ಕೆ ಸಂಬಂಧಿಸಿದಂತೆ ವಿಧಾಯಕ ಸಭೆಯು, ಸ್ಥಾನಗಳ ಕಾರಣ ಮೀಸಲಿರಿಸದ ಸ್ಥಾನಗಳಿಗೆ ಸ್ಪರ್ಧಿಸುವ ಹಕ್ಕು ಹೊಂದಿರುವುದಿಲ್ಲ."

ಅನುಸೂಚಿತ ಜಾತಿಗಳ ಮತ್ತು ಮುಸ್ಲಿಮರ ಒಟ್ಟು ಜನಸಂಖ್ಯೆಯು ಒಟ್ಟಾರೆ ಜನಸಂಖ್ಯೆಯ ಸುಮಾರು ಅರ್ಧದಷ್ಟು ಎಂದು ತೋರಿಸುವ ಕೆಲವು ಅಂಕಿಅಂಶಗಳನ್ನು ನಾನು ಸಂಗ್ರಹಿಸಿದ್ದೇನೆ. ಈ ಅಂಕಿಅಂಶಗಳಿಗೆ ನಾನು ಬರ್ದವಾನ್ ವಿಭಾಗ, ಪ್ರೆಸಿಡೆನ್ಸಿ ವಿಭಾಗ ಮತ್ತು ಜಲಪಾಯ್‌ಗುರಿ ಹಾಗೂ ಡಾರ್ಜಿಲಿಂಗ್ ಜಿಲ್ಲೆಗಳದ್ದನ್ನೂ, ಪಶ್ಚಿಮ ಬಂಗಾಳಕ್ಕೆ ಸೇರಿಕೊಂಡ ಮುರ್ಷಿದಾಬಾದ್, ನಾಡಿಯಾ ಮತ್ತು ದಿನಾಜ್‌ಪುರದ ಅಂಕಿಅಂಶಗಳನ್ನೂ ಒಟ್ಟಿಗೆ ಸೇರಿಸಿದ್ದರೆ, ಅನುಸೂಚಿತ ಜಾತಿಗಳ ಮತ್ತು ಮುಸ್ಲಿಮರ ಒಟ್ಟು ಅಂಕಿಗಳು ಉಳಿದ ಜನಸಂಖ್ಯೆಗೆ ಇನ್ನೂ ಹೆಚ್ಚು ಪ್ರತಿಕೂಲವಿರುತ್ತದೆ. ಆದುದರಿಂದ ಮೀಸಲಿರಿಸುದುದರ ಪೈಕಿ ಇನ್ನೂ ಹೆಚ್ಚು ಸ್ಥಾನಗಳಿಗೆ ಮೀಸಲಾತಿಗಳನ್ನು ಮಾಡಲಾಗಿರುವ ಸಮುದಾಯಗಳಿಗೆ ಸ್ಪರ್ಧಿಸಲು ಅವಕಾಶ ಕೊಟ್ಟರೆ ಅದು ನ್ಯಾಯಯುತವಲ್ಲದ್ದು ಹಾಗೂ ಅಹಿತಕರವೂ ಆಗುತ್ತದೆ. ಅನುಸೂಚಿತ ಜಾತಿಗಳು ಹೊರತುಪಡಿಸಿ ಇಲ್ಲಿ ನೆನಪುಮಾಡಿಕೊಳ್ಳಬಹುದಾದೆಂದರೆ ಸಾರ್ವತ್ರಿಕ ಜನ ಸಂಖ್ಯೆಯು......

**ಶ್ರೀ ಎಚ್.ಜೆ. ಖಾಂಡೇಕರ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ಒಂದು ಕ್ರಿಯಾಲೋಪ ಕುರಿತು, ನಾವು ಅನುಸೂಚಿತ ಜಾತಿಗಳು ಹಿಂದೂ ಸಮುದಾಯದ ಒಂದು ಅವಿಭಾಜ್ಯ ಅಂಶವಾಗಿದೆ ಅಲ್ಪಸಂಖ್ಯಾತವಲ್ಲ ಎಂಬ ಒಂದು ಖಂಡವನ್ನು ನೆನ್ನೆ ಅಂಗೀಕರಿಸಿದ್ದೇವೆ. ಆದುದರಿಂದ ಸದ್ಯದ ತಿದ್ದುಪಡಿ ಮತ್ತು ಮಂಡನೆಕಾರರ ಮಾತು ಅನುಸೂಚಿತ ಜಾತಿಗಳನ್ನು ಒಂದು ಅಲ್ಪಸಂಖ್ಯಾತ ಮಾಡುತ್ತಿರುವುದು ಕ್ರಮವಲ್ಲ ಎಂದು ನನಗೆನಿಸುತ್ತದೆ.

**ಶ್ರೀ ದೇವಿ ಪ್ರಸಾದ್ ಖೈತಾನ್** : ಮಾನ್ಯರೆ, ನಾನು ಉಲ್ಲೇಖಿಸುತ್ತಿರುವುದು ಮೀಸಲಾತಿಗಳನ್ನು ಯಾರಿಗೆ ಮಾಡಲಾಗಿದೆಯೋ ಆ ಸಮುದಾಯಗಳ ಅಥವಾ ಒಂದು ಸಮುದಾಯದ ಒಂದು ಭಾಗ ಎಂಬುದನ್ನು ನಾನು ನಿವೇದಿಸುತ್ತಿದ್ದೇನೆ. ಅವರನ್ನು ಅಲ್ಪಸಂಖ್ಯಾತರೆಂದು ಕರೆಯಿರಿ ಅಥವಾ ಹಿಂದೂಗಳ ಒಂದು ಭಾಗ ಎನ್ನಿ ಸ್ಥಾನ ತೊಂದರೆಗೊಳಪಡುವುದೇ ಇಲ್ಲ. ನಾನು ಅನುಸೂಚಿತ ಜಾತಿಗಳಿಗೆ ಒಂದು ಗುರುತಿಸಲಾದ ಅಲ್ಪಸಂಖ್ಯಾತರು ಎಂದು ಹೇಳುತ್ತಿಲ್ಲ. ಆದರೆ ಮೀಸಲಾತಿ ಮಾಡಲಾಗಿರುವ ಹಿಂದೂ ಸಮುದಾಯದ ಆ ಭಾಗ ಎಂದು. ಆದುದರಿಂದ ನಾನು ಕ್ರಮ ತಪ್ಪಿಲ್ಲ ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ.

ಅನುಸೂಚಿತ ಜಾತಿಗಳು ಮತ್ತು ಮುಸ್ಲಿಮರನ್ನು ಲೆಕ್ಕಕ್ಕೆ ತೆಗೆದುಕೊಂಡ ಅನಂತರ ಸಾರ್ವತ್ರಿಕ ಜನಸಂಖ್ಯೆಯು ಸುಮಾರು ಅರ್ಧ ಇಲ್ಲವೆ ಅರ್ಧಕ್ಕಿಂತ ತುಸು ಹೆಚ್ಚು. ಮತ್ತು ಅನುಸೂಚಿತ ಜಾತಿಗಳು ಮತ್ತು ಮುಸ್ಲಿಮರು ಅವರ ಮೀಸಲಿರಿಸಿದ ಸ್ಥಾನಗಳನ್ನು ಪಡೆದ ಅನಂತರ ಸಾರ್ವತ್ರಿಕ ಜನಸಂಖ್ಯೆಯು ಬಂಗಾಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಭಾರತೀಯ ಕ್ರೈಸ್ತರಿಗೆ, ಬೌದ್ಧರಿಗೆ ಕೆಲವು ಸ್ಥಾನಗಳನ್ನು ಕೊಡಲು ಮತ್ತು ಮೀಸಲಾತಿಯನ್ನು ಈಗಾಗಲೇ ಪಡೆದಿರುವ ಆ ಸಮುದಾಯಗಳಿಗಿಂತ ಕೆಲವು ಹೆಚ್ಚು ಸ್ಥಾನಗಳು ಸೂಕ್ತವಾಗಿ ಸಿಗಬೇಕು ಎಂದು ನಿವೇದಿಸಲು ನಾನು ಉದ್ದೇಶಿಸಿದ್ದೇನೆ. ಈ ವಿಷಯದಲ್ಲಿ ಮತ್ತೆ ನಾವು ಗಮನ ಹರಿಸಬೇಕೆಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ. ಆದುದರಿಂದ ನಾನು ಈ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ ಮತ್ತು ನಾನು ಶ್ರೀ ಮುನ್ಷಿಯವರು ಪೂರ್ವ ಪಂಜಾಬ್ ಸಂದರ್ಭವನ್ನು ಪುನಃ ಪರಿಗಣನೆಗೆ ಮೀಸಲಿರಿಸಿದಂತೆ ಪಶ್ಚಿಮ ಬಂಗಾಳದ ವಿಷಯವನ್ನು ಈ ಸಂದರ್ಭಗಳಲ್ಲಿ ಮತ್ತೆ ಪರಿಗಣನೆಗಿರಿಸಬೇಕಾಗಿ ಶಿಫಾರಸು ಮಾಡುವರೆಂದು ನಂಬಿದ್ದೇನೆ. ನಾನು ಆ ಸಲಹೆಯನ್ನು ಒಪ್ಪಲು ಇಚ್ಛಿಸುತ್ತೇನೆ.

ಮಾನ್ಯರೆ, ನಾನು ಮಂಡಿಸುತ್ತೇನೆ.

(ಶ್ರೀ ಮೋಹನ್ ಲಾಲ್ ಸಕ್ಸೇನ ಮತ್ತು ಪ್ರೊ. ಶಿಬನ್‌ಲಾಲ್ ಸಕ್ಸೇನ ಅವರು ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಮಾನ್ಯ ಸಭಾಧ್ಯಕ್ಷರು :** ಇದೊಂದೆ ತಿದ್ದುಪಡಿಯನ್ನು ಮಾತ್ರ ಮಂಡಿಸಿರುವುದರಿಂದ ವಿಷಯ ಈಗ ಚರ್ಚೆಗೆ ಮುಕ್ತವಾಗಿದೆ.

**ಶ್ರೀ ಕೆ.ಎಮ್. ಮುನ್ಷಿ** (ಬಾಂಬೆ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಗೌರವಾನ್ವಿತ ಮಿತ್ರ ಶ್ರೀ ಖೈತಾನ್ ಅವರು ಮಂಡಿಸಿದ ತಿದ್ದುಪಡಿಯನ್ನು ನಾನು ಪಶ್ಚಿಮ ಬಂಗಾಳದ ಸಂದರ್ಭವನ್ನು ಹೊಸದಾಗಿ ಪರಿಗಣಿಸಬಹುದು ಎಂದು ಹೇಳಿದ್ದರಿಂದ ಮಂಡಿಸಲಾಯಿತು. ಮತ್ತು ಗೌರವಾನ್ವಿತ ವರದಿ ಮಂಡನೆಕಾರರು ಅದನ್ನು ಅದೇ ರೂಪದಲ್ಲಿಯೇ ಸ್ವೀಕರಿಸುವರೆಂದು ತಿಳಿದಿದ್ದೇನೆ. ಇದಕ್ಕೆ ಕಾರಣವೆಂದರೆ ನಿರ್ಣಯದ ಮಂಡನೆಕಾರರ ಮುಂದೆ ಇರಿಸಲಾದ ಹೊಸ ಪಶ್ಚಿಮ ಬಂಗಾಳಕ್ಕೆ ಅಂಕಿಗಳು ನಿಖರವಿರಲಿಲ್ಲ. ಅಂಕಿ ಅಂಶಗಳು ನಿಖರವೇ ಇಲ್ಲವೇ ಎಂಬುದಕ್ಕೆ ಕಡೇಪಕ್ಷ ತುಸು ಚರ್ಚೆ ಇರುತ್ತದೆ. ಈ ಅಂಕಿಗಳು ನಿಖರವಲ್ಲ ಎಂದಾದರೆ ಆಗ ಈ ಪ್ರಶ್ನೆ ಮುಂದೆ ಯಾವುದಾದರೂ ವಿಧದ ಪರಿಗಣನೆ ಬಯಸುತ್ತದೆ. ಸರಿ ಇಲ್ಲದ ಅಂಕಿಗಳನ್ನು ಕುರಿತು ಚರ್ಚೆಯೊಂದನ್ನು ಏಕೆ ತಳ್ಳಿ ಹಾಕಬೇಕು? ಆದುದರಿಂದ ಎಲ್ಲ ಅಂಕಿಗಳನ್ನು ಸೂಕ್ತವಾಗಿ ಸಂಗ್ರಹ ಮಾಡಿದಾಗ ಪರಿಗಣಿಸಬೇಕಾದ ಪಶ್ಚಿಮ ಬಂಗಾಳದ ವಿಷಯವನ್ನು ಮುಂದೆ ಹಾಕುವುದು ಸೂಕ್ತ ಎಂದೆನಿಸುತ್ತದೆ. ಈ ತಿದ್ದುಪಡಿಯ ಇಡೀ ಉದ್ದೇಶ ಅದೇ. ಅದು ಇಡೀ ಭಾರತಕ್ಕೆ ಸಂಬಂಧಿಸಿದಂತೆ ಖಂಡ ೪ರ ವಿಷಯವಾಗಿ ಯಾವುದೇ ಬದಲಾವಣೆಗೆ ಕೋರುವುದಿಲ್ಲ; ಏನೆಂದರೆ ಪೂರ್ವ ಪಂಜಾಬ್ ಸಂದರ್ಭವನ್ನು ಪರಿಗಣನೆಗೆ ಸ್ವೀಕರಿಸಿದಂತೆ ಪಶ್ಚಿಮ ಬಂಗಾಳದ ಸಂದರ್ಭವನ್ನು ಹೊಸದಾಗಿ ಪರಿಗಣಿಸಬಹುದು ಎಂದಷ್ಟೆ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈಗ ತಾನೆ ಮಂಡಿಸಿದ ತಿದ್ದುಪಡಿ ಸಂಬಂಧವಾಗಿ ನಾನು ಕೆಲವು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಅಲ್ಪಸಂಖ್ಯಾತರ ಸಮಿತಿಯ ವರದಿಯಲ್ಲಿ ಮೈದಾಳಿರುವ ಉದ್ದೇಶವನ್ನು ನಿಷ್ಫಲಗೊಳಿಸುವುದು ಅಥವಾ ನಿರರ್ಥಕಗೊಳಿಸುವುದು ಈ ತಿದ್ದುಪಡಿಯ ಉದ್ದೇಶವಲ್ಲ ಎಂದು ಈ ಸದನಕ್ಕೂ ಮತ್ತು ವಿಶೇಷವಾಗಿ ಅನುಸೂಚಿತ ಜಾತಿಗಳ ಮತ್ತಿತರ ಅಲ್ಪಸಂಖ್ಯಾತ ವರ್ಗದ ನನ್ನ ಗೆಳೆಯರಿಗೆ ಹೇಳಲು ಇಷ್ಟಪಡುತ್ತೇನೆ. ಆದರೆ ಸದನವು ಅದೇ ಸಮಯಕ್ಕೆ ದೇಶದ ವಿಭಜನೆಯಿಂದಾಗಿ, ಇಂದು ಪಶ್ಚಿಮ ಬಂಗಾಳ ಮತ್ತು ಪೂರ್ವ ಪಂಜಾಬ್‌ಗಳ ಸ್ಥಿತಿ ಭಾರತದ ಉಳಿದ ಭಾಗಗಳಿಗಿಂತ ಸಂಪೂರ್ಣ ಭಿನ್ನ ಮತ್ತು ವಿಶೇಷವಾಗಿ ಹಲವು ವಿಷಯಗಳಲ್ಲಿ ರಾಷ್ಟ್ರೀಯ ತೀರ್ಪಿನಿಂದ ಬದಲಾಗುವ ರ್‍ಯಾಡ್‌ಕ್ಲಿಫ್ ತೀರ್ಪಿನ ಅನಂತರ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಬಂಗಾಳದ ಬಹುತೇಕ ಸದಸ್ಯರು ಇಲ್ಲಿ ಮತ್ತು ಈಗ ಖಚಿತವಾಗಿ ಫಲಿತಾಂಶವೇನು ಮತ್ತು ಈಗ ಪಶ್ಚಿಮ ಬಂಗಾಳದ ಜನಸಂಖ್ಯೆ ಏನು ಎಂಬುದು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿಲ್ಲ. ನಾವು ಇಲ್ಲಿ ಹೇಳಿರುವುದರೊಂದಿಗೆ ರ್‍ಯಾಡ್‌ಕ್ಲಿಫ್ ತೀರ್ಪಿನಲ್ಲಿ ಇರುವ ಹೇಳಿಕೆಗಳೊಂದಿಗೆ ಹೋಲಿಸಿದರೆ, ಅಂಕಿಗಳ ವಿಷಯದಲ್ಲಿ ಗಣನೀಯ ಭಿನ್ನತೆ ಇರುವುದು ಕಾಣುತ್ತೇವೆ. ರ್‍ಯಾಡ್‌ಕ್ಲಿಫ್ ತೀರ್ಪಿನಡಿ ಈಗ ಪಶ್ಚಿಮ ಬಂಗಾಳದ ಜನಸಂಖ್ಯೆ ಏನು ಎಂಬುದು ನಿಖರವಾಗಿ ಯಾರಿಗೂ ತಿಳಿದಿಲ್ಲ. ಆದುದರಿಂದ ಈಗಲೇ ಒಂದು ನಿರ್ಧಾರಕ್ಕೆ ಭಾಗಿಯಾಗುವ ಬದಲು, ಸದ್ಯ ನಾವು ನಮ್ಮ ಆಲೋಚನೆ ನಿಲ್ಲಿಸಿ, ಪಶ್ಚಿಮ ಬಂಗಾಳ ಮತ್ತು ಪೂರ್ವ ಪಂಜಾಬ್‌ಗಳಿಂದ ಹೊಸದಾಗಿ ರೂಪಿಸಿರುವ ಪ್ರಾಂತ್ಯಗಳು ಕುರಿತಂತೆ ಸಂಪೂರ್ಣ ಅಂಕಿಅಂಶಗಳನ್ನು ಪಡೆದಾಗ, ಅವರ ವಿಷಯವನ್ನು ಸೂಕ್ತ ರೀತಿಯಲ್ಲಿ ನಿರ್ಧರಿಸುವ ಸ್ಥಿತಿಯಲ್ಲಿರುತ್ತೇವೆ ಎನ್ನಬಹುದು. ಪೂರ್ವ ಪಂಜಾಬ್ ವಿಷಯದಲ್ಲಿ ಸದನವು ಈಗಾಗಲೇ ಈ ಸಲಹೆಯನ್ನು ಅಂಗೀಕರಿಸಿದೆ. ನಾವೀಗ ಸದನವು ನಮ್ಮೊಂದಿಗೆ ಸಹಕರಿಸಬೇಕು ಹಾಗೂ ಕೆಲವೇ ದಿನಗಳಲ್ಲಿ ನಮಗೆ ದೊರೆಯಬಹುದಾದ ಎಲ್ಲ

ಲಭ್ಯ ಮಾಹಿತಿಗಳೊಂದಿಗೆ ಪಶ್ಚಿಮ ಬಂಗಾಳದ ವಿಷಯವನ್ನು ಸಂಪೂರ್ಣವಾಗಿ ಮತ್ತು ಜಾಗರೂಕವಾಗಿ ಪರಿಗಣಿಸಬಹುದು ಎಂದು ನಿವೇದಿಸಿಕೊಳ್ಳುತ್ತಿದ್ದೇವೆ. ನಾನು ಸದನಕ್ಕೆ ರ್‍ಯಾಡ್‌ಕ್ಲಿಫ್ ತೀರ್ಪು ತರ್ಕಹೀನ ಮತ್ತು ಮನಸ್ವೀಯಾಗಿದ್ದು ಕೆಲವು ವಿಷಯಗಳಲ್ಲಿ ವ್ಯಕ್ತಿಗಳ ದೇಶೀಯ ಗೃಹಕೃತ್ಯ ಸಾಧನಗಳು ಭಾರತೀಯ ಒಕ್ಕೂಟದಲ್ಲಿವೆಯಾದರೆ ಅದೇ ಅವರ ಬೆಲೆಯುಳ್ಳ ಜಮೀನುಗಳು ಪಾಕಿಸ್ತಾನದಲ್ಲಿವೆ ಎಂದು ಹೇಳಬಹುದಾಗಿದೆ. ಆದುದರಿಂದ ನಾವು ಪಾಕಿಸ್ತಾನ ಅಥವಾ ಭಾರತೀಯ ಒಕ್ಕೂಟ ಎಂದು ನಮೂದಿಸಲಾದ ಪದವನ್ನು ಸಹಜವಾಗಿ ನೋಡಿದಾಗ ಅವು ಯಾವ ಪ್ರದೇಶ ಎಂದು ತಿಳಿಯುವ ಸ್ಥಿತಿಯಲಿಲ್ಲ. ಪಾಕಿಸ್ತಾನದಲ್ಲಿ ಯಾವ ಭಾಗ ಮತ್ತು ಹಿಂದೂಸ್ತಾನದಲ್ಲಿ ಯಾವ ಭಾಗ ಮತ್ತು ಎರಡೂ ಭಾಗದಲ್ಲಿ ಸಂಗತ ಜನಸಂಖ್ಯೆ ಏನು ಎಂಬುದನ್ನು ನಾವು ತಿಳಿದಿಲ್ಲ. ಈ ಎಲ್ಲ ಪರಿಗಣನೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಬಂಧಪಟ್ಟ ಎಲ್ಲ ಪಕ್ಷಗಳಿಗೂ ನ್ಯಾಯ ಕೊಡುವಲ್ಲಿ ಪಶ್ಚಿಮ ಬಂಗಾಳದ ಪ್ರಶ್ನೆಯು ಪ್ರಸಕ್ತದಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಕಾಣುತ್ತಿದೆ ಎಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ. ಪ್ರಸಕ್ತ ನಿಲುವಳಿಯಲ್ಲಿ ಇದಿಷ್ಟೇ ಬೇಡಿಕೆ ಇರುವುದು. ನಾವು ಅಂಗೀಕರಿಸಿರುವ ಸಿದ್ಧಾಂತದಿಂದ ಹಿಂದಕ್ಕೆ ಹೋಗುವ ಭಾವನೆ ಇಲ್ಲ. ಈ ಕೆಲವು ಮಾತುಗಳೊಂದಿಗೆ ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ನಾನು ಈ ಸೂಕ್ಷ್ಮ ಪ್ರಶ್ನೆ ಕುರಿತಂತೆ ಯಾವುದೇ ವಿವಾದ ಎಬ್ಬಿಸುವಂಥ ಯಾವುದನ್ನೂ ಹೇಳಲು ಇಷ್ಟಪಡುವುದಿಲ್ಲ. ವಿಷಯ ಕುರಿತ ಕೆಲವು ವಿಷಯಗಳನ್ನು ಸದನದ ಗಮನಕ್ಕೆ ತರಲು ಮಾತ್ರ ಬಯಸುತ್ತೇನೆ ಮತ್ತು ನಾನು ವರದಿಯ ಗೌರವಾನ್ವಿತ ಮಂಡನೆಕಾರರು ಅವನ್ನು ದಯಮಾಡಿ ಪರಿಗಣಿಸುತ್ತಾರೆ ಎಂದು ಆಶಿಸುತ್ತೇನೆ; ಆದರೆ ಈ ಸದನದ ಏನೇ ನಿರ್ಧಾರ ಇರಬಹುದು ಅವನ್ನು ನಿಷ್ಠೆಯಿಂದ ಮತ್ತು ಹರ್ಷದಿಂದ ಸ್ವೀಕರಿಸಲಾಗುವುದು.

ಮಾನ್ಯರೆ, ಈ ತಿದ್ದುಪಡಿಯ ಪರಿಣಾಮವೆಂದರೆ ಈಗ ಒಂದು ಪ್ರತ್ಯೇಕ ವರ್ಗ ಎಂದು ಭಾವಿಸಲಾಗಿರುವ ಅನುಸೂಚಿತ ಜಾತಿಗಳನ್ನು ಹೊರತುಪಡಿಸಿ, ಪಶ್ಚಿಮ ಬಂಗಾಳದಲ್ಲಿ ಕೆಲವು ಅಲ್ಪಸಂಖ್ಯಾತರು ಮೀಸಲಿರಿಸದ ಸ್ಥಾನಗಳಿಗೆ ಸ್ಪರ್ಧಿಸುವ ಭಾವನಾತ್ಮಕ ಹಕ್ಕನ್ನು ಅಥವಾ ಅನುಕೂಲವನ್ನು ಕಳೆದುಕೊಳ್ಳುತ್ತೇವೆ ಎಂದು ಭಾವಿಸಿರುತ್ತಾರೆ. ಮೀಸಲಿರಿಸದ ಸ್ಥಾನಗಳಿಗೆ ಸ್ಪರ್ಧಿಸಲು ಅಲ್ಪಸಂಖ್ಯಾತರಿಗೆ ಹಕ್ಕನ್ನು ಒದಗಿಸುವಲ್ಲಿ ಮುಖ್ಯ ವಿಷಯವೆಂದರೆ, ಅವರಿಗೆ ಆದಷ್ಟೂ ಶೀಘ್ರವಾಗಿ ಸ್ಥಾನಗಳ ಮೀಸಲಾತಿಯ ಸವಲತ್ತುಗಳನ್ನು ಬಿಟ್ಟುಬಿಡಲು ಪ್ರೇರೇಪಿಸುವುದೆಂದು ನನಗೆ ತೋರುತ್ತದೆ. ಹಾಗೆ ನೋಡಿದರೆ, ಮೀಸಲಾತಿ ಇಲ್ಲದಿದ್ದಿದ್ದರೆ, ಆಗಿನ ಸ್ಥಿತಿ, ಬಹುಸಂಖ್ಯಾತ ಸಮುದಾಯ ಅವರಿಗೆ ಒಲವು ತೋರಿದರೆ ಮಾತ್ರ ಈಗ ಇರುವುದಕ್ಕಿಂತ, ಕೆಲವು ಚುನಾವಣಾ ಕ್ಷೇತ್ರಗಳಲ್ಲಿ ಅವರು ಹೆಚ್ಚು ಸ್ಥಾನಗಳನ್ನು ಪಡೆಯಬಹುದಾಗಿರುತ್ತದೆ. ಹಾಗಾಗಿ ಅಲ್ಪಸಂಖ್ಯಾತರು ಮೀಸಲಾತಿಯ ತಮ್ಮ ಹಕ್ಕು ಸಾಧನೆ ಬಿಡಬೇಕೆಂಬ ಒಂದು ಪ್ರೇರಣೆ ನೀಡಿದಂತಾಗುತ್ತಿದೆ. ಮತ್ತೆ ಹಿಂದೂಗಳು ಪಶ್ಚಿಮ ಬಂಗಾಳದಲ್ಲಿ ಒಂದು ದೊಡ್ಡ ಬಹುಸಂಖ್ಯಾತರಿದ್ದು, ಅವರು ಮೀಸಲಿರಿಸದ ಸ್ಥಾನಕ್ಕೆ ಅಲ್ಪಸಂಖ್ಯಾತ ವರ್ಗದ ಒಬ್ಬ ಹೆಚ್ಚುವರಿ ಸದಸ್ಯರನ್ನು ಚುನಾಯಿಸುವ ಆಯ್ಕೆ ಹೊಂದಿರುತ್ತಿದ್ದರು. ಅದು ಪೂರಾ ಅವರ ಕೈಗಳಲ್ಲೆ ಇರುವಂಥದು. ಆದುದರಿಂದ ತಿದ್ದುಪಡಿ ಆ ನಿಬಂಧನೆಯ ಸನ್ನಿವೇಶವನ್ನು ಕಸಿದುಕೊಳ್ಳಲು ನೋಡುತ್ತದೆ. ಮೂಲ ಕಂಡಿಕೆಯನ್ನು ಈ ತಿದ್ದುಪಡಿ ಮಾಡಿ ಸ್ವೀಕರಿಸುವುದಕ್ಕಿಂತ ಅದು ಇರುವಂತೆಯೇ ಇಟ್ಟುಕೊಳ್ಳುವುದು ಉತ್ತಮ ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ. ಆದರೆ ಇದಕ್ಕೆ ಸಂಬಂಧಿಸಿದಂತೆ ಅದನ್ನೆ ಪರಿಗಣಿಸಲು ಗೌರವಾನ್ವಿತ ಸರ್ದಾರ್ ಪಟೇಲ್ ಅವರನ್ನು ಕೇಳಿಕೊಳ್ಳಲು ಮಾತ್ರ ನಾನು ನನ್ನ ನಿವೇದನೆ ಮಾಡುತ್ತಿದ್ದೇನೆ.

ಅಲ್ಪಸಂಖ್ಯಾತರಿಗೆ ಸಂಬಂಧಿಸಿದಂತೆ, ಈಗ ಒಂದು ಕ್ಷಣದ ಹಿಂದೆ ನಾನು ಎತ್ತಿ ಹೇಳಿದಂತೆ ಅನುಸೂಚಿತ ಜಾತಿಗಳು ಈಗ ಒಟ್ಟಾರೆ ಒಂದು ವಿಭಿನ್ನ ವರ್ಗವಾಗಿ ರೂಪುಗೊಂಡಿದ್ದಾರೆ. ಪ್ರಾಯೋಗಿಕವಾಗಿ,

ತಿದ್ದುಪಡಿಯಿಂದ ಉಳಿಯುವ ಮತ್ತು ಬಾಧೆಗೊಳಗಾಗುವ ಒಂದೇ ಅಲ್ಪಸಂಖ್ಯಾತ ವರ್ಗವೆಂದರೆ ಮುಸ್ಲಿಮ್ ಸಮುದಾಯ. ಹಿಂದೂಗಳು ಒಂದು ವೇಳೆ ಒಬ್ಬ ಮುಸ್ಲಿಮನನ್ನು ಹರ್ಷದಿಂದ ಒಂದು ಹೆಚ್ಚುವರಿ ಸ್ಥಾನಕ್ಕೆ ಆಯ್ಕೆಮಾಡುವುದಾದಲ್ಲಿ ಅದನ್ನು ಪೂರ್ಣವಾಗಿ ಅವರೇ ಅದನ್ನು ಹೇಳಬಹುದು ಮತ್ತೂ ಅವರು ಆತನನ್ನೇ ರಾಷ್ಟ್ರೀಯತಾ ಕಾರಣಗಳಿಗಾಗಿ ಅಥವಾ ದಕ್ಷತೆ ಇತ್ಯಾದಿ ಕಾರಣಗಳಿಗಾಗಿ ಆಯ್ಕೆಮಾಡಲೇಬೇಕು ಎಂದು ಆಲೋಚಿಸಿದರೆ ಅದು ಅವರ ವ್ಯವಹಾರ. ಅವರು ಒಂದು ಮೀಸಲಿರಿಸದ ಸ್ಥಾನಕ್ಕೆ ಹೆಚ್ಚುವರಿಯಾಗಿ ಒಬ್ಬ ಮುಸ್ಲಿಮನನ್ನು ಆಯ್ಕೆಮಾಡುವುದಿಲ್ಲ ಎಂದು ಆಲೋಚಿಸಿದರೆ, ಅವರು ಸದಾ ಹಾಗೆ ಮಾಡಬೇಕಾಗಬಹುದು. ಆದರೆ ನಾನು ಮತದಾರರ ಸಮುದಾಯದ ಹಕ್ಕನ್ನು ಸಂಪೂರ್ಣವಾಗಿ ಪರಾಮರ್ಶಿಸದೇ ಬಿಡಬೇಕಾಗುತ್ತದೆ ಮತ್ತು ಶಾಸನಬದ್ಧ ನಿಷೇಧವನ್ನು ಉಪಕ್ರಮಿಸಬಾರದು ಎಂದು ನಾನು ಆಲೋಚಿಸುತ್ತೇನೆ. ನಾನು ಉನ್ನತ ನೀತಿಯ ತಾತ್ತ್ವಿಕ ಹಿನ್ನೆಲೆಯಲ್ಲಿ ಮಾತನಾಡುತ್ತೇನೆ ಒಂದೋ ಅಥವಾ ಎರಡೋ ಸ್ಥಾನಗಳನ್ನು ಪಡೆದುಕೊಳ್ಳುವ ಅಥವಾ ಕಳೆದುಕೊಳ್ಳುವಂಥ ಸಂಕುಚಿತ ಆಧಾರದ ಮೇಲಲ್ಲ ಅಲ್ಪಸಂಖ್ಯಾತರಿಗೆ ಭಾವನಾತ್ಮಕ ಇಂಗಿತ ಸೂಚನೆ ಎಂಬುದು ಸಂಗತಿ. ಸುದೀರ್ಘ ರಾಜಕಾರಣದ ದೃಷ್ಟಿಯಿಂದ ತುಂಬ ಜಾಗರೂಕತೆಯಿಂದ ಪರಿಗಣನೆಗೆ ಮಾಡಬೇಕಾದಂಥ ಸನ್ನಿವೇಶ ಇದಾಗಿದೆ.

**ಶ್ರೀ ಉಪೇಂದ್ರನಾಥ್ ಬರ್ಮನ್** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈ ಪ್ರಸ್ತಾವವನ್ನು ವಿರೋಧಿಸುವ ಯಾವ ಉದ್ದೇಶ ನನಗಿರಲಿಲ್ಲ. ಆದರೆ ನಾನು ಸದನದ ಮುಂದೆ ಇಂದು ಎದ್ದು ನಿಲ್ಲಬೇಕಿದೆ. ಏಕೆಂದರೆ, ನಿರ್ಣಯದ ಮಂಡನೆಕಾರರಿಂದ ಮಾಡಲಾದ ಕೆಲವು ಅವಲೋಕನಗಳು. ಅವರು ರಾಡ್‌ಕ್ಲಿಫ್ ತೀರ್ಪು ಮತ್ತು ಬಂಗಾಳದ ವಿಭಜನೆ ಅನಂತರ, ಪಶ್ಚಿಮ ಬಂಗಾಳವು ಅನುಸೂಚಿತ ಸಮುದಾಯ ಮತ್ತು ಮುಸ್ಲಿಮ್ ಸಮುದಾಯಗಳು ಬಹುಮಟ್ಟಿಗೆ ಜನಸಂಖ್ಯೆಯ ಶೇಕಡಾ ೫೦ ರಷ್ಟನ್ನು ಅಥವಾ ನಿಖರವಾಗಿ ಶೇಕಡಾ ೫೦ರಷ್ಟನ್ನು ಹೊಂದಿರುತ್ತದೆ ಎಂದು ಪರೋಕ್ಷವಾಗಿ ತಿಳಿಸಿದ್ದಾರೆ. ಆದುದರಿಂದ ಅವರು ಈ ವಿಷಯವನ್ನು ಮುಂದೂಡಿ ಒಂದು ಸಮಿತಿ ನೇಮಕಮಾಡಬೇಕೆಂದು ಬಯಸುತ್ತಾರೆ. ನನ್ನ ನಿವೇದನೆ ಎಂದರೆ, ಇದು ಯಾವುದನ್ನು ನಾವೆಲ್ಲ ಇಷ್ಟೂಕಾಲ ಒಟ್ಟಿಗೆ ಮುಕ್ತಿಗೊಳಿಸಲು ಪ್ರಯತ್ನಿಸುತ್ತಿದ್ದೆವೊ ಆ ಅನುಸೂಚಿತ ಜಾತಿಗಳ ಮೇಲಿನ ಪರಿಣಾಮ. ನಾವು ಅನುಸೂಚಿತ ಜಾತಿಗಳು ಹೊರಗಿನಿಂದ ಮಾತ್ರವಲ್ಲದೆ ಕಾಂಗ್ರೆಸ್‌ನ ಸದಸ್ಯರಾಗಿಯೂ ಈ ಸಂವಿಧಾನದ ರಚನೆಗಾಗಿ ತುಂಬುಹೃದಯದಿಂದ ಸೇರಿದ್ದೇವೆ. ಏಕೆಂದರೆ ನಮ್ಮ ಅವಲಂಬನೆಯ ಈ ಅವಧಿಯಲ್ಲಿ ನಮ್ಮ ಕುಂದುಕೊರತೆಗಳು ಏನೇ ಇರಬಹುದಾದರೂ ನಮ್ಮ ದುರದೃಷ್ಟ ಅವಧಿಯ ಕಾಲದಲ್ಲಿ ಏನೆಲ್ಲ ಅಪರಾಧಗಳನ್ನು ನಾವು ಒಳಸೇರಿಸಿಕೊಂಡಿದ್ದರೂ, ನಮ್ಮ ರಾಜ್ಯದಲ್ಲಿಯೇ ಅದರಲ್ಲೂ ವಿಶೇಷವಾಗಿ ಬಂಗಾಳದಲ್ಲಿ ಜನಿಸಿದ ವಿವೇಕಾನಂದ ಮತ್ತು ರವೀಂದ್ರನಾಥ ಠಾಗೂರ್ ಅಂಥವರು ಭಾರತವು ಪುನಃಶ್ಚೇತನಗೊಳ್ಳುವುದೆಂಬ ನಂಬಿಕೆ ಹಾಗೂ ಚೇತರಿಕೆಯ ನಿರೀಕ್ಷೆಗಳು ನಮ್ಮಲ್ಲಿ ಉಂಟಾಗುವಂತೆ ಸ್ಫೂರ್ತಿಸಿದ್ದಾರೆ ಎಂದು ನಾವು ಬಲ್ಲೆವು. ಈಗ ಈ ಸಂವಿಧಾನ ರಚನಾಸಭೆಗಳಲ್ಲಿ ಮತ್ತು ಹಲವಾರು ಸಮಿತಿಗಳಲ್ಲಿ ಪಾಲ್ಗೊಳ್ಳುತ್ತಿರುವ ನನ್ನಲ್ಲಿ ಭಾರತದ ಎಲ್ಲ ಪ್ರತಿಭೆಗಳು ಅಗತ್ಯದ ಕಾಲದಲ್ಲಿ ದೇಶವನ್ನು ಕೈಬಿಟ್ಟಿಲ್ಲ ಎಂಬ ದೃಢ ನಂಬಿಕೆ ನನಗೆ ಇದೆ. ನಾನು ಸದ್ಯದ ಕಾಲದಲ್ಲಿ ಬಹುಸಂಖ್ಯಾತ ಸಮುದಾಯ ಎಂದು ಕರೆಯುತ್ತಿರುವ ಸಮುದಾಯದ ಬುದ್ಧಿವಂತಿಕೆಯಲ್ಲಿ ನಾವು ಸಂಪೂರ್ಣ ವಿಶ್ವಾಸ ಹೊಂದಿದ್ದೇವೆ.

ಮಾನ್ಯರೆ, ಅತ್ಯಂತ ದೂರದೃಷ್ಟಿಯನ್ನು ಹಾಗೂ ವಿವೇಕಪೂರ್ಣ ವಿಚಾರಗಳನ್ನುಳ್ಳ ಕಾಂಗ್ರೆಸ್ ಸಂಸ್ಥೆಯು, ಪ್ರಾಮಾಣಿಕತೆಯಿಂದ ಹಾಗೂ ಅತ್ಯಂತ ಉತ್ಸಾಹದಿಂದ ದೃಢ ನಿರ್ಧಾರ ಕೈಗೊಳ್ಳುವ ಜನರ ನೆರವಿನಿಂದ ಸ್ವಾತಂತ್ರ್ಯವನ್ನು ಗಳಿಸಿತು. ಅವರು, ತಮ್ಮ ಕೈಗಳಲ್ಲಿ ಸರ್ಕಾರದ ಆಡಳಿತಾಧಿಕಾರ ತೆಗೆದುಕೊಂಡಿರುವ ಅವರ ನಿಷ್ಪಕ್ಷಪಾತ ಆಡಳಿತದಲ್ಲಿ ನಮಗೆ ಪೂರಾ ವಿಶ್ವಾಸವಿದೆ ಮತ್ತು ಅವರು ಭಾರತಕ್ಕೆ ಚೈತನ್ಯ ತುಂಬಿ ರಾಷ್ಟ್ರಗೌರವವನ್ನು ಎತ್ತಿ ಹಿಡಿದು ಭಾರತವು ಅತ್ಯುನ್ನತ ಸ್ಥಾನವನ್ನು ಪಡೆದುಕೊಳ್ಳುವಂತೆ ಮಾಡುವಲ್ಲಿ ಅವರು

ತಮ್ಮ ಕರ್ತವ್ಯವನ್ನು ಖಂಡಿತವಾಗಿ ನೆರವೇರಿಸುತ್ತಾರೆ ಎಂಬ ಸಂಪೂರ್ಣ ವಿಶ್ವಾಸ ನಮಗೆ ಇದೆ. ಆದರೆ ಅಂತಹ ಒಂದು ಕಾಲದಲ್ಲಿ ಬಂಗಾಳದಿಂದ ಬಂದಿರುವ ನನ್ನ ಗೆಳೆಯರಲ್ಲಿ ಒಬ್ಬರು ಮಾತನಾಡುತ್ತಾ ಹೋದರೆ, ದುರದೃಷ್ಟವಶಾತ್ ಅವರ ಮಾತುಗಳು ನಮ್ಮನ್ನು ನೋಯಿಸುತ್ತವೆ. ಆದುದರಿಂದ ನಾನು ಅವರಿಗೆ ವಿಶ್ವಾಸವನ್ನು ಗಳಿಸುವ ದಾರಿ ಇದಲ್ಲ ಎಂದು ನೆನಪು ಮಾಡಿಕೊಡುವುದು ನೋವಿನ ಕರ್ತವ್ಯವಾಗಿದೆ. ಮಾನ್ಯರೆ, ತಾವು ತಾನೇ ಏನು ಮಾಡಬೇಕೆಂದಿರುವಿರಿ? ಪಶ್ಚಿಮ ಬಂಗಾಳದ ಇಡೀ ಸ್ಥಿತಿಯನ್ನು ಗಮನಿಸಲು ಈ ವಿಷಯವನ್ನು ಮುಂದಿನ ದಿನವೊಂದಕ್ಕೆ ಒಯ್ಯಲು ನನ್ನದೇನೂ ಆಕ್ಷೇಪಣೆ ಇಲ್ಲ. ನಾವು ಬಹುಶಃ ಅಲ್ಪಸಂಖ್ಯಾತ ಸಮಿತಿಯ ನಿರ್ಧಾರಕ್ಕನುಗುಣವಾಗಿ ಅಳವಡಿಸಬೇಕೆಂದಿರುವ ಈ ವಿಧಾಯಕಸಭೆಯ ನಿರ್ಧಾರವು ಅಂದರೆ ಯಾರ ಮೇಲೆ ಬಹಳಷ್ಟು ಜವಾಬ್ದಾರಿ ಹೊರಿಸಬೇಕೆಂದಿದೆಯೋ ಅದೇ ನಿರ್ಧಾರಕ್ಕೆ ಬರುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ಆದರೆ ಬಂಗಾಳದಿಂದ ಇನ್ನೂ ಕೆಲವು ಗೆಳೆಯರು ತಮ್ಮ ನಿರ್ಧಾರವನ್ನು ಪುನಃ ಪರಿಗಣಿಸಬೇಕು ಎಂದು ಆಲೋಚಿಸಿದ್ದಾರೆ. ಅದಕ್ಕೆ ನನ್ನ ಆಕ್ಷೇಪಣೆ ಏನೂ ಇಲ್ಲ. ಅದೂ ಅಲ್ಲದೆ, ಈ ರ್‍ಯಾಡ್‌ಕ್ಲಿಫ್ ತೀರ್ಪು ಮತ್ತು ಬಂಗಾಳ ವಿಭಜನೆ ಅನಂತರ ಮುಸ್ಲಿಮರು ಅಲ್ಪಸಂಖ್ಯಾತರಾಗಿರುವರು; ಅದರ ಬಗ್ಗೆ ಸಂಪೂರ್ಣವಾಗಿ ಯಾವುದೇ ಅನುಮಾನವೂ ಇಲ್ಲ. ಮೀಸಲಿರಿಸಿದ ಸ್ಥಾನಗಳನ್ನು ಬಿಟ್ಟು ಉಳಿದ ಯಾವುದೇ ಸ್ಥಾನ ಕುರಿತು ನಾನು ಒಂದು ಕ್ಷಣವೂ ಚಿಂತಿಸುವುದಿಲ್ಲ. ಏಕೆಂದರೆ, ಮೀಸಲಿರಿಸಿದ ಸ್ಥಾನಗಳಲ್ಲಿ ಅಲ್ಪಸಂಖ್ಯಾತರು ಗೆಲವು ಸಾಧಿಸಬೇಕಾದರೆ ಬಹುಸಂಖ್ಯಾತರ ಅಂದರೆ, ಜಾತಿ ಹಿಂದೂಗಳ ಮತಗಳನ್ನು ಅವಲಂಬಿಸಬೇಕು ಎಂಬುದನ್ನು ನಾನು ಚೆನ್ನಾಗಿ ಬಲ್ಲೆ. ನಮ್ಮ ಗೌರವಾನ್ವಿತ ನಾಯಕರು ನಮಗೆ ಆಗಿಂದಾಗ್ಗೆ ಹೇಳಿರುವ ಮಾತೆಂದರೆ ಹಿಂದೂ ಸಮುದಾಯದೊಳಗೆ ಇರುವ ಈ ದೋಷ ಎಂದರೆ, ಭಾರತವು ಒಂದು ರಾಷ್ಟ್ರವಾಗಿ ಉದಯಿಸಬೇಕಾದರೆ ಅನುಸೂಚಿತ ಜಾತಿಗಳು ಎಂಬ ಭಾವನೆ ಹೋಗಲೇಬೇಕು ಎಂದು ಹೇಳಿದ್ದಾರೆ. ನಾನು ಆ ಅಭಿಪ್ರಾಯವನ್ನು ಪೂರಾ ಸಮರ್ಥಿಸುತ್ತೇನೆ. ಆದರೆ ನನ್ನ ನಿವೇದನೆ ಎಂದರೆ ಮಧ್ಯಾವಧಿಯಲ್ಲಿ ಎಲ್ಲಿವರೆಗೆ ತಾರತಮ್ಯ ಇರುತ್ತದೆಯೋ ಆವರೆಗೆ ಅನುಸೂಚಿತ ಜಾತಿಗಳು, ಬಹುಸಂಖ್ಯಾತ ಸಮುದಾಯವನ್ನು ಅವಲಂಬಿಸುತ್ತದೆ. ಆದುದರಿಂದ ಮೀಸಲಿರಿಸಿದ ಸ್ಥಾನಗಳ ಹೊರಗೆ ಯಾವುದಾದರೂ ಸಂದರ್ಭದಲ್ಲಿ ಯಾವುದೇ ಅನುಸೂಚಿತ ಜಾತಿ ಸದಸ್ಯನು ಅಥವಾ ಒಬ್ಬ ಮುಸ್ಲಿಮ್ ಸದಸ್ಯನು ಒಂದು ಸ್ಥಾನಕ್ಕೆ ಸ್ಪರ್ಧಿಸಬೇಕಾದರೆ ಅವನು ದೊಡ್ಡ ಸಮುದಾಯದ ಸಹಾನುಭೂತಿ ಮತ್ತು ವಿಶ್ವಾಸವನ್ನು ಅವಲಂಬಿಸಬೇಕು. ಆದುದರಿಂದ ನನ್ನ ದೃಷ್ಟಿಯಲ್ಲಿ, ನಾನು ಮೀಸಲು ಸ್ಥಾನಗಳ ಹೊರಗೆ, ಯಾವುದೇ ಸ್ಥಾನಕ್ಕೆ ಅನುಸೂಚಿತ ಜಾತಿಗಳು ಸ್ಪರ್ಧಿಸಲು ಅವಕಾಶ ನೀಡಬೇಕಾಗುತ್ತದೆ ಎಂದು ಹೇಳುವುದಿಲ್ಲ ಆದರೆ ಒಂದು ಸಿದ್ಧಾಂತದ ವಿಷಯವಾಗಿ, ತಾವು ಉಳಿದ ಪ್ರಾಂತ್ಯಗಳಿಗೂ ಸಿದ್ಧಾಂತ ಒಪ್ಪುವುದಾದರೆ, ಈ ಉದಾತ್ತ ಸಭೆಯು, ಬಂಗಾಳದ ಸಂದರ್ಭದಲ್ಲಿ ಅಥವಾ ಯಾವುದೇ ನಿರ್ದಿಷ್ಟ ಪ್ರಾಂತ್ಯದಲ್ಲಿ ಒಂದು ವಿನಾಯಿತಿ ಕೊಡಬೇಕು ಎಂದು ಅರ್ಥವೇ? ನಾನು ಹಾಗೆ ಯೋಚಿಸುವುದಿಲ್ಲ. ಹೇಗೇ ಇರಲಿ ನಾನು ಈ ವಿಷಯವನ್ನು ಮುಂದೂಡಬೇಕೆ ಇಲ್ಲವೇ ಎಂಬುದನ್ನು ತೀರ್ಮಾನಿಸಲು ಸದನಕ್ಕೇ ಬಿಡುತ್ತೇನೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** (ಬಾಂಬೆ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಖಂಡ ೪ಕ್ಕೆ ಒಂದೇ ಒಂದು ತಿದ್ದುಪಡಿ ಇದೆ. ಮೀಸಲು ಸ್ಥಾನಗಳು ಹೊಂದಿರುವ ಅಲ್ಪಸಂಖ್ಯಾತ ಸಮುದಾಯದ ಸದಸ್ಯರು ಮತ್ತು ಮೀಸಲು ಸ್ಥಾನಗಳನ್ನು ಹೊಂದಿದವರು ಮೀಸಲಿರಿಸದ ಸ್ಥಾನಗಳಿಗೂ ಸ್ಪರ್ಧಿಸಲು ಹಕ್ಕುಳ್ಳವರಾಗಿದ್ದಾರೆ. ಇಂದು ಶ್ರೀ ಮುನ್ಷಿಯವರಿಂದ ತಿದ್ದುಪಡಿ ಮಾಡಿದ ಹಾಗೂ ಶ್ರೀ ಖೈತಾನ್ ಅವರಿಂದ ಮಂಡಿಸಲಾದ ತಿದ್ದುಪಡಿಯು, ಪೂರ್ವ ಪಂಜಾಬ್‌ನಂತೆ ಪಶ್ಚಿಮ ಬಂಗಾಳದ ಪ್ರಶ್ನೆ. ಇದನ್ನು ಹಾಗೆಯೇ ಬಿಡಬೇಕಾಗುತ್ತದೆ. ಅನುಸೂಚಿತ ಜಾತಿ ಜನರಿಗಾಗಲಿ ಅಥವಾ ಇತರ ಜನರಿಗಾಗಲಿ ಅದರ ಬಗೆಗೆ ಯಾವುದೇ ಅನುಮಾನ ಇರಲು ಕಾರಣವಿಲ್ಲ. ಪೂರ್ವ ಪಂಜಾಬ್ ಸಮಸ್ಯೆಯನ್ನು ಪರಿಶೀಲಿಸುವಾಗ, ಪಶ್ಚಿಮ ಬಂಗಾಳದ

ಸಮಸ್ಯೆಯನ್ನು ಕೂಡ ಪರಿಶೀಲಿಸಲಾಗುತ್ತದೆ. ಯಾವುದನ್ನೂ ಅವರಿಗೆ ತಿಳಿಯದಂತೆ ಮಾಡಲಾಗುವುದಿಲ್ಲ ಅಥವಾ ಯಾವುದನ್ನೂ ಅವರ ಅನುಮತಿ ಇಲ್ಲದೆ ಅಥವಾ ಅವರ ತಿಳಿವಳಿಕೆ ಇಲ್ಲದೆ ತೆಗೆದುಹಾಕುವುದಿಲ್ಲ. ಜನಸಂಖ್ಯೆಯ ವಾಸ್ತವ ಪರಿಣಾಮವೇನು ಮತ್ತು ಪ್ರಮಾಣವೇನು ಎಂಬುದನ್ನು ಇನ್ನೂ ನೋಡಬೇಕಿದೆ. ಆದುದರಿಂದ ಮತದಾನ ಮತ್ತು ಚುನಾವಣೆಗಳ ವಿಷಯವಾಗಿ ಸುರಕ್ಷತೆಗಳನ್ನು ಒದಗಿಸುವುದಕ್ಕೆ ನಾವು ಅಂಗೀಕರಿಸಿರುವ ಪ್ರಮಾಣವನ್ನು ನಿಗದಿಮಾಡಿದಾಗ, ನಾವು ಅವುಗಳನ್ನು ಜನಸಂಖ್ಯೆ ಮತ್ತು ಸಂಖ್ಯಾ ಬಲ ಹೀಗೆ ಎರಡೂ ಆಧಾರಗಳ ಮೇಲೆ ನಿರ್ಧರಿಸಿದ್ದೇವೆ. ವಾಸ್ತವದಲ್ಲಿ ಜನಸಂಖ್ಯೆಯು ಯಾರೇ ಅಲ್ಪಸಂಖ್ಯಾತ ಸಂಬಂಧಿಸಿದಂತೆ ಎಷ್ಟಿರಬೇಕೆಂದರೆ ಅವರು ಸ್ಪರ್ಧಿಸಲು ಯಾವುದೇ ಅಂತಹ ಹೆಚ್ಚುವರಿ ಹಕ್ಕು ಹೊಂದಬೇಕಿಲ್ಲ ಎನ್ನುವುದಾದರೆ, ಅದು ಬಹುಸಂಖ್ಯಾತರ ಮೇಲೆ ಬೀರುವ ಗಂಭೀರ ಪರಿಣಾಮದಿಂದಾಗಿ ಗಂಭೀರ ಪರಿಣಾಮಕಾರಿಯಾಗದ ಬಹುಸಂಖ್ಯಾತ ಮಟ್ಟ ಇಳಿಸಿದಲ್ಲಿ, ಆಗ ಅದು ಪರಿಗಣಿಸಬೇಕಾದ, ಸಂದರ್ಭವಾಗುತ್ತದೆ. ಆದ್ದರಿಂದ ತಿದ್ದುಪಡಿಯಲ್ಲಿ ಸಲಹೆ ಮಾಡಿದಂತೆಯೇ ಸಲಹೆ ಮಾಡಿದಲ್ಲಿ, ಅಂದರೆ ಈ ಪ್ರಶ್ನೆಯನ್ನು ಅಮಾನತ್ತಿನಲ್ಲಿರಿಸಿ, ಪೂರ್ವ ಪಂಜಾಬ್ ಪ್ರಶ್ನೆಯೊಂದಿಗೆ ಪರಿಗಣಿಸಲಾಗುವುದು. ಆಗ ಯಾವುದೇ ಊಹೆಗೆ ಅಗತ್ಯವಿರುವುದಿಲ್ಲ. ಈ ರಿಯಾಯಿತಿಗಳನ್ನು ಕೊಟ್ಟಿರುವ ಜನರ ಪ್ರಾಮಾಣಿಕತೆಯ ಬಗ್ಗೆ ಯಾವುದೇ ಅನುಮಾನವೂ ಇಲ್ಲ ಮತ್ತು ವಸ್ತುಶಃ ಅವರು ಅದಕ್ಕೆ ಬದ್ಧರಾಗಿರುತ್ತಾರೆ. ಆದುದರಿಂದ ತಿದ್ದುಪಡಿಯನ್ನು ಒಪ್ಪಲು ನನಗೆ ಯಾವ ಹಿಂಜರಿಕೆಯೂ ಇಲ್ಲ ಮತ್ತು ನಾನು ಖಂಡ ೪ನ್ನು ಒಪ್ಪಬಹುದು ಎಂದು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಒಂದೇ ಒಂದು ತಿದ್ದುಪಡಿ ಮಾತ್ರ ಇದೆ. ಅದರ ಪರಿಣಾಮ ಪಶ್ಚಿಮ ಬಂಗಾಳದ ಪ್ರಶ್ನೆಯನ್ನು ಮುಂದೊಂದು ದಿನ ಪರಿಗಣಿಸಲು ಅಮಾನತ್ತಿನಲ್ಲಿಡುವುದಾಗಿದೆ. ಮಂಡನೆಕಾರರು ಅದನ್ನು ಸಮ್ಮತಿಸಿದ್ದಾರೆ. ಆ ಸಲಹೆಯನ್ನು ಸದನವು ಒಪ್ಪಿದೆ ಎಂದು ಭಾವಿಸಲೇ?

**ಗೌರವಾನ್ವಿತ ಸದಸ್ಯರು** : ಹೌದು.

**ಮಾನ್ಯ ಸಭಾಧ್ಯಕ್ಷರು** : ಹಾಗಾದರೆ ನಾನು ಖಂಡ, ತಿದ್ದುಪಡಿಯಾಗಿರುವಂತೆ ಮತಕ್ಕೆ ಹಾಕುತ್ತೇನೆ.

ಖಂಡ ೪ಅನ್ನು ತಿದ್ದುಪಡಿಯಾಗಿರುವಂತೆ ಅಂಗೀಕರಿಸಲಾಯಿತು.

## ಖಂಡ ೫

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಖಂಡ ೫–

"ಪ್ರಾತಿನಿಧ್ಯ ಮೀಸಲಾಗಿರುವ ಅಲ್ಪಸಂಖ್ಯಾತರಿಗೆ ಅವರ ಜನಸಂಖ್ಯಾ ಅನುಪಾತದ ಮೇಲೆ ಸ್ಥಾನಗಳನ್ನು ಹಂಚಲಾಗುತ್ತದೆ ಮತ್ತು ಯಾವುದೇ ಸಮುದಾಯಕ್ಕೆ ಹೆಚ್ಚಿನ ಸೌಲಭ್ಯ ಇರುವುದಿಲ್ಲ."

ಈ ವಿಷಯವನ್ನು ಈಗಾಗಲೇ ಸಮಗ್ರವಾಗಿ ವಾರ್ತಾಪತ್ರಿಕೆಗಳಲ್ಲಿ ಮತ್ತು ಸಮಿತಿಯಲ್ಲೂ ಕೂಡಾ ಚರ್ಚಿಸಲಾಗಿದೆಯಾದ್ದರಿಂದ, ಇದನ್ನು ಕುರಿತಾಗಿ ಯಾವುದೇ ಚರ್ಚೆಯ ಅಗತ್ಯವಿಲ್ಲ ಎಂದು ನಾನು ಭಾವಿಸುತ್ತೇನೆ ಹಾಗೂ ಇದನ್ನು ಯಾರೂ ವಿರೋಧಿಸುವುದಿಲ್ಲವೆಂದು ಭಾವಿಸಿದ್ದೇನೆ. ಮಾನ್ಯರೆ, ನಾನು ಸದನದ ಸಮ್ಮತಿಗಾಗಿ ಇದನ್ನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಇದಕ್ಕೆ ಎರಡು ತಿದ್ದುಪಡಿಗಳಿವೆ (ಶ್ರೀಯುತರಾದ ತಾಜಮಲ್ ಹುಸೇನ್ ಮತ್ತು ಖಾಂಡೇಕರ್ ಎಚ್.ಜೆ. ತಮ್ಮ ತಿದ್ದುಪಡಿಗಳನ್ನು ಮಂಡಿಸಿಲ್ಲ) ನಾನು ಖಂಡವನ್ನು ಮತಕ್ಕೆ ಹಾಕುತ್ತೇನೆ.

ಖಂಡ ೫ ಅಂಗೀಕಾರವಾಯಿತು.

## ಖಂಡ ೬

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಮುಂದಿನ ಖಂಡಗಳಿಗೆ ಕೂಡಾ ತಿದ್ದುಪಡಿಗಳಿಲ್ಲ. ನಾನು ಖಂಡ ೬ನ್ನು ಸೂಚಿಸುತ್ತೇನೆ:

"ಒಬ್ಬರ ಸ್ವಂತ ಸಮುದಾಯಕ್ಕೆ ಕನಿಷ್ಠ ಸಂಖ್ಯೆಯ ಮತಗಳಿಗೆ ಯಾವ ನಿಬಂಧನೆ ಇಲ್ಲ. ಒಬ್ಬ ಅಲ್ಪಸಂಖ್ಯಾತ ಅಭ್ಯರ್ಥಿಯು ಮೀಸಲಿರಿಸಿದ ಒಂದು ಸ್ಥಾನಕ್ಕೆ ಚುನಾವಣೆಗೆ ಸ್ಪರ್ಧಿಸಿರುವಲ್ಲಿ ಆತ ಆಯ್ಕೆಯಾಗಿರುವನು ಎಂದು ಘೋಷಿಸುವ ಮುನ್ನ, ತನ್ನದೇ ಸ್ವಂತ ಸಮುದಾಯದ ಕನಿಷ್ಠ ಸಂಖ್ಯೆ ಮತಗಳನ್ನು ಪಡೆದಿರಬೇಕೆಂಬ ಯಾವ ನಿರ್ಬಂಧವೂ ಇಲ್ಲ."

ಈ ಪ್ರಶ್ನೆಯನ್ನು ಕೂಡಾ ಈ ಹಿಂದೆ ಮೇಲಿಂದ ಮೇಲೆ ಪರಿಗಣಿಸಲಾಗಿದೆ ಮತ್ತು ಉಪಕ್ರಮಿಸಲಾಗುತ್ತಿರುವ ಪ್ರತ್ಯೇಕ ಮತದಾರರ ಸಮುದಾಯದ ಇನ್ನೊಂದು ರೂಪ ಇದಾಗ್ಗಿದೆ ಹಾಗೂ ಇದನ್ನು ಗಮನಿಸಲಾಗಿದೆ. ಸನ್ನಿವೇಶದಲ್ಲಿನ ಬದಲಾವಣೆಯ ದೃಷ್ಟಿಯಿಂದ ಅಂಥ ಯಾವುದನ್ನು ಉಪಕ್ರಮಿಸುವ ಅಗತ್ಯವಿರುವುದಿಲ್ಲ. ನಾವು ಶೇಕಡಾವಾರು ಅಂತಹ ಮೀಸಲಾತಿ ಅವಶ್ಯ ಎಂದು ಒಪ್ಪಿರುವುದಿಲ್ಲ. ಮಾನ್ಯರೆ, ನಾನು ಈ ಖಂಡವನ್ನು ಸದನದ ಸಮ್ಮತಿಗೆ ಮಂಡಿಸುತ್ತೇನೆ.

(ಶ್ರೀಯುತರಾದ ತಾಜಮಲ್ ಹುಸೇನ್ ಮತ್ತು ವಿ.ಸಿ. ಕೇಶವರಾವ್ ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಕೆ.ಟಿ.ಎಮ್. ಅಹ್ಮದ್ ಇಬ್ರಾಹಿಮ್ ಸಾಹಿಬ್ ಬಹಾದುರ್** (ಮದ್ರಾಸ್ : ಮುಸ್ಲಿಮ್) : ತಿದ್ದುಪಡಿ ಸಂಖ್ಯೆ ೪ನ್ನು ಶ್ರೀಪಾಕರ್ ಸಾಹಿಬ್ ಮತ್ತು ನಾನು ಸೂಚಿಸಿದ್ದೆವು ಮತ್ತು ಅದು ಈ ಖಂಡಕ್ಕೆ ಸಂಬಂಧಿಸಿದೆ.

**ಮಾನ್ಯ ಸಭಾಧ್ಯಕ್ಷರು :** ನಾನು ಅದನ್ನು ಮುಂದೆ ತೆಗೆದುಕೊಳ್ಳುತ್ತೇನೆ. ಶ್ರೀ ನಾಗಪ್ಪ.

**ಶ್ರೀ ಎಸ್. ನಾಗಪ್ಪ** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಸದನದ ಗಮನಕ್ಕೆ ತರುವುದೇಂದರೆ, ಅನುಸೂಚಿತ ವರ್ಗಗಳ ವಿಷಯದಲ್ಲಿ ಅವರಿಗಾಗಿ ಮೀಸಲಾದ ಸ್ಥಾನಗಳಿಗೆ ಅವರು ಆಯ್ಕೆಯಾಗಿದ್ದಾರೆ ಎಂದು ಘೋಷಿಸುವ ಮುನ್ನ ಆ ಸಮುದಾಯದ ನಿರ್ದಿಷ್ಟ ಶೇಕಡಾ ಮತಗಳನ್ನು ಅಭ್ಯರ್ಥಿಗಳು ಪಡೆಯುವ ಸಾಮರ್ಥ್ಯ ಪಡೆದಿರಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯರೆ, ಅದು ಆ ಸಮುದಾಯದ ಅಭ್ಯರ್ಥಿಗೆ ಒಂದು ವಿಧದ ಪ್ರತಿಷ್ಠೆ ಮತ್ತು ನಾಯಕತ್ವ ಕೊಡುತ್ತದೆ ಎಂದು ನಾನು ಬಲ್ಲೆ. ಉದಾಹರಣೆಗೆ: ಇಂದು ನಾವು ಮೀಸಲಿರಿಸಿದ ಸ್ಥಾನಗಳಿಗೆ ಚುನಾಯಿತರಾದಲ್ಲಿ, ಕೃಷಿ ಸಂಬಂಧದ ತೊಂದರೆ ಇದ್ದಾಗ, ಹರಿಜನರು ಮತ್ತು ಕೃಷಿಕರು ವಿವಾದದಲ್ಲಿದ್ದಾಗ ಮತ್ತು ನಾವು ಹೋಗಿ ಈ ಜನರನ್ನು ಈ ಹರಿಜನರನ್ನು ಮನವಿ ಮಾಡಿದಾಗ ಅವರು "ಹೋಗಿ ಹೋಗಿ ನೀವು ಜಾತಿ ಹಿಂದೂಗಳ ಅನುಯಾಯಿಗಳು ಮತ್ತು ಪ್ರಚಾರಪ್ರಿಯರು. ನೀವು ನಮ್ಮ ಸಮುದಾಯವನ್ನು ಮಾರಿಬಿಟ್ಟಿದ್ದೀರಿ ಮತ್ತು ಅವರ ಪರವಾಗಿ ನೀವು ಇಲ್ಲಿಗೆ ನಮ್ಮ ಕತ್ತು ಕುಯ್ಯಲು ಬಂದಿದ್ದೀರಿ. ನಾವು ನಿಮ್ಮನ್ನು ನಮ್ಮ ಪ್ರತಿನಿಧಿಗಳು ಎಂದು ಒಪ್ಪುವುದಿಲ್ಲ" ಎಂದು ಹೇಳುವರು. ಮಾನ್ಯರೆ, ಅದನ್ನು ತಪ್ಪಿಸುವ ಸಲುವಾಗಿ, ನಾನು ಸಲಹೆ ಮಾಡುವುದಿಷ್ಟೆ. ಹರಿಜನರ ಒಂದಿಷ್ಟು ಶೇಕಡಾ ಮಂದಿ ಅಭ್ಯರ್ಥಿಯನ್ನು ಆಯ್ಕೆಮಾಡಬೇಕು. ಹಾಗಾಗಿ ಆತ ಅವರಿಗೆ ತಾನು ಕೆಲವು ಹರಿಜನರನ್ನು ಬೆಂಬಲಿಸುತ್ತೇನೆ ಹಾಗೂ ಅವರ ಪ್ರತಿನಿಧಿಯಾಗಿ ತಾನು ಪ್ರತಿಷ್ಠೆ ಮತ್ತು ಧ್ವನಿ ಹೊಂದಿದ್ದೇನೆ ಎಂದು ಹೇಳಲು ಸಮರ್ಥನಾಗಬಹುದು. ಆ ಘನತೆ ಮತ್ತು ಧ್ವನಿ ಆತ ಹೊಂದಬೇಕು.

**ಶ್ರೀ ಎಚ್.ಜೆ. ಖಾಂಡೇಕರ್ :** ಮಂಡನೆಕಾರರು ತಮ್ಮ ತಿದ್ದುಪಡಿ ಮಂಡಿಸುವರೆ ಅಥವಾ ಭಾಷಣ ಮಾಡುತ್ತಿರುವರೆ? ಅವರು ಮಂಡಿಸುತ್ತಿದ್ದಾರೆಯೆ ಇಲ್ಲವೆ ಎಂಬುದನ್ನು ಘೋಷಿಸಬೇಕು.

**ಮಾನ್ಯ ಸಭಾಧ್ಯಕ್ಷರು :** ನೀವು ತಿದ್ದುಪಡಿ ಮಂಡಿಸುತ್ತಿದ್ದೀರೋ ಇಲ್ಲವೋ?

**ಗೌರವಾನ್ವಿತ ಶ್ರೀ ಎಸ್. ನಾಗಪ್ಪ :** ಹೌದು ನಾನು ತಿದ್ದುಪಡಿ ಮಂಡಿಸುತ್ತಿದ್ದೇನೆ.

**ಶ್ರೀ ಬಿ.ಜಿ. ಖೇರ್** (ಬಾಂಬೆ : ಸಾಮಾನ್ಯ) : ನಿನ್ನೆ ಗೌರವಾನ್ವಿತ ಸದಸ್ಯರು, ಸರ್ದಾರ್ ಪಟೇಲ್ ಅವರನ್ನು ಇದನ್ನು ಒಪ್ಪಿಕೊಳ್ಳುವುದಕ್ಕೆ ದೃಢ ನಿರ್ಧಾರ ತೆಗೆದುಕೊಂಡು ತಿರಸ್ಕರಿಸಿದ್ದಕ್ಕಾಗಿ ಅಭಿನಂದಿಸಿದ್ದರು. ಈಗ ಅವರು ತಿದ್ದುಪಡಿ ಮಂಡಿಸುತ್ತಿದ್ದಾರೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಅವರು ಅದನ್ನು ಮಂಡಿಸುತ್ತಿರುವುದು ಭಾಷಣ ಮಾಡಲು ಮಾತ್ರ ಮತ್ತು ಬಳಿಕ ಅದನ್ನು ಹಿಂತೆಗೆದುಕೊಳ್ಳುವರು (ನಗು).

**ಮಾನ್ಯ ಸಭಾಧ್ಯಕ್ಷರು :** ಅಸಮಂಜಸವಾಗಿ ಮಾತನಾಡುವುದಕ್ಕೂ ಪ್ರತಿಯೊಬ್ಬ ಸದಸ್ಯರಿಗೂ ಹಕ್ಕು ಇದೆ.

**ಶ್ರೀ ಎಸ್. ನಾಗಪ್ಪ :** ಮಾನ್ಯರೆ, ನಾನು ಹೇಗೆ ಇದು ಪ್ರತ್ಯೇಕ ಮತದಾರರ ಸಮುದಾಯವಾಗುತ್ತದೆ ಎಂದು ವಿವರಿಸುತ್ತೇನೆ.

**ಶ್ರೀ ಮೋಹನ್ ಲಾಲ್ ಸಕ್ಸೇನ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಅವರು ತಮ್ಮ ತಿದ್ದುಪಡಿಯನ್ನು ಮೊದಲು ಮಂಡಿಸಲಿ ಮತ್ತು ಬಳಿಕ ಮಾತನಾಡಲಿ.

**ಮಾನ್ಯ ಸಭಾಧ್ಯಕ್ಷರು :** ಅವರು ಅದನ್ನು ಮಂಡಿಸುತ್ತೇನೆ ಎಂದು ಹೇಳಿರುವುದರಲ್ಲೂ ಯಾವ ವ್ಯತ್ಯಾಸವೂ ಇಲ್ಲ. ಶ್ರೀನಾಗಪ್ಪ, ನೀವು ದಯವಿಟ್ಟು ತಿದ್ದುಪಡಿ ಓದಿರಿ.

**ಶ್ರೀ ಎಸ್. ನಾಗಪ್ಪ :** ತಿದ್ದುಪಡಿ ಈ ಕೆಳಗಿನಂತಿದೆ:

"ಕೆಳಗಿನದನ್ನು ಕಂಡಿಕೆ ೬ರ ಕೊನೆಯಲ್ಲಿ ಸೇರಿಸತಕ್ಕದ್ದು:

'ಪರಂತು, ಅನುಸೂಚಿತ ಜಾತಿಗಳ ವಿಷಯದಲ್ಲಿ ಅಭ್ಯರ್ಥಿಯು ಅನುಸೂಚಿತ ಜಾತಿಗಳಿಗೆ ಮೀಸಲಿರಿಸಿದ ಸ್ಥಾನಕ್ಕೆ ಆಯ್ಕೆಯಾಗಿರುವರೆಂದು ಘೋಷಿಸುವ ಮುನ್ನ, ಮೀಸಲಿರಿಸಿದ ಸ್ಥಾನಕ್ಕೆ ಚುನಾವಣೆಯಲ್ಲಿ ಆತ ಅನುಸೂಚಿತ ಜಾತಿಗಳವರಿಂದ ಹಾಕಲಾದ ಮತಗಳ ಶೇಕಡಾ ೩೫ಕ್ಕೆ ಕಡಿಮೆ ಇಲ್ಲದಂತೆ ಮತ ಗಳಿಸಿರಬೇಕು.' "

ಮಾನ್ಯರೆ, ನಾನು ಇದು ಈಗ ಹೇಗೆ ಪ್ರತ್ಯೇಕ ಮತದಾರರ ಸಮುದಾಯ ಆಗುವುದಿಲ್ಲ ಎಂದು ವಿವರಿಸುತ್ತೇನೆ.

**ಶ್ರೀ ಕೆ.ಎಮ್. ಮುನ್ಷಿ :** ತಿದ್ದುಪಡಿಯ ಗೌರವಾನ್ವಿತ ಮಂಡನೆಕಾರರು ತಿದ್ದುಪಡಿ ಮಂಡಿಸಲು ಬಯಸುವರೆ ಅಥವಾ ಅದನ್ನು ಹಿಂತೆಗೆದುಕೊಳ್ಳುವರೆ?

**ಮಾನ್ಯ ಸಭಾಧ್ಯಕ್ಷರು :** ಅದನ್ನು ಮಂಡಿಸಬಯಸುತ್ತೇನೆ ಎಂದು ಅವರು ಹೇಳಿದ್ದಾರೆ.

**ಶ್ರೀ ಎಸ್. ನಾಗಪ್ಪ :** ಉದಾಹರಣೆಗೆ: ಮೀಸಲಿರಿಸಿದ ಸ್ಥಾನಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸ ಬಯಸಿರುವ ನಾಲ್ವರು ಅಭ್ಯರ್ಥಿಗಳಿದ್ದಾರೆ. ಈಗ ನಾವು ನೂರು ಅನುಸೂಚಿತ ಜಾತಿಯ ಮತಗಳಿವೆ ಮತ್ತು ಎಲ್ಲ ನೂರು ಅನುಸೂಚಿತ ಜಾತಿಗಳ ಮತದಾರರು ಬಂದು ಮತದಾನ ಮಾಡುತ್ತಾರೆ ಎಂದು ಊಹಿಸೋಣ. 'ಎ' ೩೬ ಮತಗಳನ್ನು 'ಬಿ' ಮತಗಳ ೩೫ನ್ನೂ ಪಡೆಯುವರೆಂದು, ಆದರೆ ಇದು ೭೧ ಆಗುತ್ತದೆ. ಕೇವಲ ೨೯ ಮತಗಳು ಇನ್ನೊಬ್ಬರಿಗೆ ಬಂದಿರುತ್ತದೆ. ಈಗ ನೀವು ಶೇಕಡಾ ೨೯ ಮಾತ್ರ ಮತ ಹಾಕಿದವರನ್ನು ಲೆಕ್ಕಕ್ಕೆ ತೆಗೆದುಕೊಳ್ಳಲೇಬೇಕಿಲ್ಲ. ಈಗ ಪುನಃ ನೀವು ಎರಡು ಚುನಾವಣೆಗಳನ್ನು ನಡೆಸಬೇಕಾಗಿಲ್ಲ. ನೀವು ಮತದಾರರಿಗೆ ಎರಡು ಬಣ್ಣದ ಕಾಗದಗಳನ್ನು ವಿತರಿಸಿ ಒಂದು ಮತಹಾಕಲು ಹೇಳಬಹುದು. 'ಎ' ೩೬ ಮತ್ತು 'ಬಿ' ೩೫ ಮತಗಳನ್ನು ಪಡೆಯುತ್ತಾರೆ. ಇದು ೭೧ ಆಗುತ್ತದೆ. ಅನುಸೂಚಿತ ಜಾತಿ ಅಭ್ಯರ್ಥಿಗೆ ಮಾತ್ರ ಇದ್ದು ಒಬ್ಬರು ಅನುಸೂಚಿತ ಜಾತಿ ಮತಗಳ ಅಥವಾ ಬಣ್ಣದ ಮತಗಳ ಶೇಕಡಾ ೩೫ಕ್ಕಿಂತ ಹೆಚ್ಚು ಪಡೆದರೆ ನೀವು ಇತರ ವ್ಯಕ್ತಿಯನ್ನು ಪರಿಗಣಿಸಲೇ ಬೇಕಿಲ್ಲ.

ಮಾನ್ಯರೆ, ಆತ ಶೇಕಡ ೩೬ ಪಡೆದರೂ ಸಾರ್ವತ್ರಿಕ ಚುನಾವಣೆಯಲ್ಲಿ ಅತ್ಯಧಿಕ ಸಂಖ್ಯೆ ಮತಗಳನ್ನು

ಪಡೆಯದಿದ್ದರೆ, ಆತ ಚುನಾಯಿತ ಎಂದು ಘೋಷಿಸಬಾರದು. ಹಾಗೆಯೇ 'ಎಕ್ಸ್' ಎಂಬಾತನು, ಒಂದು ಸಮುದಾಯದ ಮತಗಳ ಶೇಕಡ ೩೬ರಷ್ಟು ಪಡೆದರೆ ಮತ್ತು 'ವೈ' ಎಂಬುವನು ಕೇವಲ ಶೇಕಡ ೩೫ ಪಡೆದರೆ ಹಾಗೂ ಮೊದಲನೆಯವನು ಚುನಾವಣೆಯಲ್ಲಿ ಇತರ ಸಮುದಾಯಗಳ ಬಹುಸಂಖ್ಯೆಯ ಮತಗಳನ್ನು ಪಡೆಯದಿದ್ದರೆ, ಅವನು ಸೋತನೆಂದು ಘೋಷಿಸಲಾಗುತ್ತದೆ ಮತ್ತು ಇನ್ನೊಬ್ಬ ತನ್ನ ಸಮುದಾಯದ ಕಡಿಮೆ ಸಂಖ್ಯೆ ಮತಗಳನ್ನು ಮಾತ್ರ ಪಡೆದಿದ್ದರೂ ಚುನಾಯಿತನೆಂದು ಘೋಷಿಸಲಾಗುತ್ತದೆ. ಅದೂ ಅಲ್ಲದೆ, ಸಾರ್ವತ್ರಿಕ ಚುನಾವಣಾ ಕ್ಷೇತ್ರಗಳಲ್ಲಿ 'ಎಕ್ಸ್'ಗಿಂತ ಹೆಚ್ಚಿಗೆ ಮತಪಡೆದಿದ್ದರೂ ಚುನಾಯಿತನಾಗಿದ್ದಾನೆಂದು ಘೋಷಿಸಲಾಗುತ್ತದೆ. ಒಟ್ಟಾರೆ ಸಮಗ್ರ ಚುನಾವಣೆಯು ಸಾಮಾನ್ಯ ಚುನಾವಣಾ ಕ್ಷೇತ್ರ ಸಮುದಾಯದ ಜನರ ಕೈಗಳಲ್ಲಿ ಇದೆ. ಪುಣೆ ಒಪ್ಪಂದದ ಪ್ರಕಾರ ನೀವು ಪ್ರಾಥಮಿಕ ಚುನಾವಣೆಗಳಲ್ಲಿ ಚುನಾಯಿತರಾಗಲು ನಾಲ್ವರು ಅಭ್ಯರ್ಥಿಗಳಿಗೆ ಅವಕಾಶಮಾಡಿದ್ದೀರಿ. ಅಂದರೆ ಯಾರು ಶೇಕಡ ೨೫ರಷ್ಟು ಮತಗಳನ್ನು ಪಡೆಯುವರೋ ಅವರು ಸಂಚಿತ ಮತದಾನಕ್ಕೆ ಎಲ್ಲಿ ಅವಕಾಶಮಾಡಿರುತ್ತೀರೋ, ಆ ಪ್ಯಾನೆಲ್‌ಗೆ ಚುನಾಯಿತರಾಗಿರುವರೆಂದು ಘೋಷಿಸಲಾಗುತ್ತದೆ. ಅದು ಬಹುತೇಕ ಪ್ರತ್ಯೇಕ ಮತದಾರರ ಸಮುದಾಯ, ಅದನ್ನು, ನಾನು ಪ್ರತ್ಯೇಕ ಮತದಾರರ ಸಮುದಾಯವನ್ನು ಇಷ್ಟಪಡುವದಿಲ್ಲ. ಪ್ರತ್ಯೇಕ ಮತದಾರರ ಸಮುದಾಯಗಳ ಕೆಡುಕುಗಳನ್ನು ನಾನು ಬಲ್ಲೆ. ನಾನು ಜಂಟಿಮತದಾರರ ಸಮುದಾಯಗಳನ್ನು ಇಷ್ಟಪಡುತ್ತೇನೆ. ಆದರೆ ಜಂಟಿ ಮತದಾರರ ಸಮುದಾಯಗಳು ಇವೆ ಎಂಬುದನ್ನು ಗಮನಿಸಿದರೆ ನಾವು ಹರಿಜನ ಪ್ರತಿನಿಧಿಗಳನ್ನು ಯಾರು ಅವರನ್ನು ಇರುವಂತೆ ಇರಲಿ ಎಂದು ಹೇಳುವವರೋ ಅವರನ್ನು ಸಾಮಾನ್ಯ ಸಮುದಾಯದ ಪ್ರಚಾರಪ್ರಿಯರೆಂದು ಕರೆದರೂ, ಅವರು ತಮ್ಮ ಸಮುದಾಯದವರಲ್ಲಿ ಅವಕೃಪೆಗೊಳಗಾಗಬಾರದು. ನಾನು ಸೂಚಿಸುತ್ತಿರುವ ಈ ಉಪಬಂಧವನ್ನು ಅಳವಡಿಸಿದರೆ, ನಾವು ನಮ್ಮ ಸಮುದಾಯದ ಜನರನ್ನು ಎದುರಿಸಬಹುದು ಮತ್ತು ಅವರಿಗೆ "ಇಲ್ಲಿ ನೋಡಿ, ನಾವು ನಮ್ಮದೇ ಸ್ವಂತ ಸಮುದಾಯದ ಸದಸ್ಯರ ಶೇಕಡ ೩೫ರಷ್ಟು ಬಹುಮತದಿಂದ ನಾವು ಚುನಾಯಿತರಾಗಿದ್ದೇವೆ. ನಾವು ಪ್ರಚಾರಪ್ರಿಯರಲ್ಲ" ಎಂದು ಹೇಳಬಹುದು. ನನ್ನ ತಿದ್ದುಪಡಿಯಿಂದ ನಾನು ಪ್ಯಾನೆಲನ್ನು ನಾಲ್ಕರಿಂದ ಎರಡಕ್ಕೆ ಇಳಿಸಲು ಮತ್ತು ಸಾರ್ವತ್ರಿಕ ಸಮುದಾಯದ ಬಹುಸಂಖ್ಯೆ ಮತಗಳನ್ನು ಯಾರು ಪಡೆಯುತ್ತಾರೋ ಆ ವ್ಯಕ್ತಿಗೆ ಚುನಾವಣೆಯಲ್ಲಿ ಅವಕಾಶ ನೀಡಬೇಕೆಂದು ಕೋರುತ್ತೇನೆ. ನಾನು ಇದರ ಬಗೆಗೆ ಯಾವುದೇ ಪೂರ್ವಗ್ರಹವಿಲ್ಲದೆ ಆಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯರೆ, ನನ್ನ ತಿದ್ದುಪಡಿ ಮಂಡಿಸಲು ಒಂದು ಅವಕಾಶವನ್ನು ನನಗೆ ಕೊಟ್ಟುದಕ್ಕಾಗಿ ನಾನು ನಿಮಗೆ ವಂದಿಸುತ್ತೇನೆ.

**ಕೆ.ಟಿ.ಎಮ್. ಅಹ್ಮದ್ ಇಬ್ರಾಹಿಮ್ ಸಾಹಿಬ್ ಬಹಾದೂರ್** : ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸುತ್ತಿದ್ದೇನೆ:

"ಅಲ್ಪಸಂಖ್ಯಾತರು, ಮೂಲಭೂತ ಹಕ್ಕುಗಳನ್ನು ಇತ್ಯಾದಿ ಕುರಿತಾದ ಸಲಹಾ ಸಮಿತಿಯ ವರದಿಯನ್ನು ಪರಗಣಿಸುವುದು ಕುರಿತಂತೆ, ಅಲ್ಪಸಂಖ್ಯಾತ ಹಕ್ಕುಗಳನ್ನು ಕುರಿತು ಈ ಸಂವಿಧಾನ ರಚನಾಸಭೆಯು, ಅಲ್ಪಸಂಖ್ಯಾತರಿಗೆ ಸ್ಥಾನಗಳ ಮೀಸಲಾತಿ ಸಹಿತ ಎಲ್ಲ ಸಮುದಾಯಗಳಿಗೆ ಜಂಟಿ ಮತದಾರರ ಸಮುದಾಯಗಳ ಆಧಾರದ ಮೇರೆಗೆ ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಚುನಾವಣೆಗಳನ್ನು ನಡೆಸಿದ ಸಂದರ್ಭದಲ್ಲಿ ಚುನಾವಣೆಯನ್ನು ಈ ಕೆಳಗಿನ ಆಧಾರದ ಮೇಲೆ ನಡೆಸಬೇಕೆಂದು ನಿರ್ಣಯಿಸುತ್ತಿದೆ...."

ನಾನು (ಎ) ಅನ್ನು ಮಂಡಿಸುತ್ತಿಲ್ಲ...

"ತಮ್ಮದೇ ಸ್ವಂತ ಸಮುದಾಯ ಹಾಕಿದ ಮತಗಳಲ್ಲಿ ಕನಿಷ್ಠ ಶೇಕಡ ೩೦ರಷ್ಟು ಮತಗಳನ್ನು ಗಳಿಸಿದ ಅಭ್ಯರ್ಥಿಗಳ ಪೈಕಿ, ಜಂಟಿ ಮತದಾರರ ಸಮುದಾಯದಲ್ಲಿ ಚುಲಾಯಿಸಿದ ಮತಗಳಲ್ಲಿ ಅತ್ಯಧಿಕ ಸಂಖ್ಯೆಯ ಮತಗಳನ್ನು ಯಾರು ಗಳಿಸುವರೋ ಅವರು ಚುನಾಯಿತರಾಗಿರುವರೆಂದು ಘೋಷಿಸಲಾಗುತ್ತದೆ. ತನ್ನ ಸಮುದಾಯದಲ್ಲಿ ಚಲಾಯಿಸಿದ ಮತಗಳಲ್ಲಿ ಶೇಕಡ ೩೦ಕ್ಕಿಂತ ಕಡಿಮೆ ಇಲ್ಲದಂತೆ ಮತಗಳನ್ನು ಯಾರು ಗಳಿಸಿರದಿದ್ದ ಸಂದರ್ಭದಲ್ಲಿ,

ತಮ್ಮ ಸಮುದಾಯದ ಅತ್ಯಧಿಕ ಸಂಖ್ಯೆಯ ಮತಗಳನ್ನು ಗಳಿಸಿದ ಇಬ್ಬರು ಅಭ್ಯರ್ಥಿಗಳ ಪೈಕಿ, ಒಟ್ಟು ಹಾಕಿದ ಮತಗಳಲ್ಲಿ ಅತ್ಯಧಿಕ ಸಂಖ್ಯೆಯ ಮತಗಳನ್ನು ಗಳಿಸಿದವನು ಚುನಾಯಿತನಾಗಿರುವನೆಂದು ಘೋಷಿಸಲಾಗುವುದು."

ಮಾನ್ಯ ಸಭಾಧ್ಯಕ್ಷರೆ, ಈ ತಿದ್ದುಪಡಿಯು ಖಂಡ ೧೮ ಮೂಲಕ ಅಲ್ಪಸಂಖ್ಯಾತರಿಗೆ ಸಮ್ಮತಿಸಲಾದ ಮೀಸಲಾತಿಯ ಉದ್ದೇಶವನ್ನು ತೃಪ್ತಿಕರ ರೀತಿಯಲ್ಲಿ ಈಡೇರಿಸುತ್ತದೆ ಎಂದು ಉದ್ದೇಶಿಸಲಾಗಿದೆ. ಒಬ್ಬ ವ್ಯಕ್ತಿಯು, ಒಂದು ಚುನಾವಣಾ ಕ್ಷೇತ್ರದಿಂದ ಮೀಸಲಿರಿಸಿದ ಸ್ಥಾನಕ್ಕೆ ಚುನಾಯಿತನಾದರೆ, ಅದನ್ನು ಸಾಮಾನ್ಯವಾಗಿ ಆ ವ್ಯಕ್ತಿ ಆ ಸಮುದಾಯದ ಸದಸ್ಯರನ್ನು ಪ್ರತಿನಿಧಿಸುತ್ತಾನೆ ಎಂದು ತಿಳಿಯಲಾಗುತ್ತದೆ ಮತ್ತು ಆತ ಆ ಕ್ಷೇತ್ರದಲ್ಲಿ ಯಾರ ಒಳಿತಿಗಾಗಿ ಆ ಸ್ಥಾನವನ್ನು ಮೀಸಲಿರಿಸಲಾಗಿದೆಯೊ ಆ ವಿಶಿಷ್ಟ ಸಮುದಾಯದ ದೃಷ್ಟಿಕೋನ ಮತ್ತು ಅಭಿಪ್ರಾಯಗಳ ಮೇಲೆ ಬೆಳಕು ಚೆಲ್ಲುತ್ತಾನೆ. ಮಾನ್ಯರೆ, ಈಗ ಆ ವ್ಯಕ್ತಿ ಆ ವಿಶಿಷ್ಟ ಸಮುದಾಯವನ್ನು ಯಾವುದೇ ತಕ್ಕ ರೀತಿಯಲ್ಲಿ ಪ್ರತಿನಿಧಿಸಲು, ಆತ ಆ ಸಮುದಾಯದ ವಿಶ್ವಾಸವನ್ನು ಸಾಕಷ್ಟು ಗಳಿಸಬೇಕು. ಆದುದರಿಂದ ನಾವು, ಆತ ಸಮುದಾಯದ ಬಹುಮಂದಿಯ ವಿಶ್ವಾಸ ಗಳಿಸದಿದ್ದಲ್ಲಿ, ಆತನಿಗೆ ಯಾರು ಮತ ಚಲಾಯಿಸಿರುವರೋ, ಆ ಸಮುದಾಯದ ಕನಿಷ್ಠ ಶೇಕಡಾ ೩೦ರಷ್ಟು ಅಥವಾ ಇನ್ನೂ ಕಡಮೆಯ ಮತದಾರರ ವಿಶ್ವಾಸವನ್ನು ಹೊಂದಿರಬೇಕು ಎಂದು ಇಚ್ಛಿಸುತ್ತೇವೆ. ಮಾನ್ಯರೆ, ಇದನ್ನು ಅತ್ಯಂತ ಸಮಂಜಸ ಕೋರಿಕೆ ಎಂದು ಅಂಗೀಕರಿಸಲಾಗುವುದು. ಅದು ದೇಶದ ಶಾಸನಸಭೆಗಳ ಸದನದಲ್ಲಿ ಆತನ ದೃಷ್ಟಿಕೋನ ಮತ್ತು ಅಭಿಪ್ರಾಯಗಳಿಗೆ ಅಭಿವ್ಯಕ್ತಿಯನ್ನು ಕೊಡಬೇಕು ಎಂಬುದು ಪ್ರಜಾಪ್ರಭುತ್ವದ ಪ್ರತಿಯೊಂದು ರೂಪದಲ್ಲಿ ಪ್ರತಿಯೊಬ್ಬ ನಾಗರಿಕನ ಒಂದು ಮೂಲಭೂತವಾದ ಮತ್ತು ಪರಮೋಚ್ಚ ಹಕ್ಕು ಆಗಿರುತ್ತದೆ. ಆ ಸಮುದಾಯದ ಬಹಳಷ್ಟು ಜನರ ವಿಶ್ವಾಸ ಗಳಿಸಿರದಿದ್ದರೂ ಕಡೇಪಕ್ಷ ಸಮುದಾಯದ ಸಾಕಷ್ಟು ಜನರ ವಿಶ್ವಾಸವನ್ನು ಗಳಿಸಿರದ ವ್ಯಕ್ತಿಯನ್ನು ಶಾಸನಸಭೆಗೆ ಕಳುಹಿಸಿದರೆ ಮತ್ತು ವ್ಯಕ್ತಿ ಸದನದಲ್ಲಿ ತನ್ನ ಅಭಿಪ್ರಾಯಗಳನ್ನೂ ಸೂಕ್ತ ರೀತಿಯಲ್ಲಿ ಪ್ರತಿನಿಧಿಸುವನೆಂದು ಹೇಗೆ ವಿಶ್ವಾಸದಿಂದ ಹೇಳಬೇಕು. ಮಾನ್ಯರೆ, ಈ ಸ್ವರೂಪದ ಒಂದು ನಿಬಂಧನೆಯನ್ನು ೧೯೩೨ರ ಡಿಸೆಂಬರ್‌ನಲ್ಲಿ ಅಲಹಾಬಾದ್‌ನಲ್ಲಿ ಜರುಗಿದ ಮೂರನೆಯ ಐಕ್ಯತಾ ಸಮ್ಮೇಳನದಲ್ಲಿ, ಈ ನೆಲದ ಎಲ್ಲ ಸಮುದಾಯಗಳ ಮತ್ತು ಪಕ್ಷಗಳ ನಡುವೆ ಆದ ಸಾಮಾನ್ಯ ಒಪ್ಪಂದದ ಫಲವಾಗಿ ಅಳವಡಿಸಿದ್ದು ಎಂಬುದು ತಮಗೂ ಕೂಡ ನೆನಪಿದೆ.

ನನ್ನ ತಿದ್ದುಪಡಿ ಏನಿದ್ದರೂ ಆ ಸಂದರ್ಭದಲ್ಲಿ ಮಾಡಿಕೊಳ್ಳಲಾದ ಒಪ್ಪಂದದ ಒಂದು ಅಳವಡಿಕೆ ಮಾತ್ರ. ಮಾನ್ಯರೆ, ಅಂತಹ ಉಪಬಂಧ ಇಲ್ಲದಿದ್ದರೆ, ಯಾರ ವಿಶ್ವಾಸದಲ್ಲಿ ಸ್ಥಾನ ಮೀಸಲಿರಿಸಲಾಗಿದೆಯೋ ಆ ಸಮುದಾಯದ ಅಭಿಪ್ರಾಯಗಳನ್ನು ಆ ಮೀಸಲಿರಿಸಿದ ಸ್ಥಾನಕ್ಕೆ ಚುನಾಯಿತನಾದವನಿಂದ ಪ್ರತಿನಿಧಿಸುವುದನ್ನು ಕುರಿತು ನಿರೀಕ್ಷೆ ಮಾಡಲಾಗುತ್ತಿರಲಿಲ್ಲ. ಅದು ಸ್ಥಾನಗಳ ಮೀಸಲಾತಿಯ ಪ್ರಯೋಜನ ನೀಡಿರುವ, ಆದರೆ ಅದರಿಂದ ಚುನಾಯಿತನಾಗದ ಸಮುದಾಯವನ್ನು ಪ್ರತಿನಿಧಿಸಲು ಇನ್ನೊಂದು ಸಮುದಾಯದಿಂದ ವಾಸ್ತವವಾಗಿ ಚುನಾಯಿತನಾದ ಸಮುದಾಯದ ಮೇಲೆ ಪ್ರಭಾವ ಬೀರುತ್ತದೆ. ಈಗ ಈ ದೇಶದಲ್ಲಿ ಅಲ್ಪಸಂಖ್ಯಾತರಿಲ್ಲ ಮತ್ತು ರಕ್ಷಿಸಬೇಕಾದ ಅಲ್ಪಸಂಖ್ಯಾತರ ವಿಶೇಷ ಹಿತಾಸಕ್ತಿಗಳು ಇಲ್ಲ ಎಂದು ಸ್ಪರ್ಧಿಸಲು ತುಂಬ ಕಾಲ ಮೀರಿದೆ. ಮೂಲಭೂತ ಹಕ್ಕುಗಳು ಮತ್ತು ಅಲ್ಪಸಂಖ್ಯಾತರನ್ನೂ ಕುರಿತ ಸಲಹಾ ಸಮಿತಿಯ ಮತ್ತು ಅಲ್ಪಸಂಖ್ಯಾತರ ಉಪಸಮಿತಿಯ ನೇಮಕಾತಿಯೇ ಅಲ್ಪಸಂಖ್ಯಾತರ ಅಸ್ತಿತ್ವವನ್ನು ಮತ್ತು ಅವರ ವಿಶೇಷ ಹಿತಾಸಕ್ತಿಗಳನ್ನು, ಮೊದಲೇ ಊಹಿಸಿದೆ. ರಕ್ಷಿಸಬೇಕಾದ ಅಲ್ಪಸಂಖ್ಯಾತರ ಕೆಲವು ಹಿತಾಸಕ್ತಿಗಳಿವೆ ಎಂಬ ಊಹೆಯ ಮೇಲೆ ವರದಿಯು ಮುಂದುವರಿದಿದೆ. ಆದುದರಿಂದ ನಾನು, ಈ ಸದನದಲ್ಲಿ ಈಗ ಅಲ್ಪಸಂಖ್ಯಾತರಿಲ್ಲ ಮತ್ತು ಅವರಿಗೆ ಒದಗಿಸಬೇಕಾದ ವಿಶೇಷ ಹಿತಾಸಕ್ತಿಗಳೂ ಇಲ್ಲ ಎಂಬ ನಿಲುವನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತೇನೆ. ಈಗ ಈ ವಿಷಯವು ಈ ಅಲ್ಪಸಂಖ್ಯಾತರಿಗೆ ಎಷ್ಟು ಉತ್ತಮವಾಗಿ ರಕ್ಷಣೆ ನೀಡುತ್ತದೆ ಎಂಬುದನ್ನು ಪರಿಗಣಿಸಬೇಕಾಗಿದೆ. ಅಂತಹ ಕಾಠಿಣ್ಯಗಳಿಂದ ಅಲ್ಪಸಂಖ್ಯಾತರನ್ನು ರಕ್ಷಿಸಬಹುದೆಂಬುದಕ್ಕೆ

ಆಧುನಿಕ ಪ್ರಜಾಪ್ರಭುತ್ವದ ಮುಖ್ಯ ಸಮಸ್ಯೆಗಳಲ್ಲಿ ಒಂದು ಎಂದರೆ ಎಷ್ಟು ಉತ್ತಮವಾಗಿ ಬಹುಸಂಖ್ಯಾತರನ್ನು ಕಾಠಿಣ್ಯಗಳಿಂದ ರಕ್ಷಿಸಬೇಕೆಂಬುದೆ ಆಗಿದೆ.

ಮಾನ್ಯರೆ, ಒಬ್ಬ ನ್ಯಾಯಶಾಸ್ತ್ರಜ್ಞರೆಂದಂತೆ, ಈಗ ಈ ಯುಗದಲ್ಲಿ, ರಾಜರ ದೈವಿಕ ಹಕ್ಕು ಬಹುಸಂಖ್ಯಾತರ ದೈವಿಕ ಹಕ್ಕಿಗೆ ಸ್ಥಾನ ಕೊಟ್ಟಿದೆ. ನಮ್ಮ ಉದ್ದೇಶವಾದರೂ, ಅಲ್ಪಸಂಖ್ಯಾತರು ಬಹುಸಂಖ್ಯಾತರಲ್ಲಿ ಮತ್ತು ಬಹುಸಂಖ್ಯಾತರು ರೂಪಿಸಿದ ಸಂವಿಧಾನದಲ್ಲಿ ವಿಶ್ವಾಸ ಹೊಂದಲಿ ಹಾಗೂ ಉದ್ದೇಶದ ಎಲ್ಲ ಆತ್ಮೀಯತೆ ಮತ್ತು ಪ್ರಾಮಾಣಿಕತೆಗಳೊಂದಿಗೆ ಸಂವಿಧಾನ ರಚಿಸಲಿ, ಎಂಬುದಕ್ಕೆ ಬಹುಸಂಖ್ಯಾತರ ಕಾಠಿಣ್ಯಗಳಿಂದ ಎಷ್ಟು ಉತ್ತಮವಾಗಿ ರಕ್ಷಿಸಬೇಕು ಎಂಬುದೇ ಆಗಿದೆ. ನಾವು ಇಲ್ಲಿ ಜನಸಂಖ್ಯೆಯ ಎಲ್ಲ ಭಾಗಗಳ ಹಕ್ಕುಗಳಿಗೆ ಭರವಸೆ ಕೊಡಲು ಮತ್ತು ಜನಸಂಖ್ಯೆಯ ಎಲ್ಲ ಭಾಗಗಳ ಮನಸ್ಸಿನಲ್ಲಿ, ಅವರ ಹಕ್ಕುಗಳನ್ನು ರಕ್ಷಿಸಲಾಗುವುದು ಎಂಬ ವಿಶ್ವಾಸ ತುಂಬುವಂತೆ, ಸಂವಿಧಾನ ರೂಪಿಸಲು, ರಾಷ್ಟ್ರದ ನಾಗರಿಕರಾಗಿ ಸೇರಿದ್ದೇವೆ. ಕನಿಷ್ಠಪಕ್ಷ ಆ ವಿಶಿಷ್ಟ ಅಲ್ಪಸಂಖ್ಯಾತ ಅಥವಾ ಸಮುದಾಯದ ಸಾಕಷ್ಟು ಪ್ರಮಾಣದ ಮತದಾರರು, ನಿರೀಕ್ಷಿಸಿದಂಥ ಪ್ರತಿನಿಧಿಗಳಿಗೆ ಮತ ಹಾಕಬಹುದಿತ್ತು ಎಂಬ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವರೆಂದು, ಎಲ್ಲ ಪ್ರತಿನಿಧಿಗಳಿಂದ ನಿರೀಕ್ಷಿಸಿದ್ದು, ಅವರ ಚುನಾವಣೆ ವಿಷಯದಲ್ಲಿ ಈ ತಿದ್ದುಪಡಿ ಮತ್ತಷ್ಟು ಮುಂದೆ ಹೋಗುವುದಿಲ್ಲ. ಇದೊಂದು ತುಂಬ ಸಮರ್ಥನೀಯ ಕೋರಿಕೆ ಮತ್ತು ಈ ತಿದ್ದುಪಡಿಯನ್ನು ಅಂಗೀಕರಿಸುವುದರಿಂದ, ಮಾನ್ಯರೆ, ನಾವು ಚುನಾವಣಾ ಕ್ಷೇತ್ರದ ಪ್ರತಿನಿಧಿಯನ್ನು ಅಂತಿಮವಾಗಿ ನಿರ್ಧರಿಸಲು ಬಹುಸಂಖ್ಯಾತರ ಹಕ್ಕನ್ನು ತೆಗೆದುಹಾಕುವುದಿಲ್ಲ. ಆದುದರಿಂದ ಮಾನ್ಯರೆ, ನಾನು ಗೌರವಾನ್ವಿತ ಮಂಡನೆಕಾರರ ಮಾತುಗಳಲ್ಲಿ "ಗೆಳೆತನದ ವಾತಾವರಣದಲ್ಲಿ" ಎಂದಿರುವ ಈ ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ಈ ಸದನಕ್ಕೆ ಮನವಿ ಮಾಡುತ್ತಿದ್ದೇನೆ. ಗೌರವಾನ್ವಿತ ಮಂಡನೆಕಾರರು ಸರಿಯಾಗಿ ಹೇಳಿದ್ದಾರೆ ಎಂದರೆ, "ನಾವು, ಕಹಿ ನೆನಪುಗಳನ್ನು ನಮ್ಮ ಹಿಂದೆಯೇ ಬಿಟ್ಟು ಬಿಡಬೇಕು" ಮತ್ತು ನಾವು ಈ ಪ್ರಶ್ನೆಯನ್ನು ಉದ್ವೇಗರಹಿತವಾಗಿ ನೋಡಬೇಕು. ಮಾನ್ಯರೆ, ನಾನು ಈ ವಿಷಯವನ್ನು ಅತೀವ ಶಾಂತವಾತಾವರಣದಲ್ಲಿ ಗಮನಿಸಲಾಗುವುದೇ ಎಂದು ಕುತೂಹಲನಾಗಿದ್ದೇನೆ. ನನಗೇ ಬಿಟ್ಟಂತೆ, ಈ ದೇಶವು ಎಲ್ಲ ರೀತಿಯ ಉದ್ವೇಗಗಳಿಂದ ಮುಕ್ತವಾದಾಗ ಮತ್ತು ಕ್ಷಣದ ತಾಪ ಶಾಂತವಾಗಿ ಕುಸಿದು ಹೋದಾಗಿನ ಸಮಯದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳನ್ನು ಕುರಿತಾದ ಈ ವರದಿಯನ್ನು ಪರಿಗಣಿಸಬೇಕಿತ್ತು ಎಂದು ನಾನು ಆಶಿಸಬಹುದಿತ್ತು. ಆದರೆ ದುರದೃಷ್ಟವಶಾತ್ ಅವನ್ನು ಈಗ ಎತ್ತಿಕೊಳ್ಳಲಾಗಿದೆ. ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ, ಎಂದರೆ ಗೌರವಾನ್ವಿತ ಮಂಡನೆಕಾರರ ಮನವಿಯನ್ನು ಅನುಸರಿಸಿ ಈ ಪ್ರಶ್ನೆಯನ್ನು ಒಂದು ಸಮಚಿತ್ತ ರೀತಿಯಲ್ಲಿ ಪರಿಗಣಿಸಬೇಕು ಮತ್ತು ಯಾವುದೇ ಆವೇಶಕ್ಕೆ ಒಳಗಾಗಬಾರದು. ಅದೂ ಅಲ್ಲದೆ, ಅಲ್ಪಸಂಖ್ಯಾತ ಸಮುದಾಯದ ಸದಸ್ಯರು, ಅವರ ಹೆಸರಿನಲ್ಲಿ ಚುನಾಯಿತರಾದ ಪ್ರತಿನಿಧಿಗಳಿಗೆ ಅವರ ಪರವಾಗಿ ಮಾತನಾಡುವ ಉದ್ದೇಶಕ್ಕಾಗಿ ಒಂದು ತೃಪ್ತಿಕರ ಪ್ರಮಾಣದ ಮತದಾರರ ವಿಶ್ವಾಸ ಹೊಂದಿರಬೇಕು ಎನ್ನುವಲ್ಲಿ, ಆವಶ್ಯಕ ಸವಲತ್ತುಗಳನ್ನು ಒದಗಿಸಬೇಕು. ಅದರಲ್ಲಿ ಯಾವುದೇ ರಾಷ್ಟ್ರೀಯ ವಿರೋಧವಿಲ್ಲ ಮತ್ತು ಮೂಲಭೂತವಾಗಿ ಯಾವ ತಪ್ಪೂ ಇಲ್ಲ. ಇನ್ನೊಂದೆಡೆ, ಅದು ಯಾವುದೇ ರೂಪದ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ನಾಗರಿಕನ ಮೂಲಭೂತ ಮತ್ತು ಅತ್ಯಂತ ಮುಖ್ಯವಾದ ಹಕ್ಕುಗಳಲ್ಲಿ ಒಂದನ್ನು ಕೊಡುತ್ತದೆ. ಅಂದರೆ ಆತ ದೇಶದ ಸಂಸತ್ತಿನಲ್ಲಿ ತಾನು ಯಾರಲ್ಲಿ ವಿಶ್ವಾಸವಿಟ್ಟಿರುತ್ತಾನೆಯೋ ಆ ವ್ಯಕ್ತಿಯಿಂದ ಈ ಅಭಿಪ್ರಾಯಗಳನ್ನು ಪ್ರತಿನಿಧಿಸುವ ಹಕ್ಕು ಹೊಂದಿರುತ್ತಾನೆ ಮತ್ತು ಅಲ್ಪಸಂಖ್ಯಾತರಿಂದ ಆಯ್ಕೆಯಾದ ಸದಸ್ಯರು ಅಲ್ಪಸಂಖ್ಯಾತರಲ್ಲಿರುತ್ತಾರೆಯಷ್ಟೆ ಹಾಗೂ ಅಲ್ಪಸಂಖ್ಯಾತರು ಶಾಸನಸಭೆಯಲ್ಲಿ ಬಹುಸಂಖ್ಯಾತರ ನಿರ್ಧಾರಗಳ ಮೇಲೆ ನಿಯಂತ್ರಿಸುವ ಸಾಮರ್ಥ್ಯ ಹೊಂದಿರುವುದಿಲ್ಲ. ಒಂದೇ ಉದ್ದೇಶವೆಂದರೆ ಅಲ್ಪಸಂಖ್ಯಾತರ ಮತ್ತು ಇತರ ಸಮುದಾಯಗಳ ಅವಲೋಕನ ಮತ್ತು ಅಭಿಪ್ರಾಯಗಳು ಆ ಸಮುದಾಯಗಳು ಯಾರಲ್ಲಿ ಕಡೇಪಕ್ಷ ಪರಿಮಿತಿಯ ವ್ಯಾಪ್ತಿವರೆಗೆ ವಿಶ್ವಾಸವಿಟ್ಟಿರುತ್ತವೆಯೋ ಅವರಿಂದ ಸೂಕ್ತವಾದ ರೀತಿಯಲ್ಲಿ ಸದನದ

ಸದಸ್ಯರ ಮೇಲೆ ಪ್ರಭಾವ ಬೀರಬಹುದು ಎಂದೇ ಆಗಿದೆ. ಈ ತಿದ್ದುಪಡಿಯ ಉದ್ದೇಶ ಮತ್ತು ನಾನು ಇದು ಹೇಗೆ ಬಹುಸಂಖ್ಯಾತರ ಹಕ್ಕುಗಳನ್ನು ಕುರಿತು ಅಲಕ್ಷಿಸುತ್ತದೆಯೇ, ಇಲ್ಲವೆ ಅದರತ್ತ ಬಾಗುತ್ತದೆಯೇ ಅಥವಾ ಅದು ಬಹುಸಂಖ್ಯಾತ ಸಮುದಾಯವನ್ನು ಯಾವುದೇ ರೀತಿಯಲ್ಲಿ ಅಲ್ಪಸಂಖ್ಯಾತರಿಗೆ ಪರಿವರ್ತಿಸುತ್ತದೆಯೇ ಎಂಬುದು ತಿಳಿದಿಲ್ಲ. ಒಳ್ಳೆಯದು, ಮಾನ್ಯರೆ, ಯಾವುದೇ ಸಂವಿಧಾನದ ಯಶಸ್ವಿ ಕಾರ್ಯನಿರ್ವಹಣೆಗಾಗಿ ರಚಿತವಾಗಿರುವ ಸಂವಿಧಾನದ ಮೂಲಕ ಎಲ್ಲ ವರ್ಗಗಳ ಜನರಲ್ಲಿ ವಿಶ್ವಾಸ ಸೃಷ್ಟಿಯಾಗಬೇಕು. ಸಾಧಿಸಲಾದ ಸ್ವಾತಂತ್ರ್ಯವು ನವಜಾತ ಸ್ವಾತಂತ್ರ್ಯವು, ಎಲ್ಲ ವರ್ಗಗಳ ಜನರಿಗೆ ಸ್ವಾತಂತ್ರ್ಯ ಮತ್ತು ಮುಕ್ತತೆ ಇರಬೇಕು ಎಂದು ನಾವು ಅಪೇಕ್ಷಿಸುತ್ತೇವೆ ಮತ್ತು ಇದನ್ನು ಜನರ ಎಲ್ಲ ಪಂಗಡಗಳ ಸ್ವಾತಂತ್ರ್ಯವನ್ನು, ಈ ಸದನವು ರೂಪಿಸಲಿರುವ ಸಂವಿಧಾನ ತಂದುಕೊಟ್ಟಲ್ಲಿ ಹಾಗೂ ಎಲ್ಲ ವರ್ಗಗಳ ಸದಸ್ಯರ ಮನಸ್ಸುಗಳಲ್ಲಿ, ವಿಶ್ವಾಸ ತುಂಬಿದಲ್ಲಿ ಅದನ್ನು ಸಾಧಿಸಬಹುದು. ನನ್ನ ತಿದ್ದುಪಡಿ ಈ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಿದೆ ಮತ್ತು ಇದು ಹಲವು ಪಂಗಡಗಳ ಹಾಗೂ ಸಮುದಾಯಗಳ ನಡುವೆ ಸಾಮರಸ್ಯ, ಸದ್ಭಾವನೆ, ಆತ್ಮೀಯತೆ ಮತ್ತು ಅನ್ಯೋನ್ಯತೆ ಪೋಷಿಸಲು ಅತ್ಯಂತ ಭರವಸೆಯ ಮಾರ್ಗ ಎಂದು ನಿವೇದಿಸುತ್ತಿದ್ದೇನೆ. ಜನಸಂಖ್ಯೆಯ ಹಲವು ಪಂಗಡಗಳ ನಡುವೆ ಸಾಮರಸ್ಯ ಮತ್ತು ಆತ್ಮೀಯತೆ ಸೃಷ್ಟಿಸಲು ಪೂರ್ವಾಪೇಕ್ಷಿತವಾದುದೆಂದರೆ ವಿವಿಧ ಪಂಗಡಗಳ ಜನರ ಮನಸುಗಳಲ್ಲಿ ವಿಶ್ವಾಸ ತುಂಬುವುದೇ ಆಗಿದೆ. ಆದುದರಿಂದ ನಾವಿಲ್ಲಿ ಕೇವಲ ವಿಶಿಷ್ಟ ಸಮುದಾಯಗಳ ಸಾಕಷ್ಟು ಪ್ರಮಾಣದಲ್ಲಿ ನಿರ್ದಿಷ್ಟ ಸಮುದಾಯದ ಮತದಾರರಿಂದ ಪ್ರತಿನಿಧಿಗಳು ಚುನಾಯಿತರಾಗಬಹುದು ಎಂದು ಬಯಸಿರುವುದನ್ನು ನೆನಪಿಡಲು ಈ ಸದನಕ್ಕೆ ಮನವಿ ಮಾಡುತ್ತಿದ್ದೇನೆ. ಒಳ್ಳೆಯದು, ಮಾನ್ಯರೆ, ಎಲ್ಲ ಪ್ರಜಾಪ್ರಭುತ್ವಗಳಲ್ಲಿ ಸ್ವೀಕೃತವಾದ ಚುನಾವಣಾ ವಿಧಾನ ಎಂದರೆ, ವರ್ಗಾಯಿಸಬಹುದಾದ ಒಂಟಿ ಮತದಿಂದ, ಅನುಪಾತೀಯ ಪ್ರಾತಿನಿಧ್ಯದ ವ್ಯವಸ್ಥೆ ಎಂದು ಎತ್ತಿ ಹೇಳಲು ಇಷ್ಟಪಡುತ್ತೇನೆ ಮತ್ತು ಈ ಸದನವು ರೂಪಿಸಲಿರುವ ಸಂವಿಧಾನದಲ್ಲಿ ಮತ್ತು ಈ ತಿದ್ದುಪಡಿ ಪ್ರಕಾರ ವರ್ಗಾಯಿಸಬಹುದಾದ ಒಂಟಿ ಮತದಿಂದ ಅನುಗುಣವಾದ ಪ್ರಾತಿನಿಧ್ಯದ ವ್ಯವಸ್ಥೆಯ ಕಡೆಗೆ ಬಂದು ಸಾಗುವ ಕ್ರಮವಾಗಿರುವುದರಿಂದ ಈ ದೇಶ ಈ ಕ್ಷಣದಲ್ಲಿ ಎಲ್ಲ ಉದ್ವೇಗ ಮತ್ತು ಆವೇಶಗಳಿಂದ ಮುಕ್ತವಾಗಿ ನಡೆಸಲಿರುವ ಕೆಲವು ಚುನಾವಣೆಗಳ ವಿಷಯವಾಗಿ ಹೇಳಲಾದ ವಿಧಾನವನ್ನು ಒಪ್ಪಿಕೊಂಡಿದೆ. ಆದುದರಿಂದ ಮಾನ್ಯರೆ, ನಾನು ಈ ಸದನವು, ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುತ್ತದೆ ಎಂದು ಆಶಿಸುತ್ತೇನೆ. ಅನುಸೂಚಿತ ಜಾತಿಗಳ ಪರವಾಗಿ ನನ್ನ ಗೌರವಾನ್ವಿತ ಗೆಳೆಯ ಶ್ರೀ ನಾಗಪ್ಪನವರು ಕೂಡ ಇದೇ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ ಎಂದು ನಾನು ಹರ್ಷಿಸುತ್ತೇನೆ. ನಾವು ಯಾರೊಬ್ಬರ ವಿರುದ್ಧ ಯಾವ ದ್ವೇಷಭಾವನೆಯೂ ಇಲ್ಲ ಅಥವಾ ಅವಮಾನಿಸುವುದಕ್ಕೆಂದು ಪ್ರೇರಿತರಾಗಿರುವುದಿಲ್ಲ. ಆದರೆ ನಾವು ಮಾತ್ರ ಅವರು ಯಾರಲ್ಲಿ ವಿಶ್ವಾಸ ಹೊಂದಿರುವರೋ ಮತ್ತು ಯಾರ ಚುನಾವಣೆಯಲ್ಲಿ ಅವರಿಗೆ ನ್ಯಾಯ ಸಮ್ಮತತೆ ಇದೆ ಎಂಬ ತೃಪ್ತಿಕರ ದನಿ ಹೊಂದಿರುವರೋ ಆ ವ್ಯಕ್ತಿಗಳಿಂದ ಶಾಸನಸಭೆಯಲ್ಲಿ ಅಂಥವರ ಧ್ವನಿಗಳು ಸೂಕ್ತವಾಗಿ ಪ್ರತಿನಿಧಿತವಾಗುತ್ತವೆ ಎಂಬುದರ ಬಗ್ಗೆ ಅಲ್ಪಸಂಖ್ಯಾತರ ಮನಸುಗಳಲ್ಲಿ ವಿಶ್ವಾಸ ಮೂಡಬೇಕು ಎಂದಷ್ಟೆ ಹೇಳಲು ಇಚ್ಛಿಸುತ್ತೇನೆ. ನಾನು ಸದನದ ಅಂಗೀಕಾರಕ್ಕೆ ನನ್ನ ತಿದ್ದುಪಡಿಯನ್ನು ಶಿಫಾರಸು ಮಾಡುತ್ತೇನೆ.

**ಶ್ರೀಮತಿ ದಾಕ್ಷಾಯಣಿ ವೇಲಾಯುಧನ್** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಪ್ರಸ್ತಾವ ಸಲ್ಲಿಸುವುದಕ್ಕಾಗಿ ನಾಲ್ವರು ಸದಸ್ಯರು ತಮ್ಮ ಹೆಸರುಗಳನ್ನು ಕೊಟ್ಟಿರುವರು ಮತ್ತು ಮೊದಲು ಗೌರವಾನ್ವಿತ ಡಾ. ಬಿ.ಆರ್.ಅಂಬೇಡ್ಕರ್ ಅವರ ಹೆಸರು ಬರುತ್ತದೆ ಎಂದು ಕಂಡುಬರುತ್ತದೆ. ಈ ತಿದ್ದುಪಡಿಯನ್ನು ಮಂಡಿಸಲು, ಜಂಟಿಮತದಾರರ ಸಮುದಾಯದ ಫಲವಾಗಿ ಚುನಾಯಿತರಾಗಿ ನಮ್ಮ ಮುಂದೆ ಬಂದ ಒಬ್ಬ ಸದಸ್ಯರು ಅವರು ಪ್ರತ್ಯೇಕ ಮತದಾರರ ಸಮುದಾಯಕ್ಕಾಗಿ ಮತ್ತು ಶೇಕಡಾವಾರಿಗಾಗಿ ಮತ್ತು ಶೇಕಡಾ ವಾರು ಪ್ರಮಾಣವೆಂದು ಹೇಳುತ್ತಿರುವುದನ್ನು ಪ್ರತಿಪಾದಿಸುತ್ತಿದ್ದ ಒಬ್ಬ ಸದಸ್ಯರನ್ನು ಈ ಸದನದಲ್ಲಿ ಇಂದು

ಕಾಣುತ್ತಿಲ್ಲದಿರುವುದು ನನಗೆ ಆಶ್ಚರ್ಯವಾಗಿದೆ. ಈ ತಿದ್ದುಪಡಿಯನ್ನು ಮಂಡಿಸಲು ಯಾವುದೇ ನಿಷ್ಠೆ ಇದ್ದಿದ್ದಲ್ಲಿ ಪಟ್ಟಿಯಲ್ಲಿ ಮೊದಲು ಇರುವ ವ್ಯಕ್ತಿಯನ್ನು ನಾವು ಕಾಣುತ್ತಿದ್ದೆವು. ಆ ಜವಾಬ್ದಾರಿಯನ್ನು ಇನ್ನೋರ್ವ ಸದಸ್ಯರು ಏಕೆ ತೆಗೆದುಕೊಂಡರೊ ನಾನರಿಯೆ. ಇದರ ಹಿಂದೆ ಏನೋ ಕಾರಣವಿರಬಹುದು. ತಿದ್ದುಪಡಿಯ ಮಂಡನೆಕಾರರಾದ ಶ್ರೀ ನಾಗಪ್ಪ ಅವರು ಜಂಟಿಮತದಾರರ ಸಮುದಾಯಗಳ ಫಲವಾಗಿ ವಿಧಾಯಕಸಭೆಗಳಿಗೆ ಅವರು ಆಯ್ಕೆಯಾಗಿ ಬಂದಾಗ ಅವರು ಸಮುದಾಯದ ಮತಗಳೊಂದಿಗೇ ಬರುವುದಿಲ್ಲ ಮತ್ತು ಹೀಗಾಗಿ ಅವರು ಸಮುದಾಯವನ್ನು ಪ್ರತಿನಿಧಿಸಲು ಅರ್ಹರಿರುವುದಿಲ್ಲ ಎಂದು ಹೇಳಿರುವರು. ಶ್ರೀ ನಾಗಪ್ಪನವರು ಅಂತಹ ಒಂದು ಚುನಾವಣೆಯ ಫಲವಾಗಿ ತಾವು ಇಲ್ಲಿಗೆ ಬಂದಿರುವರೆಂದು ತಿಳಿದರೆ, ಅವರು ಮಾಡಬಹುದಾದ ವಿವೇಕದ ಮತ್ತು ಅತ್ಯುತ್ತಮ ಕೆಲಸವೆಂದರೆ ಅವರು ಈ ವಿಧಾಯಕಸಭೆ ಮತ್ತು ಪ್ರಾಂತೀಯ ವಿಧಾಯಕಸಭೆಗಳಿಂದ ತಮ್ಮ ಉಮೇದುವಾರಿಕೆ ಅಥವಾ ಸದಸ್ಯತ್ವವನ್ನು ಹಿಂತೆಗೆದುಕೊಳ್ಳುವುದೇ ಆಗಿದೆ (ಕೇಳಿ, ಕೇಳಿ). ಯಾರೇ ಆಗಲಿ ತಾವು ಸಮುದಾಯದ ಮತಗಳಿಂದ ಅಥವಾ ಸಾಮಾನ್ಯವಾಗಿ ಜನರ ಮತಗಳಿಂದ ಬಂದಿದ್ದೇ ಆಗಿದ್ದರೆ, ಸಮುದಾಯಕ್ಕಾಗಿ ಮಾತನಾಡಲು ತಾನು ಅನರ್ಹ ಎಂದು ತಿಳಿದರೆ, ಅವರು ಸಮುದಾಯಕ್ಕೆ ಮಾಡಬಹುದಾದ ಸೇವೆಯ ಉತ್ತಮ ವಿಧಾನವೆಂದರೆ, ಸನ್ನಿವೇಶದಿಂದ ಮರೆಯಾಗುವುದು ಮತ್ತು ಏನೇ ಇರಲಿ ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸದಿರುವುದೇ ಆಗಿದೆ. ಡಾ. ಅಂಬೇಡ್ಕರ್ ಅವರು, ಈ ಸಂದರ್ಭದಲ್ಲಿ ಗೈರು ಆಗಿರುವುದು ಅವರು ಸಾಕಷ್ಟು ಬುದ್ಧಿವಂತರಾಗಿರುವುದೇ ಆಗಿದೆ. ಏಕೆಂದರೆ, ಅವರು ಇಂದು ಅಥವಾ ಯಾವುದೇ ದಿನ ವಿಧಾಯಕಸಭೆಯಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಿಲ್ಲ ಎಂದು ಅವರಿಗೆ ಗೊತ್ತಿತ್ತು. ಅಲ್ಪಸಂಖ್ಯಾತ ಸಮಿತಿಯ ಅಧ್ಯಕ್ಷರು ನೆನ್ನೆ ಮಾತನಾಡಿದಂತೆ ಈ ವಿಷಯಗಳು ಸಮಿತಿಯಲ್ಲಿ ಬಹುಮತಗಳಿಂದ ಸ್ವೀಕೃತವಾಗಿವೆ ಮತ್ತು ಅವರು ಏನೆಲ್ಲ ಕಾರಣಗಳನ್ನು ಇಲ್ಲಿ ಮುಂದಿಟ್ಟರೂ ಅವು ಅನುಮೋದನೆಯಾಗುವುದಿಲ್ಲ. ಆದುದರಿಂದ ಅವರು ಕಾಲವನ್ನು ವ್ಯರ್ಥ ಮಾಡುವಂತಿಲ್ಲ. ಸಚಿವಸಂಪುಟದ ಕೆಲಸದಲ್ಲಿ ತೊಡಗಿರುವುದರಿಂದ ಇನ್ನಾರೋ ಮತದಾರರ ಸಮುದಾಯದ ರೂಪ ಇರುವುದೆಂಬ ಕಾರಣದಿಂದ ಜನರ ನಿಜಪ್ರತಿನಿಧಿಗಳು ಬರಲು ಸಮರ್ಥರಿರುವುದಿಲ್ಲ ಎಂಬ ಸಮರ್ಥನೆಯೊಂದಿಗೆ ಮುಂದೆ ಬಂದಿದ್ದಾರೆ. ಸಮುದಾಯದ ಶೇಕಡ ಮತಗಳ ಬೇಡಿಕೆಗೆ ನಾವು ವಿಶ್ಲೇಷಿಸಿದರೆ ಅದು ಬೇರೇನೂ ಅಲ್ಲ ಕಲಬೆರಕೆಗೊಳ್ಳದ ಪ್ರತ್ಯೇಕ ಮತದಾರರ ಸಮುದಾಯಗಳ ಮತಗಳು ಎಂದು ತೀರ್ಮಾನಕ್ಕೆ ಬರುತ್ತೇವೆ (ಕೇಳಿ, ಕೇಳಿ). ತಿದ್ದುಪಡಿಯನ್ನು ಮಂಡಿಸಿದ ಗೌರವಾನ್ವಿತ ಸದಸ್ಯರನ್ನು ನಾನು ಇತರ ಸಮುದಾಯಗಳ ಸದಸ್ಯರಿಂದ ಚಲಾಯಿಸಲಾದ ಮತಗಳಿಗೆ ಅವರು ಏನಾದರೂ ಅರ್ಥ ಕೊಡುವರು ಎಂದು ಕೇಳಬೇಕು, ರೂಢಿಯಲ್ಲಿರುವ ಹಾಗೆ ನಾವು ಸಮುದಾಯದಿಂದ ಚಲಾಯಿಸಲಾದ ಮತಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಒಬ್ಬ ಅಭ್ಯರ್ಥಿಯು ಶೇಕಡ ೩೦ರಷ್ಟು ಮತ ಗಳಿಸಿದರೆ ಮತ್ತು ಇನ್ನೊಬ್ಬ ಅಭ್ಯರ್ಥಿಯು ಆತನ ಸಮುದಾಯದ ಶೇಕಡ ೩೫ರಷ್ಟು ಪಡೆದರೆ ಹಾಗೂ ಮೊದಲ ಅಭ್ಯರ್ಥಿಯು, ಸಾಮಾನ್ಯ ಸಾರ್ವಜನಿಕರಿಂದ ೨೦೦ ಮತಗಳನ್ನು ಪಡೆದರೆ ಮತ್ತು ಮುಂದಿನ ಅಭ್ಯರ್ಥಿಯು ಸಾಮಾನ್ಯ ಸಾರ್ವಜನಿಕರಿಂದ ೧೦೦ ಮತಗಳನ್ನು ಪಡೆದರೆ ಮತ್ತು ನಾವು ಸಮುದಾಯದಿಂದ ಚಲಾಯಿಸಿದ ಮತಗಳ ಶೇಕಡಾವನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ನಿಶ್ಚಿತವಾಗಿ ಎರಡನೇ ಅಭ್ಯರ್ಥಿ ಚುನಾಯಿತನಾಗಬೇಕು. ಆಗ ಸಾರ್ವಜನಿಕರಿಂದ ಎರಡನೇ ಅಭ್ಯರ್ಥಿಯು ಗಳಿಸಿದ್ದು ಮತಗಳ ಸಂಖ್ಯೆಯ ಎರಡರಷ್ಟು ಆದರೂ ಇತರ ಸಮುದಾಯಗಳಿಂದ ಚಲಾಯಿಸಲಾದ ಮತಗಳಿಗೆ ಯಾವ ಅರ್ಥವೂ ಇರುವುದಿಲ್ಲ ಎಂದಾಗುತ್ತದೆ.

ಈ ತಿದ್ದುಪಡಿಯನ್ನು ನಾನು ವಿರೋಧಿಸಲು ಇನ್ನೊಂದು ಕಾರಣವಿದೆ. ಹರಿಜನರಿಗೆ ಮತಗಳ ಈ ಶೇಕಡಾವಾರು ಪ್ರಮಾಣದ ಮತಗಳನ್ನು ಕೊಟ್ಟರೆ ಮತ್ತು ಈ ವಿಧದ ಮತದಾರರ ಸಮುದಾಯ ವ್ಯವಸ್ಥೆ ಕೊಟ್ಟರೆ, ಹರಿಜನರು ಚುನಾವಣೆಗಳ ಸಮಯದಲ್ಲಿ ಎದುರಿಸಬೇಕಾದ ಆಕರ್ಷಣೆಗಳನ್ನು ಎದುರಿಸುವ

ಸ್ಥಿತಿಯಲ್ಲಿಲ್ಲ. ಆದುದರಿಂದ ಹಲವು ಪಕ್ಷಗಳು ಅಭ್ಯರ್ಥಿಗಳನ್ನು ಸ್ಪರ್ಧೆಗೆ ಇಳಿಸಬಹುದು ಮತ್ತು ಅವರು ಹರಿಜನರನ್ನು ಖರೀದಿ ಮಾಡಿ ತಾವು ಇಚ್ಛಿಸಿದ ಯಾರೇ ಅಭ್ಯರ್ಥಿಗೆ ಮತ ಹಾಕಿಸಬಹುದು. ಹಾಗೂ ಯಾರೇ ಅಭ್ಯರ್ಥಿಯು ವಿಧಾಯಕಸಭೆಗೆ ಬರಬಹುದು ಮತ್ತು ನಿಶ್ಚಿತವಾಗಿ ಆತ ಈ ವ್ಯವಸ್ಥೆಯಲ್ಲಿ ಬಯಸಿದ ಶೇಕಡಾವಾರು ಮತಗಳನ್ನು ಪಡೆದುಕೊಂಡರೂ ಸಮುದಾಯವನ್ನು ಪ್ರತಿನಿಧಿಸದಿರಬಹುದು. ಅನುಸೂಚಿತ ಜಾತಿಗಳು ಅಥವಾ ಹರಿಜನರು ಅಥವಾ ಅವರನ್ನು ಯಾವುದೇ ಹೆಸರಿನಿಂದ ಕರೆಯಲಾದರೂ ಅವರು ಇತರ ಜನರ ಆರ್ಥಿಕ ಗುಲಾಮರಾಗಿರುವುದಿಂದ ಈ ಶೇಕಡಾವಾರು ರೀತಿಯ ಪ್ರತ್ಯೇಕ ಮತದಾರರ ಸಮುದಾಯಗಳ ಅಥವಾ ಜಂಟಿಮತದಾರರ ಸಮುದಾಯಗಳ ಅಥವಾ ಯಾವುದೇ ಇತರ ಮತದಾರರ ಸಮುದಾಯಗಳ ವಿಧಾನವನ್ನು ಒತ್ತಾಯಪಡಿಸುವುದರಲ್ಲಿ ಅರ್ಥವಿಲ್ಲ (ಹರ್ಷೋದ್ಗಾರ). ವೈಯಕ್ತಿಕವಾಗಿ ಹೇಳುವುದಾದರೆ, ನಾನು ಏನೇ ಇರಲಿ ಯಾವುದೇ ಸ್ಥಳದಲ್ಲಿ ಯಾವುದೇ ವಿಧದ ಮೀಸಲಾತಿಗೆ ಒಲವು ತೋರುವುದಿಲ್ಲ. (ಕೇಳಿ, ಕೇಳಿ). ದುರದೃಷ್ಟವಶಾತ್ ನಾವು ಈ ಎಲ್ಲ ವಿಷಯಗಳನ್ನು ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ ಬ್ರಿಟಿಷ್ ಪ್ರಭುತ್ವವು, ನಮ್ಮ ಮೇಲೆ ಯಾವುದೋ ಗುರುತು ಬಿಟ್ಟುಹೋಗಿದೆ ಮತ್ತು ನಾವು ಸದಾ ಒಬ್ಬರಿಗೊಬ್ಬರು ಭಯಪಡುತ್ತಿದ್ದೇವೆ. ಆದುದರಿಂದ ಪ್ರತ್ಯೇಕ ಮತದಾರರ ಸಮುದಾಯಗಳಿಂದ ನಮಗೆ ಏನೂ ಪ್ರಯೋಜನ ಆಗಲಾರದು. ಈ ಜಂಟಿಮತದಾರರ ಸಮುದಾಯ ಮತ್ತು ಸ್ಥಾನಗಳ ಮೀಸಲಾತಿ ಕೂಡ ಒಂದು ವಿಧದ ಪ್ರತ್ಯೇಕ ಮತದಾರರ ಸಮುದಾಯಗಳೇ. ಆದರೆ ನಾವು ಆ ದುಷ್ಟಶಕ್ತಿಯೊಂದಿಗೆ ಇರಬೇಕಾಗಿದೆ. ಏಕೆಂದರೆ ಅದೊಂದನ್ನು ಬಿಡಲಾಗದೆಂದು ಭಾವಿಸಿದ್ದೇನೆ. ನಾನು ಈ ತಿದ್ದುಪಡಿಯನ್ನು ವಿರೋಧಿಸಬೇಕೆಂದಿದ್ದೆ. ಏಕೆಂದರೆ, ಅದು ನಮ್ಮ ದಾರಿಗೆ ಅಡ್ಡವಾಗಿ ನಿಲ್ಲುತ್ತದೆ ಮತ್ತು ನಾವು ವ್ಯವಸ್ಥೆಯನ್ನು ವಾಸ್ತವ ಕಾರ್ಯನಿರ್ವಹಣೆಯಲ್ಲಿ ಅಳವಡಿಸಿದಾಗ ಸರಿಯಾದ ಸಿದ್ಧಾಂತ ರೂಪಿಸುವ, ಅದು ಹರಿಜನರ ದಾರಿಯಲ್ಲಿ ಅಡ್ಡಿಯಾಗಿ ನಿಲ್ಲುತ್ತದೆ. ಹರಿಜನರ ವಿಷಯದಲ್ಲಿ ಬೇಕಾದ ಸರಿಯಾದ ಸಿದ್ಧಾಂತದ ಕೊರತೆ ಇದೆ. ಅದು ಇಲ್ಲಿ ಇಂತಹ ತಿದ್ದುಪಡಿ ತರಲು ಅವರಿಗೆಡೆಮಾಡಿದೆ. ಅವರು ಇತರ ಸಮುದಾಯಗಳಿಂದ ದೂರ ನಿಲ್ಲುವ ಮೂಲಕ ತಮ್ಮ ಅದೃಷ್ಟವನ್ನೂ ಉತ್ತಮಪಡಿಸಬಹುದು ಎಂದು ತಿಳಿದಿದ್ದರೆ ಅವರು ತಪ್ಪು ಹಾದಿಯಲ್ಲಿದ್ದಾರೆ ಎಂದಂತಾಗುತ್ತದೆ. ಅವರು ಬಹುಸಂಖ್ಯಾತ ಸಮುದಾಯದೊಂದಿಗೆ ಸೇರಿಕೊಂಡು ಅತ್ಯುತ್ತಮವಾದುದನ್ನು ಮಾಡಬಹುದು ಹಾಗೂ ತಮ್ಮದೇ ಸಮುದಾಯದ ಮತಗಳನ್ನು ಅವಲಂಬಿಸಿರಬಾರದು. ತಿದ್ದುಪಡಿಯ ನೀವು ಈ ವಿಧದ ಮತದಾರರ ಸಮುದಾಯ ವ್ಯವಸ್ಥೆ ತಂದರೆ, ಹರಿಜನರು ಏನೊಂದೂ ಲಾಭ ಗಳಿಸುವುದಿಲ್ಲ ಎಂದು ನಾನು ಮಂಡನೆಕಾರರಿಗೆ ಭರವಸೆ ನೀಡುತ್ತೇನೆ. ಆದುದರಿಂದ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ ಮತ್ತು ಈ ಸದನದಲ್ಲಿ ಯಾರೂ ತಿದ್ದುಪಡಿಯನ್ನು ಬೆಂಬಲಿಸುವುದಿಲ್ಲ ಎಂದು ಆಶಿಸುತ್ತೇನೆ (ಹರ್ಷೋದ್ಗಾರ).

(ಹಲವು ಗೌರವಾನ್ವಿತ ಸದಸ್ಯರು ಮಾತನಾಡಲು ಎದ್ದರು)

**ಮಾನ್ಯ ಸಭಾಧ್ಯಕ್ಷರು :** ಈ ಕುರಿತು ಮಾತನಾಡಲು ಬಹುದೊಡ್ಡ ಸಂಖ್ಯೆಯಲ್ಲಿ ಸದಸ್ಯರು ನನ್ನಲ್ಲಿ ಕೋರಿದ್ದಾರೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಮಾನ್ಯರೆ, ಚರ್ಚೆ ಮುಂದುವರಿಯುವ ಮುನ್ನ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಶ್ರೀ ನಾಗಪ್ಪ ಅವರು ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತಾರೆ ಎಂಬ ನಿಬಂಧನೆಯ ಮೇರೆಗೆ ತಿದ್ದುಪಡಿಯನ್ನು ಮಂಡಿಸಲು ಅವಕಾಶ ಮಾಡಲಾಯಿತು. ಚರ್ಚೆ ಮಾಡುವುದರಿಂದ ಏನೂ ಉಪಯೋಗವಿಲ್ಲ. ಅವರು ತಾವು ತಮ್ಮನ್ನೇ ಮಾರಿಕೊಂಡಿಲ್ಲ ಎಂದು ತಮ್ಮ ಸಮುದಾಯಕ್ಕೆ ತೋರಿಸಲು ಮಾತ್ರ ಬಯಸಿದ್ದರು. ಇದನ್ನು ಗಂಭೀರವಾಗಿ ತಾವು ತೆಗೆದುಕೊಳ್ಳುವುದಿದ್ದಲ್ಲಿ ಮತ್ತು ಈ ಬಿಸಿನೆಸ್‌ಗೆ ಪ್ರಾಮುಖ್ಯ ಕೊಡುವುದಾದಲ್ಲಿ ಆಗ ಅದು ಅವರಲ್ಲಿ ತುಸು ವಿಷಯವಿದೆ ಎಂದು

ಸ್ಥಿತಿಯಲ್ಲಿಲ್ಲ. ಆದುದರಿಂದ ಹಲವು ಪಕ್ಷಗಳು ಅಭ್ಯರ್ಥಿಗಳನ್ನು ಸ್ಪರ್ಧೆಗೆ ಇಳಿಸಬಹುದು ಮತ್ತು ಅವರು ಹರಿಜನರನ್ನು ಖರೀದಿ ಮಾಡಿ ತಾವು ಇಚ್ಛಿಸಿದ ಯಾರೇ ಅಭ್ಯರ್ಥಿಗೆ ಮತ ಹಾಕಿಸಬಹುದು. ಹಾಗೂ ಯಾರೇ ಅಭ್ಯರ್ಥಿಯು ವಿಧಾಯಕಸಭೆಗೆ ಬರಬಹುದು ಮತ್ತು ನಿಶ್ಚಿತವಾಗಿ ಆತ ಈ ವ್ಯವಸ್ಥೆಯಲ್ಲಿ ಬಯಸಿದ ಶೇಕಡಾವಾರು ಮತಗಳನ್ನು ಪಡೆದುಕೊಂಡರೂ ಸಮುದಾಯವನ್ನು ಪ್ರತಿನಿಧಿಸದಿರಬಹುದು. ಅನುಸೂಚಿತ ಜಾತಿಗಳು ಅಥವಾ ಹರಿಜನರು ಅಥವಾ ಅವರನ್ನು ಯಾವುದೇ ಹೆಸರಿನಿಂದ ಕರೆಯಲಾದರೂ ಅವರು ಇತರ ಜನರ ಆರ್ಥಿಕ ಗುಲಾಮರಾಗಿರುವುದಿಂದ ಈ ಶೇಕಡಾವಾರು ರೀತಿಯ ಪ್ರತ್ಯೇಕ ಮತದಾರರ ಸಮುದಾಯಗಳ ಅಥವಾ ಜಂಟಿಮತದಾರರ ಸಮುದಾಯಗಳ ಅಥವಾ ಯಾವುದೇ ಇತರ ಮತದಾರರ ಸಮುದಾಯಗಳ ವಿಧಾನವನ್ನು ಒತ್ತಾಯಪಡಿಸುವುದರಲ್ಲಿ ಅರ್ಥವಿಲ್ಲ (ಹರ್ಷೋದ್ಗಾರ). ವೈಯಕ್ತಿಕವಾಗಿ ಹೇಳುವುದಾದರೆ, ನಾನು ಏನೇ ಇರಲಿ ಯಾವುದೇ ಸ್ಥಳದಲ್ಲಿ ಯಾವುದೇ ವಿಧದ ಮೀಸಲಾತಿಗೆ ಒಲವು ತೋರುವುದಿಲ್ಲ. (ಕೇಳಿ, ಕೇಳಿ). ದುರದೃಷ್ಟವಶಾತ್ ನಾವು ಈ ಎಲ್ಲ ವಿಷಯಗಳನ್ನು ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ ಬ್ರಿಟಿಷ್ ಪ್ರಭುತ್ವವು, ನಮ್ಮ ಮೇಲೆ ಯಾವುದೋ ಗುರುತು ಬಿಟ್ಟುಹೋಗಿದೆ ಮತ್ತು ನಾವು ಸದಾ ಒಬ್ಬರಿಗೊಬ್ಬರು ಭಯಪಡುತ್ತಿದ್ದೇವೆ. ಆದುದರಿಂದ ಪ್ರತ್ಯೇಕ ಮತದಾರರ ಸಮುದಾಯಗಳಿಂದ ನಮಗೆ ಏನೂ ಪ್ರಯೋಜನ ಆಗಲಾರದು. ಈ ಜಂಟಿಮತದಾರರ ಸಮುದಾಯ ಮತ್ತು ಸ್ಥಾನಗಳ ಮೀಸಲಾತಿ ಕೂಡ ಒಂದು ವಿಧದ ಪ್ರತ್ಯೇಕ ಮತದಾರರ ಸಮುದಾಯಗಳೇ. ಆದರೆ ನಾವು ಆ ದುಷ್ಟಶಕ್ತಿಯೊಂದಿಗೆ ಇರಬೇಕಾಗಿದೆ. ಏಕೆಂದರೆ ಅದೊಂದನ್ನು ಬಿಡಲಾಗದೆಂದು ಭಾವಿಸಿದ್ದೇನೆ. ನಾನು ಈ ತಿದ್ದುಪಡಿಯನ್ನು ವಿರೋಧಿಸಬೇಕೆಂದಿದ್ದೆ. ಏಕೆಂದರೆ, ಅದು ನಮ್ಮ ದಾರಿಗೆ ಅಡ್ಡವಾಗಿ ನಿಲ್ಲುತ್ತದೆ ಮತ್ತು ನಾವು ವ್ಯವಸ್ಥೆಯನ್ನು ವಾಸ್ತವ ಕಾರ್ಯನಿರ್ವಹಣೆಯಲ್ಲಿ ಅಳವಡಿಸಿದಾಗ ಸರಿಯಾದ ಸಿದ್ಧಾಂತ ರೂಪಿಸುವ, ಅದು ಹರಿಜನರ ದಾರಿಯಲ್ಲಿ ಅಡ್ಡಿಯಾಗಿ ನಿಲ್ಲುತ್ತದೆ. ಹರಿಜನರ ವಿಷಯದಲ್ಲಿ ಬೇಕಾದ ಸರಿಯಾದ ಸಿದ್ಧಾಂತದ ಕೊರತೆ ಇದೆ. ಅದು ಇಲ್ಲಿ ಇಂತಹ ತಿದ್ದುಪಡಿ ತರಲು ಅವರಿಗೆಡೆಮಾಡಿದೆ. ಅವರು ಇತರ ಸಮುದಾಯಗಳಿಂದ ದೂರ ನಿಲ್ಲುವ ಮೂಲಕ ತಮ್ಮ ಅದೃಷ್ಟವನ್ನೂ ಉತ್ತಮಪಡಿಸಬಹುದು ಎಂದು ತಿಳಿದಿದ್ದರೆ ಅವರು ತಪ್ಪು ಹಾದಿಯಲ್ಲಿದ್ದಾರೆ ಎಂದಂತಾಗುತ್ತದೆ. ಅವರು ಬಹುಸಂಖ್ಯಾತ ಸಮುದಾಯದೊಂದಿಗೆ ಸೇರಿಕೊಂಡು ಅತ್ಯುತ್ತಮವಾದುದನ್ನು ಮಾಡಬಹುದು ಹಾಗೂ ತಮ್ಮದೇ ಸಮುದಾಯದ ಮತಗಳನ್ನು ಅವಲಂಬಿಸಿರಬಾರದು. ತಿದ್ದುಪಡಿಯ ನೀವು ಈ ವಿಧದ ಮತದಾರರ ಸಮುದಾಯ ವ್ಯವಸ್ಥೆ ತಂದರೆ, ಹರಿಜನರು ಏನೊಂದೂ ಲಾಭ ಗಳಿಸುವುದಿಲ್ಲ ಎಂದು ನಾನು ಮಂಡನೆಕಾರರಿಗೆ ಭರವಸೆ ನೀಡುತ್ತೇನೆ. ಆದುದರಿಂದ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ ಮತ್ತು ಈ ಸದನದಲ್ಲಿ ಯಾರೂ ತಿದ್ದುಪಡಿಯನ್ನು ಬೆಂಬಲಿಸುವುದಿಲ್ಲ ಎಂದು ಆಶಿಸುತ್ತೇನೆ (ಹರ್ಷೋದ್ಗಾರ).

(ಹಲವು ಗೌರವಾನ್ವಿತ ಸದಸ್ಯರು ಮಾತನಾಡಲು ಎದ್ದರು)

**ಮಾನ್ಯ ಸಭಾಧ್ಯಕ್ಷರು :** ಈ ಕುರಿತು ಮಾತನಾಡಲು ಬಹುದೊಡ್ಡ ಸಂಖ್ಯೆಯಲ್ಲಿ ಸದಸ್ಯರು ನನ್ನಲ್ಲಿ ಕೋರಿದ್ದಾರೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಮಾನ್ಯರೆ, ಚರ್ಚೆ ಮುಂದುವರಿಯುವ ಮುನ್ನ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಶ್ರೀ ನಾಗಪ್ಪ ಅವರು ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುತ್ತಾರೆ ಎಂಬ ನಿಬಂಧನೆಯ ಮೇರೆಗೆ ತಿದ್ದುಪಡಿಯನ್ನು ಮಂಡಿಸಲು ಅವಕಾಶ ಮಾಡಲಾಯಿತು. ಚರ್ಚೆ ಮಾಡುವುದರಿಂದ ಏನೂ ಉಪಯೋಗವಿಲ್ಲ. ಅವರು ತಾವು ತಮ್ಮನ್ನೇ ಮಾರಿಕೊಂಡಿಲ್ಲ ಎಂದು ತಮ್ಮ ಸಮುದಾಯಕ್ಕೆ ತೋರಿಸಲು ಮಾತ್ರ ಬಯಸಿದ್ದರು. ಇದನ್ನು ಗಂಭೀರವಾಗಿ ತಾವು ತೆಗೆದುಕೊಳ್ಳುವುದಿದ್ದಲ್ಲಿ ಮತ್ತು ಈ ಬಿಸಿನೆಸ್‌ಗೆ ಪ್ರಾಮುಖ್ಯ ಕೊಡುವುದಾದಲ್ಲಿ ಆಗ ಅದು ಅವರಲ್ಲಿ ತುಸು ವಿಷಯವಿದೆ ಎಂದು

ತೋರಿಸುತ್ತಾರೆ. ಇದರ ಕುರಿತು ಸದನದ ಸಮಯವನ್ನೇಕೆ ತಾವು ವ್ಯರ್ಥವಾಗಿಸಲು ನೋಡುವಿರಿ?

**ಮಾನ್ಯ ಸಭಾಧ್ಯಕ್ಷರು :** ಶ್ರೀ ನಾಗಪ್ಪನವರ ತಿದ್ದುಪಡಿ ಕುರಿತು ಚರ್ಚೆ ನಡೆಸುವ ಆವಶ್ಯಕತೆ ಇದೆಯೆ?

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಅದನ್ನು ಅಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕಿಲ್ಲ.

**ಹಲವರು ಗೌರವಾನ್ವಿತ ಸದಸ್ಯರು :** ಮುಕ್ತಾಯ ಮಾಡಿ, ಮುಕ್ತಾಯ ಮಾಡಿ.

**ಮಾನ್ಯ ಸಭಾಧ್ಯಕ್ಷರು :** ಮುಕ್ತಾಯ ಮಾಡಲಾಗುವುದಿಲ್ಲ. ಶ್ರೀ ಇಬ್ರಾಹಿಂ ಅವರಿಂದ ಇನ್ನೊಂದು ತಿದ್ದುಪಡಿ ಇದೆ.

(ಖಾಜಿ ಸೈಯದ್ ಕರೀಮುದ್ದೀನ್ ಮಾತನಾಡಲು ಎದ್ದು ನಿಂತರು)

**ಮಾನ್ಯ ಸಭಾಧ್ಯಕ್ಷರು :** ಅದರ ಬಗೆಗೆ ಮಾತನಾಡಲು ನೀವು ಬಯಸುವಿರಾ? ಏನೇ ಆಗಲಿ ನಾವು ಶ್ರೀ ನಾಗಪ್ಪನವರ ತಿದ್ದುಪಡಿಯನ್ನು ಕೈಬಿಟ್ಟಿದ್ದೇವೆ.

**ಶ್ರೀ ಖಾಜಿ ಸೈಯದ್ ಕರೀಮುದ್ದೀನ್** (ಸಿ.ಪಿ. ಮತ್ತು ಬೇರಾರ್ : ಮುಸ್ಲಿಮ್) : ಮಾನ್ಯರೆ, ನಾನು ಶ್ರೀ ಇಬ್ರಾಹಿಂ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ ಮತ್ತು ನಾನು ಕೆಲವು ಮಾತುಗಳನ್ನು ಹೇಳಬೇಕು. ನಾನು ಪಂಡಿತ ಪಂತರ ಪ್ರಶಂಸನೀಯ ಭಾಷಣವನ್ನೂ ಮತ್ತು ಸರ್ದಾರ್ ಪಟೇಲ್ ಅವರ ಜಂಟಿ ಮತದಾರರ ಸಮುದಾಯಗಳ ಬಗ್ಗೆ ಹುರುಪಿನಿಂದ ಕೂಡಿದ ಸಮರ್ಥನೆಯನ್ನು ಮಹಾ ತಾಳ್ಮೆಯಿಂದ ಕೇಳಿದ್ದೇನೆ. ನನ್ನ ನಿವೇದನೆ ಎಂದರೆ, ಪ್ರತ್ಯೇಕ ಮತದಾರರ ಸಮುದಾಯಗಳ ಕಾರಣದಿಂದ ಮಾತ್ರ ಪ್ರಸ್ತುತ ಸನ್ನಿವೇಶ ಸೃಷ್ಟಿಯಾಗಿದೆ ಎಂಬುದನ್ನು ನಾನು ಒಪ್ಪುವುದಿಲ್ಲ. ಪ್ರಸ್ತುತ ಸನ್ನಿವೇಶಕ್ಕೆ ಎಡೆ ಮಾಡಿರುವ ಹಲವು ಅಂಶಗಳನ್ನು ಕಡಿಮೆ ಮಾಡಿ ಹೇಳಲು ನಾನು ಇಚ್ಛಿಸುವುದಿಲ್ಲ; ಆದರೆ ಮುಸ್ಲಿಮ್ ಲೀಗ್ ಪಕ್ಷದ ಪರವಾಗಿ, ಮಾನ್ಯರೆ, ನಾನು ಭಾರತದಿಂದ ಕೇಡನ್ನು ನಿರ್ಮೂಲಮಾಡಲು ನಾವು ಕೂಡ ಅದೇ ರೀತಿ ನಿರ್ಧರಿಸಿದ್ದೇವೆ ಮತ್ತು ನಾವು ಈ ವಿಷಯದಲ್ಲಿ ನಿಮ್ಮೊಂದಿಗೆ ಕೈಜೋಡಿಸಿ ಸಹಕರಿಸುತ್ತೇವೆ. ಈ ಸಹಕಾರಕ್ಕೆ ಚ್ಯುತಿ ಬರದಂತೆ ನೋಡಿಕೊಳ್ಳುತ್ತೇವೆ.

ಶ್ರೀ ಇಬ್ರಾಹಿಂ ಒಂದು ತಿದ್ದುಪಡಿ ಮಂಡಿಸಿದ್ದಾರೆ. ಮಾನ್ಯರೆ, ಅದರಲ್ಲಿ ಸ್ಥಾನಗಳ ಮೀಸಲಾತಿಯೊಂದಿಗೆ ಜಂಟಿ ಮತದಾರರ ಸಮುದಾಯಗಳು ಇರಬೇಕು ಮತ್ತು ಒಂದು ವಿಶಿಷ್ಟ ಸಮುದಾಯದ ಒಬ್ಬರು ಸದಸ್ಯರು ತಮ್ಮ ಸಮುದಾಯದ ಶೇಕಡ ೩೫ರಷ್ಟು ಮತಗಳನ್ನು ಗಳಿಸಬೇಕು ಎಂದು ಇದೆ. ಇದರಲ್ಲಿ ಸಂದೇಹಗಳು ಇವೆ ಎಂಬುದನ್ನು ನಾವು ಮರೆಯಲಾರೆವು. ದೇಶದಲ್ಲಿ ಪ್ರಸ್ತುತ ಸನ್ನಿವೇಶಕ್ಕೆ ನಾವು ಕುರುಡರಾಗಿರಬಾರದು. ಆದರೆ ಸಂದೇಹಗಳು ಇವೆ, ಅಪನಂಬಿಕೆಗಳಿವೆ ಮತ್ತು ನಾವು ಬಹಳ ಜಾಗರೂಕತೆಯಿಂದ ಮತ್ತು ಶಾಂತರೀತಿಯಿಂದ ಹೋಗಬೇಕು. ಈ ಸದನವು ಈಗಾಗಲೇ ಪ್ರತ್ಯೇಕ ಮತದಾರರ ಸಮುದಾಯಗಳನ್ನು ರದ್ದುಮಾಡಿದೆ ಮತ್ತು ನಾವು ಅಲ್ಪಸಂಖ್ಯಾತರನ್ನು ತೃಪ್ತಿಪಡಿಸುವ ಒಂದು ಸೂತ್ರವನ್ನು ಕಂಡುಹಿಡಿಯಬೇಕಿದೆ. ನಮ್ಮ ದೇಶವು ಪ್ರಗತಿಯನ್ನು ಹೊಂದಬೇಕು ಎಂಬ ಅಭಿಪ್ರಾಯ ಕೂಡ ಉಳ್ಳವರಾಗಬೇಕು. ಶ್ರೀ ಇಬ್ರಾಹಿಂ ಮಂಡಿಸಿರುವ ಸೂತ್ರ ಅಥವಾ ತಿದ್ದುಪಡಿಯಲ್ಲಿ ಜಂಟಿ ಮತದಾರರ ಸಮುದಾಯವಿರಬೇಕು ಎಂದು ಅಭಿಪ್ರಾಯವನ್ನು ತಿಳಿಸಲಾಗಿದೆ. ಒಂದು ಅಲ್ಪಸಂಖ್ಯಾತ ಸಮುದಾಯದಿಂದ ಒಬ್ಬ ಅಭ್ಯರ್ಥಿಯು ಇತರ ಸಮುದಾಯಗಳಿಂದ ಮತಗಳನ್ನು ಕೈ ಮುಗಿದು ಯಾಚಿಸಬೇಕು. ಕೋಮುವಾದ ಕ್ರಮೇಣ ಇಲ್ಲವಾಗುತ್ತದೆ. ಆಗ ಆತ ಅವನ ಸ್ವಂತ ಸಮುದಾಯದ ಒಬ್ಬ ಪ್ರತಿನಿಧಿಯೇ ಆಗಬೇಕು. ಯಾವ ಉದ್ದೇಶಕ್ಕಾಗಿ ತಾವು ಸ್ಥಾನಗಳ ಮೀಸಲಾತಿ ಕೊಟ್ಟಿರುವಿರಿ? ಸ್ಥಾನಗಳ ಮೀಸಲಾತಿ ಕೊಟ್ಟಿರುವುದು ಆತ ಒಂದು ವಿಶಿಷ್ಟ ಸಮುದಾಯವನ್ನು ಪ್ರತಿನಿಧಿಸಲೇಬೇಕೆಂಬ ಉದ್ದೇಶಕ್ಕಾಗಿ ಇದೆ.

**ಒಬ್ಬ ಗೌರವಾನ್ವಿತ ಸದಸ್ಯರು :** ಇಲ್ಲ ಮಾನ್ಯರೆ.

**ಶ್ರೀ ಖಾಜಿ ಸೈಯದ್ ಕರೀಮುದ್ದೀನ್ :** ಆತ ತನ್ನ ದೃಷ್ಟಿಯಲ್ಲಿ, ತನ್ನ ಸಮುದಾಯದ ಭಾವನೆಗಳನ್ನು ಹೊಂದಿರಬೇಕು. ಆತ ತನ್ನ ಮುಂದೆ ತನ್ನ ಸಮುದಾಯದ ಆಕಾಂಕ್ಷೆಗಳನ್ನು ಹೊಂದಿರಬೇಕು. ಆತನ ಸಮುದಾಯದ ಮತಗಳ ಕನಿಷ್ಠ ಸಂಖ್ಯೆಯನ್ನು ನಿಶ್ಚಿತಗೊಳಿಸದಿದ್ದರೆ ಮತ್ತು ಆತ ಅದನ್ನು ಗಳಿಸಲು ಸಮರ್ಥನಿಲ್ಲದಿದ್ದರೆ, ನನ್ನ ನಿವೇದನೆಯು ಅದು ತನ್ನ ಕಕ್ಷಿದಾರನ ಆಸಕ್ತಿಗಳನ್ನು ವಿರೋಧಿಸುವಂಥ ಒಬ್ಬ ವಕೀಲನನ್ನು ಇಟ್ಟುಕೊಂಡ ಒಬ್ಬ ಕಕ್ಷಿದಾರನ ಸ್ಥಿತಿಯಂತೆ ಆಗುತ್ತದೆ ಎಂಬುದೇ ಆಗಿದೆ. ಒಬ್ಬ ಕ್ಷುಲ್ಲಕ ವ್ಯಕ್ತಿ ಮನುಷ್ಯ ಅಥವಾ ಒಬ್ಬ ಖೋಟಾ ಮತಾಂತರಿ ಕೂಡ ಒಂದು ಸಮುದಾಯದ ಒಬ್ಬ ಯೋಗ್ಯ ಅಥವಾ ನಿಜಸದಸ್ಯನನ್ನು ಸೋಲಿಸಲು ಸಮರ್ಥನಾಗಬಹುದು. ಆದುದರಿಂದ ಸ್ಥಾನಗಳ ಮೀಸಲಾತಿಯ ಸವಲತ್ತಿನ ದೃಷ್ಟಿಯಿಂದ, ಒಂದು ನಿರ್ದಿಷ್ಟ ಅವಧಿಗೆ ನಾವು, ಈ ಕನಿಷ್ಠ ಸಂಖ್ಯೆಯ ಮತಗಳನ್ನು ಒಂದು ವಿಶಿಷ್ಟ ಸಮುದಾಯದ ಒಬ್ಬ ಅಭ್ಯರ್ಥಿಗೆ ಕೊಡಲೇಬೇಕು ಎಂಬುದು ನನ್ನ ನಿವೇದನೆ. ಜಂಟಿ ಮತದಾರರ ಸಮುದಾಯಗಳ ಉಪಕ್ರಮವು ಕೇವಲ ಒಂದು ಮೋಡಿ ಮತ್ತು ಎಲ್ಲ ಈ ಕೇಡುಗಳನ್ನು ಹೋಗಲಾಡಿಸುತ್ತದೆ ಎಂಬುದನ್ನು ನಾನು ಒಪ್ಪುವುದಿಲ್ಲ. ಅನುಸೂಚಿತ ಜಾತಿಗಳ ಸಮಸ್ಯೆ, ಶತಮಾನಗಳ ಕಾಲದಿಂದಲೂ ಈ ಜಂಟಿ ಮತದಾರರ ಸಮುದಾಯಕ್ಕೂ ಮೀರಿದ್ದಾಗಿದೆ. ಪ್ರಸಕ್ತ ಸ್ಥಿತಿಗೆ ಕೊಡುಗೆ ನೀಡಿದ ಹಲವು ಇತರ ಗಮನಿಸಬೇಕಾದ ಅಂಶಗಳೂ ಇವೆ. ತಾವು ಸ್ಥಾನಗಳ ಮೀಸಲಾತಿ ಕೊಡುವ ಔದಾರ್ಯದ ಇಂಗಿತ ತೋರಿರುವುದರಿಂದ ತಾವು ಒಂದು ನಿರ್ದಿಷ್ಟ ಅವಧಿಯ ಕಾಲ ಮುಸ್ಲಿಮ್ ಅಲ್ಪಸಂಖ್ಯಾತರಿಗೆ ಅವರ ರಾಜಕೀಯ ಆಕಾಂಕ್ಷೆಗಳನ್ನು ತೃಪ್ತಿಪಡಿಸುವ ಸಮುದಾಯದಿಂದ ಕನಿಷ್ಠ ಸಂಖ್ಯೆಯ ಮತಗಳನ್ನು ಹೊಂದಲು ಅವಕಾಶ ಕೊಡಬೇಕು ಎಂದು ನಾನು ಮನಃಪೂರ್ವಕವಾದ ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಎಚ್.ಜೆ. ಖಾಂಡೇಕರ್ :** *[ಮಾನ್ಯ ಸಭಾಧ್ಯಕ್ಷರೆ, ನನ್ನ ಗೆಳೆಯ ಶ್ರೀ ನಾಗಪ್ಪನವರು ತಮ್ಮ ಮುಂದೆ ಇರಿಸಿದ ತಿದ್ದುಪಡಿಯನ್ನು ನಾನು ವಿರೋಧಿಸುವ ನಿಲುವು ತಾಳಿದ್ದೇನೆ. ಈ ತಿದ್ದುಪಡಿಯು ನಾಲ್ವರು ಸದಸ್ಯರ ಹೆಸರಿನಲ್ಲಿದೆ. ಮೊದಲ ಹೆಸರು ಡಾ. ಅಂಬೇಡ್ಕರ್ ಅವರದ್ದಾಗಿದೆ ಮತ್ತು ನಿಮಗೆ ಎಲ್ಲವೂ ತಿಳಿದಿದೆ. ಎರಡನೇ ದುಂಡುಮೇಜಿನ ಸಮ್ಮೇಳನದ ಕಾಲದಿಂದ ಸೇರಿರುವ ಅಲ್ಪಸಂಖ್ಯಾತ ಉಪಸಮಿತಿ, ಸಲಹಾ ಸಮಿತಿವರೆಗೆ ಅವರು, ಜಂಟಿಮತದಾರರ ಸಮುದಾಯಕ್ಕಿದ್ದ ಬೇಡಿಕೆ ಬಿಟ್ಟುಬಿಟ್ಟರು ಮತ್ತು ಪ್ರತ್ಯೇಕ ಮತದಾರರ ಸಮುದಾಯಗಳ ಬೇಡಿಕೆ ಮುಂದುವರಿಸಿದರು. ಈ ಬೇಡಿಕೆಯ ಪ್ರಶ್ನೆ ಕುರಿತಂತೆ ತನ್ನ ಪಕ್ಷಕ್ಕೆ ಸೇರಿದ, ತನ್ನ ದೇಶದ ಎಲ್ಲ ಹರಿಜನರಿಗೆ ಅವರ ಸಂದೇಶ ಯಾವ ಹಂತದವರೆಗೆ ಹೋಯಿತೆಂದರೆ, ಅವರು ಹಿಂದೂಗಳಲ್ಲ ಆದರೂ ಅವರು ಹಿಂದೂಗಳಿಂದ ಪ್ರತ್ಯೇಕವಾದ ಸಮುದಾಯವಾಗಿ ಇರಲು ಬಯಸುತ್ತಾರೆ. ಹಾಗೂ ಅವರು ಹಿಂದೂ ಧರ್ಮದ ಚೌಕಟ್ಟಿನಲ್ಲಿ ಇಲ್ಲ ಮತ್ತು ಈ ಕಾರಣಕ್ಕಾಗಿ ಅವರು ಪ್ರತ್ಯೇಕ ಮತದಾರರ ಸಮುದಾಯಗಳನ್ನು ಬಯಸಿದ್ದರು ಎಂಬುವವರೆಗಿತ್ತು. ಈ ವಿಷಯ, ದೇಶದಲ್ಲಿ ಕಳೆದ ಹದಿನೈದು ವರ್ಷಗಳ ಕಾಲವಿದ್ದು ಸವರ್ಣೀಯ ಹಿಂದೂಗಳ ನಡುವೆ ಒಂದು ವಿಧದ ಅಭಿಪ್ರಾಯದ ವಿರೋಧದ ಫಲ ಕಂಡಿದೆ ಮತ್ತು ಅಂಬೇಡ್ಕರ್ ಅವರ ಪಕ್ಷದ ಹರಿಜನರು ಹಿಂದೂಗಳೊಂದಿಗೆ ಮಾತನಾಡಲು ಬಯಸುವುದಿಲ್ಲ. ಆದರೆ, ಜಂಟಿ ಮತ್ತು ಪ್ರತ್ಯೇಕ ಮತದಾರರ ಸಮುದಾಯಗಳಿಗೆ ಸಂಬಂಧಿಸಿದ ವಿಷಯವು ಅಲ್ಪಸಂಖ್ಯಾತ ಉಪಸಮಿತಿ ಮುಂದೆ ಬಂದಾಗ ಡಾ. ಅಂಬೇಡ್ಕರ್ ಅವರು ಮತ್ತೆ ಒತ್ತಾಯಿಸಲಿಲ್ಲ. ಆದರೆ ಅದನ್ನು ತತ್ತ್ವದ ಬೆಂಬಲದಿಂದ ಅವರು ವಾದಿಸಲೂ ಇಲ್ಲ. ಹೀಗಾಗಿ ಅವರು, ಅದನ್ನು ಹಿಂತೆಗೆದುಕೊಂಡರು ಎಂದು ಹೇಳಲು ಹರ್ಷಿಸುತ್ತೇನೆ.

ಕಳೆದ ೧೫ ವರ್ಷಗಳ ಕಾಲ ನಾನು ಆಸಕ್ತಿಯಿಂದ ಡಾ. ಅಂಬೇಡ್ಕರ್ ಅವರ ಭಾಷಣಗಳನ್ನು ಆಲಿಸಿದ್ದೇನೆ ಮತ್ತು ವೃತ್ತಪತ್ರಿಕೆಗಳಲ್ಲಿ ಕೂಡ ಓದಿದ್ದೇನೆ. ಆದರೆ ಪ್ರತ್ಯೇಕ ಮತದಾರರ ಸಮುದಾಯಗಳಿಗೆ ಬೇಡಿಕೆಗೆ ಬೆಂಬಲವಾಗಿ ಯಾವ ವಾದವೂ ಅವುಗಳಲ್ಲಿರಲಿಲ್ಲ. ಈ ರೀತಿಯಲ್ಲಿ ಬೇಡಿಕೆಯು ವಿವೇಚನೆಗೆ

ನಿಲ್ಲಲಿಲ್ಲವಾಗಿ, ಅವರು ಅದಕ್ಕೆ ಒತ್ತಾಯಿಸಲಿಲ್ಲ ಆದರೆ ಅದನ್ನು ಹಿಂತೆಗೆದುಕೊಂಡರು. ಇದು ನಮಗೆ ಒಂದು ಮಹತ್ತ್ವದ ವಿಜಯ. ಬೇಡಿಕೆ ಹಿಂತೆಗೆದುಕೊಂಡಂತೆ ಪ್ರತ್ಯೇಕ ಮತದಾರರ ಸಮುದಾಯ ಕುರಿತು ಆಲೋಚಿಸಲಾಯಿತು. ಅದರಿಂದ ಶೇಕಡವಾರು ಮನವಿಗೆ ಒತ್ತುಕೊಡಲಾಯಿತು. ಸ್ಪಷ್ಟವಾಗಿ ಹೇಳಬೇಕೆಂದರೆ, ಅವರು ಒಂದು ವಿಭಿನ್ನ ರೂಪದಲ್ಲಿ ಪ್ರತ್ಯೇಕ ಮತದಾರರ ಸಮುದಾಯ ಬಯಸಿದ್ದರೆಂಬುದು ಆಗಿದೆ. ಈ ದೇಶದಲ್ಲಿ ಪ್ರತ್ಯೇಕ ಮತದಾರರ ಸಮುದಾಯಗಳ ಪರಿಣಾಮಗಳನ್ನು ತಮಗೆ ನಾನು ವಿವರಿಸಬಹುದಾಗಿದೆ. ಲಾರ್ಡ್ ಮಾರ್ಲೆ ಮಿಂಟೊ ಅವರಿಂದಾಗಿ ಮುಸ್ಲಿಮರು ಪ್ರತ್ಯೇಕ ಮತದಾರರ ಸಮುದಾಯಗಳನ್ನು ಪಡೆದರು. ಫಲಿತಾಂಶವೆಂದರೆ ನಮ್ಮ ದೇಶ ಎರಡಾಗಿ ಒಡೆಯಿತು. ಅದೇ ಪ್ರತ್ಯೇಕ ಮತದಾರರ ಸಮುದಾಯಗಳನ್ನು ನಮ್ಮ ಮುಂದೆ ಶೇಕಡಾದ ರೂಪದಲ್ಲಿ ತರಲಾಗುತ್ತಿದೆ. ಇದು ಹರಿಜನರಿಗಾಗಲಿ ಅಥವಾ ತಮ್ಮ ಮುಸ್ಲಿಮ್ ಸೋದರರಾಗಲಿ ಒಪ್ಪಿದರೆ, ಆಗ ನನ್ನ ಗೆಳೆಯ ಶ್ರೀ ಜಿನ್ನಾ ಅವರು ಯಾವಾಗಲೂ ಭಾರತದ ಮುಸ್ಲಿಮರು ಮತ್ತು ಪಾಕಿಸ್ತಾನದ ಮುಸ್ಲಿಮರು ಎಂದು ಹೇಳುತ್ತಿದ್ದಾರಲ್ಲ, ಅದರ ಸಾರ್ಥಕತೆ, ಅಂದರೆ ಭಾರತದ ಒಳಗೇ ಪಾಕಿಸ್ತಾನದ ಸಿದ್ಧತೆ. ಈಗಾಗಲೇ ಸಾಕಷ್ಟು ನರಳಾಟ ಉಂಟಾಗಿದೆ. ಭಾರತ ಎರಡಾಗಿ ವಿಭಜನೆಗೊಂಡಿದೆ. ಮುಸ್ಲಿಮ್ ಸೋದರರು ತಾವು ಬಯಸಿದುದನ್ನು ಮತ್ತು ತಮ್ಮ ಪ್ರಯೋಜನಗಳನ್ನು ಪಡೆದಿದ್ದಾರೆ. ಅದನ್ನು ಪಡೆದುಕೊಂಡರೂ ಅವರು ಭಾರತದೊಳಗೇ ಪಾಕಿಸ್ತಾನ ಸೃಷ್ಟಿಸಲು ಯತ್ನಿಸದಂತೆ ಇರುವುದೇ ಉತ್ತಮವಾಗಿತ್ತು ಮತ್ತು ಈ ಸದನದಲ್ಲಿ ಈ ವಿಧದ ತಿದ್ದುಪಡಿಯೊಂದನ್ನು ತರಬಾರದಿತ್ತು.

ಈ ದೇಶದಲ್ಲಿ ಸುಮಾರು ೩ ಕೋಟಿಗಳಷ್ಟು ಇರುವ ನಮ್ಮ ಮುಸ್ಲಿಮ್ ಸೋದರರು ಸಲಹಾ ಸಮಿತಿಯ ವರದಿಯಂತೆ ತಾವು ಗಳಿಸಲೇಬೇಕಾದ ಎಲ್ಲ ಸೌಲಭ್ಯಗಳನ್ನು ಪಡೆದಿದ್ದಾರೆ ಮತ್ತು ಪಡೆಯುವವರಿದ್ದಾರೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಆದರೂ ಅವರು ತಮ್ಮ ಪ್ರತಿನಿಧಿಗಳನ್ನಾಯ್ಕೆ ಮಾಡಲು ನೆರವಾಗುವುದಕ್ಕೆ ಶೇಕಡ ಮತಗಳನ್ನು ಪಡೆಯಲೇಬೇಕು ಎನ್ನುತ್ತಾರೆ. ಪುನಃ ನನ್ನ ಗೆಳೆಯರೂ ಡಾ. ಅಂಬೇಡ್ಕರ್ ಅವರ ಮಿತ್ರರೂ ಆದ ಶ್ರೀ ನಾಗಪ್ಪನವರು ಕೂಡಾ ಯಾವುದೋ ನಿರೀಕ್ಷೆಗಳ ಕುರಿತು ಅವರ ರಾಗಕ್ಕೆ ತಾಳ ಹಾಕುತ್ತಿದ್ದಾರೆ. ಈ ರೀತಿಯಲ್ಲಿ ಮಾತ್ರ ನಮ್ಮ ನಿಜಪ್ರತಿನಿಧಿಗಳನ್ನು ಆಯ್ಕೆಮಾಡಬೇಕು ಎಂದು ಅದೇ ವಿಷಯ ಹೇಳುತ್ತಾರೆ. ನಾನು ಈ ಸೋದರರನ್ನು, ನಿಜಪ್ರತಿನಿಧಿ ಎಂದರೇನು ಎಂದು ಕೇಳಬಯಸುವೆ. ನಾನು ಈ ವಿಧಾಯಕಸಭೆಯ ಉದಾಹರಣೆ ಕೊಡುತ್ತೇನೆ. ನನ್ನ ಗೆಳೆಯರು ಹರಿಜನರ ನಿಜಪ್ರತಿನಿಧಿಗಳಲ್ಲದಿದ್ದರೆ, ಖಾಜಿಗಳು ಮುಸ್ಲಿಮರ ನಿಜಪ್ರತಿನಿಧಿಗಳಾಗಿ ಇಲ್ಲಿ ಇಲ್ಲದಿದ್ದರೆ, ಈ ವಿಧಾಯಕಸಭೆ ಏನಾಗುತ್ತದೆ? ಈ ಪ್ರಾಮಾಣಿಕ ಮುಸ್ಲಿಮ್ ಸೋದರರು 'ಜಿನ್ನಾ ಜಿಂದಾಬಾದ್' ಎಂದು ಕೂಗಿದರೆ, ನಾವು "ಭಾರತ ಮಾತಾಕಿ ಜೈ" ಎಂದು ಎಂದು ಕೂಗುತ್ತೇವೆ. ಅಥವಾ ಇತರ ಘೋಷಣೆಗಳು ಮತ್ತು ಅಂತಹ ಕ್ಷುಲ್ಲಕ ಕಿರಿಕಿರಿಗಳು ಮುಂದುವರಿದರೆ ಫಲಿತಾಂಶವೇನು? ನಾನು ಶ್ರೀ ನಾಗಪ್ಪ ಮತ್ತು ಖಾಜಿ ಸಾಹಿಬ್‌ರನ್ನು ಆಗ ನರಳುವರು ಯಾರು? ಬಹುಸಂಖ್ಯಾತರೇ ಅಥವಾ ಅಲ್ಪಸಂಖ್ಯಾತರೇ ಎಂದು ಕೇಳಬಯಸುತ್ತೇನೆ. ಈ ವಿಧದ ಯಾವುದೇ ನಿರ್ಣಯ ಸೂಕ್ತವಾದುದಲ್ಲ ಆದುದರಿಂದ ನಾನು ಶ್ರೀ ನಾಗಪ್ಪನವರ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಿಲ್ಲ.

ನಾನೀಗತಾನೆ ಎತ್ತಿ ಹೇಳಿದ ಇನ್ನೊಂದು ಅಂಶ ಈ ಮತಗಳ ಶೇಕಡ ಪ್ರತ್ಯೇಕ ಮತದಾರರ ಸಮುದಾಯಗಳ ಮೂಲಕ ಬಂದಿರುವುದು ಎಂಬುದು. ಪ್ರಸ್ತುತ ತಿದ್ದುಪಡಿ ಅನಂತರವೂ, ನಮ್ಮ ಮುಂದೆ ಇನ್ನೂ ಕೆಲವು (ಶೇಕಡ ಮತಗಳನ್ನು ಬೆಂಬಲಿಸಿ) ತಿದ್ದುಪಡ್ಡಿಗಳು ಬರುತ್ತಲೇ ಇವೆ. ಅವು ಪ್ರತ್ಯೇಕ ಮತದಾರರ ಸಮುದಾಯಗಳ ಕೂಸು ಅಷ್ಟೆ. ಈ ಸದನದಲ್ಲಿ ಇಂಥ ತಿದ್ದುಪಡಿಗಳನ್ನು ತರುವುದೇ ಸೂಕ್ತವಲ್ಲ. ಇದು ಸದನದ ಸಮಯವನ್ನು ವ್ಯರ್ಥಮಾಡುತ್ತದೆಯಷ್ಟೆ. ನಾನು ಮತಗಳ ಶೇಕಡದ ಫಲವಾಗಿ ಏನೆಲ್ಲ ಆಗಿದೆ, ಅದು ನಮ್ಮ ಮುಂದೆ ಇದೆ ಎಂದು ಹೇಳಬಯಸುತ್ತೇನೆ. ಪ್ರತ್ಯೇಕ ಮತದಾರರ ಸಮುದಾಯಗಳು ಮತ್ತು

ಪುಣೆ ಒಪ್ಪಂದಗಳ ಫಲವಾಗಿ ಇಂದು ಹಿಂದೂಗಳ ವಿರುದ್ಧ ಭಾರಿ ಚಳವಳಿಗಳು ನಡೆಯುತ್ತಿವೆ ಮತ್ತು ಒಂದು ಜಾತಿ ಮತ್ತು ಇನ್ನೊಂದು ಜಾತಿ ನಡುವೆ ಭಿನ್ನಾಭಿಪ್ರಾಯಗಳಿವೆ. ಪ್ರಾಥಮಿಕ ಚುನಾವಣೆ ಮತ್ತು ಸಂಚಿತ ಮತದಾನಕ್ಕೆ ಅವಕಾಶ ಕಲ್ಪಿಸಿದ ಪುಣೆ ಒಪ್ಪಂದದ ಅರ್ಥ ಪರೋಕ್ಷವಾಗಿ ಪ್ರತ್ಯೇಕ ಮತದಾರರ ಸಮುದಾಯ. ಈ ಪರಸ್ಪರ ತುಮುಲವನ್ನು ಡಾ. ಅಂಬೇಡ್ಕರ್ ಮತ್ತು ಶ್ರೀ ನಾಗಪ್ಪ ಹೆಚ್ಚಿಸುತ್ತಾರೆಯೋ ಅಥವಾ ಇಲ್ಲವಾಗಿಸುತ್ತಾರೋ? ಅವರು ಇಲ್ಲವಾಗಿಸುವುದಾದರೆ ಅವರು ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಬೇಕು. ಸವರ್ಣೀಯ ಹಿಂದೂಗಳು ಮತ್ತು ಹರಿಜನರ ನಡುವಿನ ಪ್ರಕ್ಷುಬ್ಧತೆ ಹೆಚ್ಚಿದರೆ ಹರಿಜನರೇ ತೊಂದರೆಗೆ ಒಳಗಾಗುತ್ತಾರೆ ಲಾಭ ಪಡೆಯುವವರಾಗುವುದಿಲ್ಲ. ಡಾ. ಅಂಬೇಡ್ಕರ್ ಮತ್ತು ಶ್ರೀ ನಾಗಪ್ಪನವರ ಈ ಮನೋಧರ್ಮದ ಕಾರಣ ಹರಿಜನರು ಶಾಶ್ವತವಾಗಿ ಹರಿಜನರಾಗೇ ಉಳಿಯುತ್ತಾರೆ ಮತ್ತು ಅವರ ಸ್ಥಿತಿ ಕ್ರಮೇಣ ಹದಗೆಡುತ್ತದೆ. ಜಾತಿಗಳೊಳಗೆ ಉಪಜಾತಿಗಳಿವೆ. ಹರಿಜನರಲ್ಲಿ ಹಲವು ಉಪಜಾತಿಗಳಿವೆ. ಹಾಗೆ ನೋಡಿದರೆ, ಹರಿಜನರು ಯಾವುದೇ ಸಮುದಾಯದ ಒಂದು ಭಾಗವಲ್ಲ, ಆದರೆ ಇಡೀ ಭಾರತದ ೧೩೨ ಉಪಜಾತಿಗಳಲ್ಲಿ ಚದರಿದ್ದಾರೆ. ಆ ವಿಧಾನದಲ್ಲಿ ಶೇಕಡ ೩೫ರಷ್ಟು ಮತಗಳು ಇರಬೇಕು ಎಂಬುದು ಅಂಗೀಕೃತವಾದರೆ, ನಾಗಪುರದಲ್ಲಿ ವಾಸಿಸುವ ಶೇಕಡ ೩ರಷ್ಟು 'ಚಮ್ಮಾರರು' ಈ ಚುನಾವಣೆಯ ಕಕ್ಷೆಯೊಳಗೆ ಬರುವುದಿಲ್ಲ. ಚುನಾವಣೆ ಸಮುದಾಯವಾರು ಹೋರಾಡಿದರೆ, ಆಗ ಶೇಕಡ ೮೦ರಷ್ಟಿರುವ 'ಮಹಾರರು' ಶೇಕಡ ೩೫ ಮತಗಳು ಪಡೆಯುತ್ತಾರೆ. ಆದುದರಿಂದ ಚಮ್ಮಾರರು, ಭಂಗಿಗಳು ಮತ್ತಿತರ ಉಪಜಾತಿಗಳ ತಮ್ಮ ಪ್ರತಿನಿಧಿಗಳ ಚುನಾವಣೆಗಳಲ್ಲಿ ಗೆಲುವು ಸಾಧಿಸಲು ಸಮರ್ಥರಾಗುವುದಿಲ್ಲ. ಏಕೆಂದರೆ, ಹರಿಜನರಲ್ಲಿಯೇ ಅವರು ಅಲ್ಪಸಂಖ್ಯಾತರಾಗಿದ್ದಾರೆ. ಆಗ ಡಾ. ಅಂಬೇಡ್ಕರ್ ಮತ್ತು ನಾನು ಅಂದರೆ ಮಹಾರರ ಜನಾಂಗಕ್ಕೆ ಸೇರಿದವರು ಮಾತ್ರ ಹಾಗೂ ಬಾಂಬೆ ಮತ್ತು ನಾಗಪುರಗಳಲ್ಲಿ ಪ್ರಮುಖವಾಗಿ ಬಹುಸಂಖ್ಯೆಯಲ್ಲಿರುವ ಮಹಾರರು, ಆ ಪ್ರಾಂತ್ಯಗಳಲ್ಲಿ ಹರಿಜನರ ಎಲ್ಲ ಸ್ಥಾನಗಳನ್ನು ವಶಮಾಡಿಕೊಳ್ಳುವರು ಮತ್ತು ಇತರ ಹರಿಜನರು ಯಾವ ಸ್ಥಾನವನ್ನು ಗಳಿಸುವುದಿಲ್ಲ.

ಆದ್ದರಿಂದ, ನಾನು ಶ್ರೀ ನಾಗಪ್ಪನವರನ್ನು ತಿದ್ದುಪಡಿ ಹಿಂಪಡೆಯಲು ಕೋರಬೇಕಿದೆ. ಮತಗಳ ಶೇಕಡ ಪದ್ಧತಿಯು ಹರಿಜನರ ಪರವಾಗಿ ಇಲ್ಲ ಎಂಬುದನ್ನು ಅವರು ನಂಬದಿರುವುದೇ ಕಾರಣ. ಹರಿಜನರಿಗೆ ಅದರಿಂದೇನೂ ಲಾಭವಿಲ್ಲ. ಇನ್ನೂ ಅವರಿಗೆ ತುಂಬಾ ಕೆಟ್ಟುದೇ ಆಗುತ್ತದೆ. ಇಂದು ನಾವು ಈ ದೇಶಕ್ಕೆ ಸ್ವಾತಂತ್ರ್ಯ ಸಾಧಿಸಿದ್ದೇವೆ. ಈ ದೇಶದ ನಿವಾಸಿಗಳಾಗಿ ನಾವು ಅದರ ಯಜಮಾನರಾಗಿದ್ದೇವೆ. ಈ ಸಂದರ್ಭಗಳಲ್ಲಿ ನಾವು ಬಹುಸಂಖ್ಯಾತ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದಲ್ಲಿ ಮತ್ತು ಬಹುಸಂಖ್ಯಾತ ಸಮುದಾಯ ನಮ್ಮನ್ನು ಅದರ ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದಲ್ಲಿ, ಆಗ ಈ ದೇಶದ ಸರ್ಕಾರ ದೇಶದಲ್ಲಿ ಶಾಂತಿ ಕಾಪಾಡಲು ಸಾಗುವುದಿಲ್ಲ; ನಾನು ಶ್ರೀ ನಾಗಪ್ಪನವನ್ನು ತಿದ್ದುಪಡಿ ಹಿಂತೆಗೆದುಕೊಳ್ಳಲು ಕೇಳಿಕೊಳ್ಳಬೇಕು.

ಗೆಳೆಯರೆ, ಕೆಲವೇ ದಿವಸಗಳ ಹಿಂದೆ ನಾವು, ಎಂದರೆ ಹಿಂದೂಗಳು, ಮುಸ್ಲಿಮರು, ಕ್ರೈಸ್ತರು, ಪಾರಸಿಗಳು ಮತ್ತು ಹರಿಜನರು ಒಕ್ಕೊರಲಿನಿಂದ ನಾವೆಲ್ಲ ಒಂದೇ ರಾಷ್ಟ್ರ ಎಂದು ಹೇಳಿಕೊಂಡೆವು. ನಾವೆಲ್ಲ ಈ ತ್ರಿವರ್ಣ ಧ್ವಜಕ್ಕೆ ಗೌರವಪೂರ್ವಕ ವಂದಿಸಿದೆವು. ಇಂದು ನಾವು ಪ್ರತ್ಯೇಕ ಮತದಾರರ ಸಮುದಾಯಗಳನ್ನು ಕೇಳುತ್ತಿರುವ ತಿದ್ದುಪಡಿಯನ್ನು ಮುಂದಿಟ್ಟರೆ ಅದು ಶೋಚನೀಯ]*

**ಶ್ರೀಮತಿ ರೇಣುಕಾ ರಾಯ್** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯರೆ, ಕಡೆಯ ಈ ತಿದ್ದುಪಡಿಯನ್ನು ವಿರೋಧಿಸಲು ಎದ್ದು ನಿಂತಿದ್ದೇನೆ. ಸಲಹಾ ಸಮಿತಿಯ ವರದಿಯು ಲೇಖಕರು ದೇಶದಲ್ಲಿನ ಎಲ್ಲ ಸಮುದಾಯದವರನ್ನು ತೃಪ್ತಿಪಡಿಸಲು ಅವರಿಂದ ಸಾಧ್ಯವಾದುದನ್ನೆಲ್ಲ ಮಾಡಿದೆ ಎಂದು ತೋರಿಸುತ್ತದೆ. ಮಾನ್ಯರೆ, ಹಾಗೆ ನೋಡಿದರೆ, ವರದಿ ತಪ್ಪಿದೆ ಎಂದಾದರೆ ಅದು ಅಲ್ಪಸಂಖ್ಯಾತರೆನ್ನಲಾದವರಿಗೆ ಅತಿ ಔದಾರ್ಯ ತೋರುವ ದಿಕ್ಕಿನಲ್ಲಿ ತಪ್ಪಿದೆ ಎನ್ನಬೇಕು. ಶಂಕೆ ಮತ್ತು ಅವಿಶ್ವಾಸವನ್ನು ನಿವಾರಿಸುವ ಸಲುವಾಗಿ

ಮತ್ತು ಒಂದು ಸಮ್ಮತ ಪರಿಹಾರಕ್ಕೆ ಬರುವಲ್ಲಿ, ಅದು, ಕೋಮು ಮತ್ತು ಧಾರ್ಮಿಕ ಪರಿಗಣನೆಗಳ ಪ್ರಭಾವಕ್ಕೊಳಗಾದವರು ರಾಷ್ಟ್ರೀಯ ಹಿತಾಸಕ್ತಿಗಳನ್ನು ಕೂಡಾ ತ್ಯಜಿಸಿರುವುದನ್ನು ಗಮನಿಸಿದೆ. ಅದೂ ಅಲ್ಲದೆ, ಪ್ರಜಾಪ್ರಭುತ್ವ ಜಾತ್ಯತೀತ ರಾಷ್ಟ್ರದಲ್ಲಿ, ನಾವು ಅಲ್ಪಸಂಖ್ಯಾತರ ಮತ್ತು ಬಹುಸಂಖ್ಯಾತರ ಪ್ರಶ್ನೆ, ಒಂದು ಧಾರ್ಮಿಕ ಆಧಾರದ ಮೇಲೆ ಪರಿಗಣಿಸುವಂಥದಲ್ಲ. ಪ್ರಸ್ತುತ ಮುಂದಿನ ಹತ್ತು ವರ್ಷಗಳಿಗೆ ಅಂದರೆ ಯಾರು ಈ ಅವಧಿಯಲ್ಲಿ ನಾವು 'ಭಾರತೀಯರು ಎಂಬುದನ್ನು ತಿಳಿದುಕೊಳ್ಳುವುದಿಲ್ಲವೋ ಅವರಿಗೆ ಅವಕಾಶ ಕೊಡಲು ಸ್ಥಾನಗಳ ಮೀಸಲಾತಿಗೆ ಒಪ್ಪಿದ್ದೇವೆ. ಈ ತಿದ್ದುಪಡಿಯ ಮಂಡನೆಕಾರರು ಅದನ್ನು ಈ ಸದನದ ಮುಂದೆ ತರುವಲ್ಲಿ ಇಂದು ಪಟ್ಟು ಹಿಡಿಯಬೇಕಾಯಿತು ಎಂಬುದು ನನಗೆ ಅಚ್ಚರಿಯಾಗಿದೆ. ಪ್ರತ್ಯೇಕ ಮತದಾರರ ಸಮುದಾಯಗಳು, ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರುದ್ಧವೂ ಕಿರುಗುಟ್ಟಿಸುವಂಥವು ಮಾತ್ರವಲ್ಲದೆ ಯಾವ ಉದ್ದೇಶಕ್ಕಾಗಿ ಇರುವರೋ ಆ ಸಮುದಾಯಗಳ ಆಸಕ್ತಿಗಳಿಗೆ ವಿರುದ್ಧವೂ ಆಗಿವೆ ಎಂದು ತೋರಿಸಲು ಪ್ರಚೋದನೆ ನೀಡುವಂಥ ಸರ್ದಾರ್ ಪಟೇಲರ ಮನವಿಗಳನ್ನು ಹಾಗೂ ಪಂಡಿತ ಪಂತ್ ಅವರ ತುಂಬ ಸಮರ್ಥವಾದ ಮತ್ತು ವ್ಯಾಪಕ ವಿಷಯಗಳನ್ನು ಒಳಗೊಂಡ ವಾದಗಳನ್ನು ಗಮನಿಸಿದ ಅನಂತರ ಅವರು ಈ ತಿದ್ದುಪಡಿಗೆ ಒತ್ತಾಯ ಮಾಡಬಾರದಿತ್ತು ಎಂದು ನನಗನ್ನಿಸುತ್ತದೆ.

ನೆನ್ನೆ ದಿನ ಸದನವು ಅಂಗೀಕರಿಸಿರದಿದ್ದ ಪ್ರತ್ಯೇಕ ಮತದಾರರ ಸಮುದಾಯಗಳನ್ನು ತರುವ ವಿಧಾನವು ಹಿಂದಿನ ಬಾಗಿಲು ವಿಧಾನ. ಮಾನ್ಯರೆ, ನಾವು ಅಸಹಾಯಕರಾಗಿ ಪಕ್ಕಕ್ಕೆ ನಿಂತಿದ್ದೇವೆ. ಕೃತಕವಾದ ಈ ಧಾರ್ಮಿಕ ಭಿನ್ನಾಭಿಪ್ರಾಯಗಳ ಸಮಸ್ಯೆಯು ಮಧ್ಯಯುಗದ ಪ್ರತಿಧ್ವನಿಯಾಗಿದೆ; ಇದನ್ನು ನಮ್ಮ ಪರಕೀಯ ಆಡಳಿತಗಾರರ ಆಸಕ್ತಿಗಳನ್ನು ಈಡೇರಿಸುವುದಕ್ಕಾಗಿ ಪ್ರತ್ಯೇಕ ಮತದಾರರ ಸಮುದಾಯಗಳಂತಹ ರಾಜಕೀಯ ಸಾಧನಗಳ ಹಂಚು ಹೊದಿಸುವ ವಿಧಾನದಿಂದ ಪಾಲಿಸಿ ಪೋಷಿಸಲಾಗಿದೆ ಹಾಗೂ ಹೆಚ್ಚಿಸಲಾಗಿದೆ. ಇದರ ಫಲವಾಗಿ ಇಂದು ನಾವು ನಮ್ಮ ದೇಶ ವಿಭಜನೆಯಾಗಿರುವುದನ್ನು ಮತ್ತು ನನ್ನ ಸ್ವಂತ ಪ್ರಾಂತ್ಯಗಳ ರೀತಿಯಲ್ಲಿ ಅಸ್ತಿತ್ವವನ್ನು ಕಳೆದುಕೊಂಡಿರುವುದನ್ನೂ ನೋಡುತ್ತಿದ್ದೇವೆ. ಭಾರತದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ತ್ಯಾಗಮಾಡಿದ ಎಷ್ಟೋ ಜನ ಇಂದು ಭಾರತದ ಪೌರರಾಗಿಲ್ಲ ಎಂಬುದನ್ನು ನಾವು ನೋಡುತ್ತೇವೆ. ಹಾಗೆ ನೋಡಿದರೆ ನಾವು ಕಹಿಪಾಠವನ್ನು ಕಲಿತೆವು. ನಾವು ಇದಕ್ಕೆಲ್ಲ ಶರಣಾಗಿದ್ದೇವೆ. ಕಡೇಪಕ್ಷ ಭಾರತದ ಉಳಿದ ಭಾಗ ಅಂದರೆ ನಮ್ಮೊಂದಿಗಿರುವ ಭಾಗದಲ್ಲಿ, ಈ ವಿಷಯವನ್ನು ಮುಚ್ಚುವುದಕ್ಕಾಗಿ ಮತಧರ್ಮ ತರದೇ ಒಂದು ಪ್ರಜಾಪ್ರಭುತ್ವ, ಜಾತ್ಯತೀತ ರಾಷ್ಟ್ರವಾಗಿ ರೂಪಿಸುವಲ್ಲಿ ನಾವು ಮುಂದುವರಿಯಬಹುದು. ಧರ್ಮವು ಒಂದು ವೈಯಕ್ತಿಕ ವಿಷಯ. ಧಾರ್ಮಿಕ ಭಿನ್ನಾಭಿಪ್ರಾಯಗಳು ಬ್ರಿಟಿಷರಿಂದ ರಾಜಕೀಯ ಸಮಯೋಚಿತವಾಗಿ ಶೋಷಣೆಗೊಳಗಾಗಿರಬಹುದು. ಆದರೆ ಇಂದು ಅದಕ್ಕೆ ಆಸ್ಪದವಿಲ್ಲ. ಮಾನ್ಯರೆ, ನಮ್ಮನ್ನೆದುರಿಸುತ್ತಿರುವ ಸಮಸ್ಯೆ ಧಾರ್ಮಿಕ ಆಧಾರದ ಮೇಲೆ ಅಲ್ಪಸಂಖ್ಯಾತರು ಅಥವಾ ಬಹುಸಂಖ್ಯಾತರ ಸಮಸ್ಯೆಯಲ್ಲ. ನಮ್ಮನ್ನೆದುರಿಸುತ್ತಿರುವ ಸಮಸ್ಯೆ, ಧರ್ಮ ಯಾವುದೇ ಇರಲಿ ದೇಶದಲ್ಲಿನ ಬಹಳಷ್ಟು ಜನರು ಇಂದು ಅಜ್ಞಾನ, ಅನಾರೋಗ್ಯ, ಹಸಿವು ಮತ್ತು ಅಭಾವಗಳಿಂದ ತೊಂದೆಗೊಳಗಾಗಿದ್ದಾರೆ ಅವರೇ ಸಮುದಾಯದ ಹಿಂದುಳಿದ ವರ್ಗಗಳು ಹಾಗೂ ಅವರೇ ಬಹುಸಂಖ್ಯಾತರೂ ಆಗಿದ್ದಾರೆ. ನಾವು ಅವರ ಸಮಸ್ಯೆಯನ್ನು ಈಗ ಎತ್ತಿಕೊಳ್ಳಬೇಕಾಗಿದೆ. ನಾವು ಈ ಸದನವು ಅಂಗೀಕರಿಸಿದ ಉದ್ದೇಶಗಳ ನಿರ್ಣಯ ಮಾಡಲು ಬಯಸಿದಲ್ಲಿ ಮತ್ತು ನಿರೂಪಿಸಿದ ಮೂಲಭೂತ ಹಕ್ಕುಗಳು, ಇವು ಜೀವಂತ ವಾಸ್ತವಿಕವಾಗಿದ್ದು ನಿಭಾಯಿಸಬೇಕಾದ ಸಮಸ್ಯೆಯೇ ಇದಾಗಿದೆ. ನಾವು ಯಾವುದೇ ಕಪಟ ಸಾಧನಗಳನ್ನು ಅಂದರೆ ನಿರ್ಬಂಧಿತ ಪ್ರತ್ಯೇಕ ಮತದಾರರ ಸಮುದಾಯಗಳಂತಹವನ್ನು ಹಿಂಬಾಗಿಲ ಮೂಲಕ ತಂದು, ಮುಖ್ಯ ವಿಷಯದಿಂದ ನಮ್ಮನ್ನು ಬದಿಗೆ ಸೇರಿಸುವುದಕ್ಕೆ ಅವಕಾಶಮಾಡುವಂತಿಲ್ಲ. ನಾವು ಸಮಾನ ಹಕ್ಕುಗಳಿರುವ ನಾಗರಿಕರಂತೆ ಕೆಲಸಮಾಡಲು ಮತ್ತು ಭಾಗಿಗಳಾಗಲು ಹಿಂದುಳಿದವರನ್ನು, ಅವರು ತಮ್ಮ ಹಕ್ಕುಗಳ ಬಗ್ಗೆ

ಜಾಗೃತರಾಗುವವರಂತೆ ಮಾಡಲು ಕ್ರಮಗಳು ತೆಗೆದುಕೊಳ್ಳದೆ, ಹಾಗೆ ನಿರೀಕ್ಷಿಸುವಂತಿಲ್ಲ. ನಮ್ಮ ಅಧಿಕಾರದಲ್ಲಿರುವ ಪ್ರತಿಯೊಂದು ಮಾರ್ಗದ ಮೂಲಕ ನಾವು ಅವರ ಅಭಿವೃದ್ಧಿಗೆ ನೆರವಾಗಲು ಎಲ್ಲ ವಿಧದಿಂದ ಅವಕಾಶ ಕಲ್ಪಿಸಿ ಕೊಡೋಣ ಮತ್ತು ಸಂವಿಧಾನದಲ್ಲಿಯೂ ಅಂತಹ ಅವಕಾಶವನ್ನು ಕೊಡೋಣ. ಆದರೆ ಧರ್ಮದ ಆಧಾರದ ಮೇಲೆ ಪ್ರತ್ಯೇಕತಾ ಪ್ರವೃತ್ತಿಯನ್ನು ಇನ್ನು ಸಹಿಸುವುದು ಸಾಧ್ಯವಿಲ್ಲ. ಹಿಂದೂ ಪ್ರಾಧಾನ್ಯಕ್ಕೆ ನಾವು ಹಿಂದೆಂದೂ ಬದ್ಧರಿಲ್ಲ ಹಾಗೂ ಇಂದು ಕೂಡಾ ನಾವು ಬದ್ಧರಾಗಿಲ್ಲ; ಹಿಂದೂಗಳು ಒಂದು ಧಾರ್ಮಿಕ ಸಮುದಾಯವಾಗಿ ಯಾವುದೇ ಇತರ ಹಿತಾಸಕ್ತಿಗಳ ಸವಾರಿ ಮಾಡಲು ನಾವು ಇಚ್ಛಿಸುವುದಿಲ್ಲ. ಆದರೆ ನಾವು ಭಾರತದ ಆಸಕ್ತಿಗಳು ಪ್ರಾಧಾನ್ಯವಾಗಿರಬೇಕೆಂದು ಬಯಸುತ್ತೇವೆ; ಅಂದರೆ ಬಹುಸಂಖ್ಯಾತರ ಅಥವಾ ಅಲ್ಪಸಂಖ್ಯಾತರ ಧಾರ್ಮಿಕ ಸಮುದಾಯವಿರಲಿ ಅವರ ಆಸಕ್ತಿಗಳು ಯಾವುದೇ ವಿಶೇಷ ಸಮುದಾಯದವರದು ಆಗಿ ಮಾರ್ಗದಲ್ಲಿ ಅಡ್ಡ ನಿಲ್ಲಬಾರದು. ನಾನು, ಈ ಸದನವು ಈ ತಿದ್ದುಪಡಿಯನ್ನು ತಿರಸ್ಕರಿಸಿದೆ ಎಂದು ಮತ್ತು ಭಾರತವು, ರಾಷ್ಟ್ರಗಳ ಸಮೂಹದಲ್ಲಿ ಸೂಕ್ತ ಸ್ಥಾನವನ್ನು ಪಡೆದುಕೊಳ್ಳುವ ಹಾಗೆ; ನಮ್ಮದೇ ಸಾಂಸ್ಕೃತಿಕ ಪರಂಪರೆಯ ಅನುಸರಣೆಯಲ್ಲಿರುವ ಹಾಗೆ; ಈ ದೇಶದಲ್ಲಿ ಒಂದು ನೆಲೆ ಕಂಡಿರುವ ವೈವಿಧ್ಯ ಸಂಸ್ಕೃತಿಗಳಿಂದ ಶ್ರೀಮಂತವಾಗುವ ಹಾಗೆ, ಇಡೀ ವಿಶ್ವದ ಸಾಮರಸ್ಯ ಪೂರ್ಣ ಅಭಿವೃದ್ಧಿಯಲ್ಲಿ ಪರಿಣಾಮಕಾರಿ ಪಾತ್ರ ವಹಿಸಲು, ಸಾಧ್ಯವಾಗುವಂತೆ ಎದುರಿಸುತ್ತಿರುವ ನಿಜಸಮಸ್ಯೆಗಳಿಗೆ ನಾವೇ ಒಂದು ಪರಿಹಾರ ಕಂಡುಕೊಳ್ಳಲು ಸಮರ್ಥರಾಗುವವರೆಗೆ, ನಾವು ಮುಂದೆ ಹೋಗಲು ಸಮರ್ಥರಾಗುತ್ತೇವೆ ಎಂದು ಆಶಿಸುತ್ತೇನೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ಶ್ರೀ ಇಬ್ರಾಹಿಂ ಅವರು ಮಂಡಿಸಿರುವ ತಿದ್ದುಪಡಿಯು, ಒಂದು ಚಹಾಪಾತ್ರೆಯಲ್ಲಿ ತುಸು ಬಿರುಗಾಳಿ ಎಬ್ಬಿಸಿದಂತಿದೆ. ಅದರತ್ತ ವಾಸ್ತವಿಕ ದೃಷ್ಟಿಕೋನದಿಂದ ನೋಡುವುದು ಉತ್ತಮ ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ. ಇದೀಗ ಮಾತನಾಡಿದ ಪಶ್ಚಿಮ ಬಂಗಾಳದ ಗೌರವಾನ್ವಿತ ಮಹಿಳೆಯೋರ್ವರು ಬೋಧಿಸಿದ ಪ್ರಶಂಸನೀಯ ಆದರ್ಶವಾದವನ್ನು ನಾನು ಪ್ರಶಂಸಿಸುತ್ತೇನೆ. ಆಕೆಯಂತೆ ವಾಕ್‌ಪಟುತ್ವವೂ ನನಗಿಲ್ಲ ಮತ್ತು ಮನಗಾಣಿಸುವಿಕೆಯ ಆಕಾಂಕ್ಷಿಯೂ ನಾನಲ್ಲ. ಆದರೆ ನಾನು ಒಬ್ಬ ಆದರ್ಶವಾದಿಯಾಗಿ ಒಳ್ಳೆಯದೇ ಆದರೂ ಒಬ್ಬ ವಾಸ್ತವತಾವಾದಿಯಾಗಿರುವುದು ಉಪಯುಕ್ತ ಎಂದು ತಿಳಿಯುತ್ತೇನೆ. ಸದ್ಯದ ಸನ್ನಿವೇಶವನ್ನು ನಾನು ಇಚ್ಛಿಸುವುದೇ ಇಲ್ಲ; ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಯಾವುದೇ ಭಿನ್ನಾಭಿಪ್ರಾಯ ಇರಬೇಕೆಂದು ನಾನು ಇಷ್ಟಪಡುವುದಿಲ್ಲ. ಜೀವನದ ಉನ್ನತ ನಡೆಗಳಲ್ಲಿ ಅತ್ಯುತ್ತಮ ವರ್ಗಗಳು ಯಾವುದೇ ಭಿನ್ನಾಭಿಪ್ರಾಯ ಉಳ್ಳವರು ಎಂಬುದನ್ನು ನಾನು ನಂಬುವುದಿಲ್ಲ. ಆದರೆ ನಮ್ಮ ಸಮುದಾಯದಲ್ಲಿ ಆದರ್ಶವಾದಿಗಳಲ್ಲದ ಜನರು ಇದ್ದಾರೆ; ಕೋಮುವಾದ ದೃಷ್ಟಿಯುಳ್ಳ ಜನರೂ ಇದ್ದಾರೆ. ಇದನ್ನು ಚುನಾವಣೆಗಳಲ್ಲಿ ನಿದರ್ಶನಪೂರ್ವಕವಾಗಿ ಕಂಡಿದ್ದೇವೆ. ಜಂಟಿಮತದಾರರ ಸಮುದಾಯ ಇರುವಂಥ ಮುನಿಸಿಪಲ್ ಮತ್ತು ಇತರ ಚುನಾವಣೆಗಳಲ್ಲಿ, ಮತದಾನವು ಬಹುಕಾಲದಿಂದ ಕೋಮುಗಳ ಆಧಾರದ ಮೇಲೆ ನಡೆದಿದೆ ಎಂಬುದು ಜನರ ಅನುಭವಕ್ಕೆ ಬಂದಿದೆ. ನಾನು ಹಿಂದೆ ಹೇಳಿದಂತೆ, ಇದನ್ನು ನಾನು ಇಷ್ಟಪಡುವುದಿಲ್ಲ ಮತ್ತು ಸರಿಯಾಗಿ ಆಲೋಚಿಸುವ ಯಾರೇ ವ್ಯಕ್ತಿ ಅದನ್ನು ಇಷ್ಟಪಡುವುದಿಲ್ಲ. ಆದರೆ ಸನ್ನಿವೇಶವನ್ನು ನಾನು ಹೇಳಿದಂತೆ, ದೃಷ್ಟಿಕೋನದಿಂದ ಮತ್ತು ಅನುರೂಪತ್ವದ ಪ್ರಜ್ಞೆಯಿಂದಲೂ ನೋಡಬೇಕು. ಭಾರತದಲ್ಲಿ ಬಹುಸಂಖ್ಯಾತರ ಶೇಕಡ ಪ್ರಮಾಣದ ಅರಿವೂ ಇರಬೇಕು. ಭಾರತದಲ್ಲಿ ಬಹುಸಂಖ್ಯಾತ ಸಮುದಾಯದ ಶೇಕಡಾವಾರು ಏನು? ಇದು ೭೫ರಷ್ಟು ಮತ್ತು ಮುಸ್ಲಿಮರ ಶೇಕಡಾವಾರು ಸುಮಾರು ೨೫ ಇದೆ. ಈ ಎರಡರ ನಡುವಿನ ಅಗಾಧ ವ್ಯತ್ಯಾಸವನ್ನು ಪ್ರಶಂಸಿಸಲು ನಾನು ಇಲ್ಲಿನ ಖ್ಯಾತಿವೆತ್ತ ಒಂದು ಪತ್ರಿಕೆಯಲ್ಲಿನ ಒಂದು ಪ್ರಸಿದ್ಧ ವ್ಯಂಗ್ಯಚಿತ್ರ ಉಲ್ಲೇಖಿಸುತ್ತೇನೆ. ಅದರಲ್ಲಿ ಮುಸ್ಲಿಮರ ಬಗ್ಗೆ ಮಹಾನ್ ಹಿಂದೂ ಸಮುದಾಯದ ಮನೋಭಾವವನ್ನು ಖ್ಯಾತ ವ್ಯಂಗ್ಯಚಿತ್ರಕಾರ ಶಂಕರ್ ಬಿಂಬಿಸಿರುವರು.

ಮಹಾನ್ ಹಿಂದೂ ಸಮುದಾಯವನ್ನು ಅವರು ಒಂದು ಆನೆ ಪ್ರತಿನಿಧಿಸುವಂತೆ ತೋರಿಸಿರುವರು.

ಆನೆ ಅತ್ಯಂತ ವಾತ್ಸಲ್ಯ ಭಾವದಲ್ಲಿದೆ ಮತ್ತು ತನ್ನ ಸೊಂಡಿಲಿನಲ್ಲಿ ನಮ್ಮ ನಾಯಕ ಚೌಧ್ರಿ ಖಲಿಖುಜ್ಜ ಮಾನ್‌ರ ಆಕಾರದಲ್ಲಿ ಅಶಕ್ತ ಮುಸ್ಲಿಮ್ ಸಮುದಾಯವನ್ನು ವಾತ್ಸಲ್ಯದಿಂದ ಅಪ್ಪಿ ಹಿಡಿದಂತೆ ತೋರಿಸಿದ್ದಾರೆ. ಅದು ನನ್ನ ಮನಸ್ಸಿಗೆ, ಒಬ್ಬ ವ್ಯಂಗ್ಯಚಿತ್ರಕಾರನ ದೃಷ್ಟಿಕೋನದಿಂದ, ಅನುಪಾತದ ಅರಿವು ನೀಡುತ್ತದೆ. ಅದರಲ್ಲಿ ಹಿಂದೂಗಳ ಜೊತೆಯಾಗಿ ಮುಸ್ಲಿಮ್ ನಿಂತಿರುತ್ತಾನೆ. ಈ ಪ್ರಾರ್ಥನೆಯ ಪರಿಣಾಮವಾದರೂ ಏನು? ನಾನು ಇದನ್ನು ಈ ತಿದ್ದುಪಡಿಯ ಮೂಲಕ ಇಡಲಾದ ಬೇಡಿಕೆ ಎಂದು ಕರೆಯುವುದಿಲ್ಲ. ಇದು ಹೇಗೆಂದರೆ, ಸಾಮೂಹಿಕವಾಗಿ ಹಿರಿಯ ಸೋದರ ಎಂದು ಕರೆಯಲಾದ ಹಿಂದೂ ಸಮುದಾಯವನ್ನು ಔದಾರ್ಯ ಭಾವದಿಂದ ಹತ್ತು ವರ್ಷಗಳಿಂದಲೂ ಒಪ್ಪಿಕೊಂಡಿದೆ ಎಂದು. ಆ ಅವಧಿಯು ಅವರಿಗೆ ಮೀಸಲಿರಿಸಿದ ಪ್ರಾತಿನಿಧ್ಯ ಪಡೆಯಲು ಸಾಕಾಗುವಷ್ಟಿದೆ ಎಂದು ನಾನು ಪರಿಗಣಿಸಬೇಕೆ. ಮಹಾನ್ ಹಿಂದೂ ಸಮುದಾಯವು ಹತ್ತು ವರ್ಷಗಳ ಈ ಅವಧಿಯಲ್ಲಿ ಮುಸ್ಲಿಮ್ ಸಮುದಾಯದ ಕಷ್ಟಗಳೇನು ಮತ್ತು ದೂರುಗಳೇನೇನು ಹಾಗೂ ನ್ಯಾಯ ಮುಸ್ಲಿಂ ಸಮುದಾಯದ ಅಥವಾ ಇತರೆ ವಿಷಯಗಳನ್ನು ಕೇಳಿಸಿಕೊಳ್ಳಲು ಇಷ್ಟಪಡುತ್ತದೆ ಎಂದು ಇಂಗಿತವಾಗುತ್ತದೆ ಎಂದು ಕಂಡುಬರಲಿದೆ. ಕೆಲವು ಮುಸ್ಲಿಮ್ ಸದಸ್ಯರನ್ನು ಈ ಶೇಕಡ ೩೦ರ ಮಿತಿಯೊಳಗೆ ಬರಲು ಅವಕಾಶ ನೀಡುವುದರ ಏಕೈಕ ಪರಿಣಾಮವೆಂದರೆ ಶಾಸನಸಭೆಗಳಿಗೆ ಶೇಕಡ ೨೫ರಷ್ಟು ಮುಸ್ಲಿಮರು ಬರಬೇಕು ಎಂದು ಇರುತ್ತವೆ. ಈ ಅಶಕ್ತ ಕಿರಿಯ ಸೋದರ ಹಿರಿಯ ಸೋದರನು ಆನೆಗೆ ಪ್ರತಿನಿಧಿಸುತ್ತಿರುವುದೆಂದರೆ ಏನು? ಆತನ ಪ್ರಾರ್ಥನೆಯ ಸ್ವರೂಪವೇನು? ಅದೊಂದು ಮನವಿಯಾಗಿರುತ್ತದೆ. ಹಿರಿಯ ಸೋದರನು ಕಿರಿಯ ಸೋದರನ ಬೇಗುದಿಗಳನ್ನು ಕೇಳಿದ್ದೇ ಆದರೆ, ಹತ್ತು ವರ್ಷಗಳ ಅವಧಿಯಲ್ಲಿ ಯಾವ ಅಪಾಯವಾಗಲಿ ಅಥವಾ ತೊಂದರೆಯಾಗಲಿ ಇದರಿಂದ ಇರದು. ಈ ಬೇಗುದಿಗಳು ಮತ್ತು ಕಷ್ಟಗಳು ಅವಾಸ್ತವ ಅಥವಾ ಉತ್ಪ್ರೇಕ್ಷಣೀಯ ಇರಬಹುದು. ಯಾವುದೇ ವಾಸ್ತವ ಕಾರಣಗಳಿಗಿಂತ ಅವು ಭಯ ಹುಟ್ಟಿಸಲು ಮತ್ತು ಶಂಕೆಗೆ ಇರಬಹುದು. ಆದರೆ ಪರಿಣಾಮವೇನು ಎಂದೂ ಇವುಗಳಿಂದ ಯಾವ ಭಯಾನಕ ಸಂದರ್ಭಗಳು ಉದ್ಭವಿಸುತ್ತವೆ ಎಂದೂ ನಾನು ನಮ್ರತೆಯಿಂದ ಕೇಳುತ್ತೇನೆ. ಪ್ರಾರ್ಥನೆಯಲ್ಲಿ ಯಾವುದೇ ಕಾರಣವಿದ್ದರೆ ಆಗ ಹಿರಿಯ ಸೋದರ, ವಾತ್ಸಲ್ಯಮಯಿ ಆನೆ, ಅದನ್ನು ಸಮ್ಮತಿಸುತ್ತದೆ. ಏನೊಂದೂ ಇಲ್ಲದಿದ್ದರೆ ಅವನು ಅದನ್ನು ತಿರಸ್ಕರಿಸುತ್ತಾನೆ. ಆಗಬಹುದಾದುದು ಇದಿಷ್ಟೆ. ವಿಶ್ವಸನೀಯವಾಗಿ ನುಡಿಯಲಾದ ಭಯಾನಕ ಸಂದರ್ಭಗಳು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದರಿಂದ ಸಂಭವಿಸುತ್ತವೆ ಎಂದು ನನಗನಿಸುವುದಿಲ್ಲ. ಮಾನ್ಯರೆ, ಪುನಃ ನಾನು ಈ ದೊಡ್ಡ ಮಹಾನ್ ಸಭೆಯ ಮುಂದೆ, ಇದು ಹಿರಿಯ ಸಹೋದರನಿಗೆ ಕಿರಿಯ ಸಹೋದರನ ಪರವಾಗಿ ಒಂದು ಪ್ರಾರ್ಥನೆಯಷ್ಟೆ ಎಂದು ನಿವೇದಿಸಿಕೊಳ್ಳುತ್ತಿದ್ದೇನೆ.

ಆದರೆ ಫಲಿತಾಂಶವು ಪೂರ್ವ ನಿರ್ಧಾರಿತ ಎಂದು ನಾನು ತಿಳಿದಿದ್ದೇನೆ. ಈ ತಿದ್ದುಪಡಿ ಮತ್ತು ಅದನ್ನು ಸಮರ್ಥಿಸುವ ಭಾಷಣಗಳು, ನನಗೆ ಒಬ್ಬ ನ್ಯಾಯಾಧೀಶನ ಮುಂದೆ ಒಬ್ಬ ವಕೀಲನ ವಾದವನ್ನು ನೆನಪಿಗೆ ತರುತ್ತದೆ. ಅದೆಂದರೆ, ತೀರ್ಪು ಮೊದಲೇ ಬರೆದಾಗಿದ್ದು ವಕೀಲನ ವಾದ ಮುಗಿದ ಅನಂತರ ಅದನ್ನು ನೀಡುವುದಷ್ಟೆ. ಆಗುವ ಮತದಾನದ ಫಲಿತಾಂಶ ನಾವೆಲ್ಲ ಬಲ್ಲೆವು. ಆದರೆ ನಾನು ತಿದ್ದುಪಡಿ ಇಲ್ಲದಿದ್ದರೂ ಕಿರಿಯ ಸಹೋದರನು ಹಿರಿಯ ಸೋದರನ ವಾತ್ಸಲ್ಯ ಕಳೆದುಕೊಳ್ಳುವುದಿಲ್ಲ ಎಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಮಾತನಾಡಲು ಇಷ್ಟಪಟ್ಟಿರುವ ಸದಸ್ಯರಿಂದ ನಾನು ಹಲವು ಚೀಟಿಗಳನ್ನು ಸ್ವೀಕರಿಸಿದ್ದೇನೆ ಹಾಗೂ ನಾನು ಹಲವು ಸದಸ್ಯರು ನಿಂತಿರುವುದನ್ನು ಕೂಡ ನೋಡುತ್ತಿದ್ದೇನೆ. ಆದರೆ....

**ಗೌರವ ಸದಸ್ಯರು :** ಮುಕ್ತಾಯ.

**ಮಾನ್ಯ ಸಭಾಧ್ಯಕ್ಷರು :** ನಾನು ಕೂಡ ಈಗ ಸಾಕಷ್ಟು ಚರ್ಚೆ ಮಾಡಿದ್ದೇವೆ ಎಂದುಕೊಂಡಿದ್ದೇನೆ ಮತ್ತು ಹಾಗಾಗಿ ಪ್ರಸ್ತಾವವನ್ನು ಮುಕ್ತಾಯಗೊಳಿಸುತ್ತೇನೆ. ಮುಂದಿಟ್ಟಿರುವ ವಿಷಯ :

ಪ್ರಸ್ತಾವವನ್ನು ಈಗ ಮತಕ್ಕೆ ಹಾಕಬೇಕು.

ಈ ಪ್ರಸ್ತಾವವನ್ನು ಅಂಗೀಕರಿಸಲಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಗೌರವಾನ್ವಿತ ಮಂಡನೆಕಾರರು ಈಗ ಉತ್ತರಿಸಬಹುದು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳಲಾಗುತ್ತದೆ ಎಂದು ಮತ್ತು ಅಂತಹ ಹೆಚ್ಚು ಚರ್ಚೆ ಇರುವುದಿಲ್ಲ ಎಂದು ತಿಳಿದಿದ್ದೆ. ಆದರೂ ಈ ತಿದ್ದುಪಡಿ ಕುರಿತಂತೆ ಬಹಳಷ್ಟು ವೇಳೆ ತೆಗೆದುಕೊಂಡುದಕ್ಕೆ ವ್ಯಥೆಯಾಗಿದೆ. ಅನುಸೂಚಿತ ಜಾತಿಗಳಿಗೆ ಸಂಬಂಧಿಸಿದಂತೆ ಈವರೆಗೆ ಈ ತಿದ್ದುಪಡಿ ಮೇಲೆ ಬಹಳಷ್ಟು ಹೇಳಬೇಕಾದುದೇನೂ ಇದೆ ಎಂದು ನನಗನಿಸುವುದಿಲ್ಲ. ಏಕೆಂದರೆ, ಈ ಸದನದಲ್ಲಿ ಒಬ್ಬಿಬ್ಬರು ಅಥವಾ ಮೂವರನ್ನು ಬಿಟ್ಟರೆ ಅನುಸೂಚಿತ ಜಾತಿಗಳ ಬಹುಮಂದಿ ಪ್ರತಿನಿಧಿಗಳಿಂದ ತಾವೆಲ್ಲ ಈ ತಿದ್ದುಪಡಿಗೆ ವಿರುದ್ಧವಾಗಿದ್ದೇವೆ ಎಂಬ ಒಂದು ಅಹವಾಲನ್ನು ಸ್ವೀಕರಿಸಿದ್ದೇನೆ (ಕೇಳಿ, ಕೇಳಿ) ಮತ್ತು ಶ್ರೀ ನಾಗಪ್ಪ ಅವರಿಗೆ ಅದರ ವಿಷಯ ತಿಳಿದಿದೆ. ಆದರೆ ಶ್ರೀ ನಾಗಪ್ಪನವರು ಒಂದು ವಾಗ್ದಾನ ಪೂರೈಸಲೊ ಇಲ್ಲವೆ ವ್ಯವಹಾರ ಪೂರೈಸಲೊ ಅಥವಾ ಕಡೇಪಕ್ಷ ತಮ್ಮ ಸಮುದಾಯಕ್ಕೆ ತಾನು ಬಹುಸಂಖ್ಯಾತ ಸಮುದಾಯದಿಂದ ಖರೀದಿಸಲ್ಪಟ್ಟಿಲ್ಲ ಎಂದು ತೋರಿಸಲೊ, ತಮ್ಮ ತಿದ್ದುಪಡಿಯನ್ನು ಮಂಡಿಸಬಯಸಿದರು! ಒಳ್ಳೆಯದು ಅವರು ತಮ್ಮ ಕೆಲಸಮಾಡಿದ್ದಾರೆ. ಆದರೆ ಇತರೆ ಜನ ಅವರನ್ನು ಗಂಭೀರವಾಗಿ ತೆಗೆದುಕೊಂಡಿದ್ದಾರೆ ಮತ್ತು ಬಹಳಷ್ಟು ಕಾಲ ತೆಗೆದುಕೊಂಡರು.

ಮುಸ್ಲಿಮ್ ಲೀಗ್‌ನ ಪ್ರತಿನಿಧಿಯವರು ಮಂಡಿಸಿದ ತಿದ್ದುಪಡಿಗೆ ಸಂಬಂಧಿಸಿದಂತೆ, ನಾನು ತಪ್ಪಾಗಿ ತಿಳಿದಿದ್ದೆ ಮತ್ತು ನಾನು ಇದನ್ನು ನಂಬಿದ್ದಿದ್ದರೆ, ನಾನು ಯಾವುದೇ ಮೀಸಲಾತಿಗೆ ಖಂಡಿತವಾಗಿ ಒಪ್ಪುತ್ತಲೇ ಇರಲಿಲ್ಲ ಎಂದುಕೊಂಡೆ (ಕೇಳಿ, ಕೇಳಿ) ಜನಸಂಖ್ಯೆ ಆಧಾರದ ಮೇಲೆ ನಾನು ಮೀಸಲಾತಿಗೆ ಒಪ್ಪಿದಾಗ, ನಾನು ಮುಸ್ಲಿಮ್ ಲೀಗ್‌ನ ನನ್ನ ಗೆಳೆಯರು, ನಮ್ಮ ಮನೋಭಾವದ ಸಮರ್ಥನೀಯತೆಯನ್ನು ನೋಡುತ್ತಾರೆ ಮತ್ತು ದೇಶದ ವಿಭಜನೆ ಅನಂತರ ಬದಲಾದ ಸ್ಥಿತಿಗಳಿಗೆ ತಾವಾಗಿಯೇ ಹೊಂದಿಕೊಳ್ಳಲು ಅವಕಾಶ ಮಾಡಿಕೊಳ್ಳಬೇಕಾಗಿತ್ತು ಎಂದು ಯೋಚಿಸಿದ್ದೆ. ಆದರೆ ಈ ದೇಶದಲ್ಲಿ ಪ್ರತ್ಯೇಕ ಮತದಾರರ ಸಮುದಾಯಗಳನ್ನು ಮೊದಲಿಗೆ ಅಳವಡಿಸಿದಾಗ ಹಾಗೆ ಅಳವಡಿಸಿದ ಅದೇ ವಿಧಾನಗಳನ್ನು ಅವರು ಅಳವಡಿಸಿಕೊಳ್ಳುತ್ತಿರುವುದನ್ನು ನಾನು ಈಗ ಕಾಣುತ್ತಿದ್ದೇನೆ ಮತ್ತು ಉಪಯೋಗಿಸಿದ ಭಾಷೆಯಲ್ಲಿ ಧಾರಾಳ ಮಧುರತೆ ಇದ್ದರೂ, ಅಳವಡಿಸಿಕೊಂಡ ವಿಧಾನದಲ್ಲಿ ಆ ವಿಷಯದ ಒಂದು ಪೂರಾ ಪ್ರಮಾಣ ಇರುವುದು ಕಾಣುತ್ತಿದ್ದೇನೆ (ಕೇಳಿ, ಕೇಳಿ). ಆದುದರಿಂದ, ಕಿರಿಯ ಸೋದರನ ವಾತ್ಸಲ್ಯವನ್ನು ಕಳೆದುಕೊಂಡರೆ, ನಾನು ಕಳೆದುಕೊಳ್ಳಲು ತಯಾರಿದ್ದೇನೆ. ಏಕೆಂದರೆ, ಆತ ಅಳವಡಿಸಿಕೊಳ್ಳಲು ಇಷ್ಟಪಡುವ ವಿಧಾನ ಆತನ ಸಾವು ತರುತ್ತದೆ ಎಂದು ಹೇಳಲು ವಿಷಾದಿಸುತ್ತೇನೆ. ನಾನು ಆತನ ವಾತ್ಸಲ್ಯ ಕಳೆದುಕೊಳ್ಳುತ್ತೇನೆ ಮತ್ತು ಅವನನ್ನು ಜೀವಂತವಾಗಿ ಇರಲು ಬಿಡುತ್ತೇನೆ. ಈ ತಿದ್ದುಪಡಿಯು ಇಲ್ಲದಿದ್ದರೆ ನಾವು ಕಿರಿಯ ಸೋದರನ ವಾತ್ಸಲ್ಯ ಕಳೆದುಕೊಳ್ಳುತ್ತೇವೆ. ಆದರೆ ಕಿರಿಯ ಸೋದರನು ಹಿರಿಯ ಸೋದರನ ಮನೋಭಾವದ ವಿವೇಕ ನೋಡಲು ಜೀವಿಸುವುದನ್ನು ನಾನು ಇಷ್ಟಪಡುತ್ತೇನೆ ಮತ್ತು ಆತನು ಹಿರಿಯ ಸೋದರನೊಂದಿಗೆ ವಾತ್ಸಲ್ಯದಿಂದಿರಲು ಇನ್ನು ಕಲಿಯಬಹುದು.

ಈಗ, ಈ ಸೂತ್ರ ಅದರ ಹಿಂದೆ ಒಂದು ಇತಿಹಾಸ ಇದೆ ಮತ್ತು ಯಾರೆಲ್ಲ ಕಾಂಗ್ರೆಸ್‌ನಲ್ಲಿರುವರೊ ಅವರು ಆ ಇತಿಹಾಸ ನೆನಪಿಸಿಕೊಳ್ಳಬೇಕು. ಇದನ್ನು ಕಾಂಗ್ರೆಸ್ ಇತಿಹಾಸದಲ್ಲಿ ಮೊಹಮ್ಮದ ಅಲಿ ಸೂತ್ರ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಈ ನೆಲದಲ್ಲಿ ಪ್ರತ್ಯೇಕ ಮತದಾರರ ಸಮುದಾಯಗಳ ಉಪಕ್ರಮವಾಗತೊಡಗಿದಂದಿನಿಂದ ಮುಸ್ಲಿಮರ ಪೈಕಿ ಎರಡು ಪಕ್ಷಗಳಿದ್ದವು. ಒಂದು ರಾಷ್ಟ್ರೀಯತಾವಾದಿ ಮುಸ್ಲಿಮರು ಅಥವಾ ಕಾಂಗ್ರೆಸ್ ಮುಸ್ಲಿಮರು, ಇನ್ನೊಂದು ಮುಸ್ಲಿಮ್ ಲೀಗ್ ಸದಸ್ಯರು ಅಥವಾ ಮುಸ್ಲಿಮ್ ಲೀಗ್‌ನ ಪ್ರತಿನಿಧಿಗಳು. ಈ ಪ್ರಶ್ನೆ ಕುರಿತು ಗಣನೀಯ ಪ್ರಕ್ಷುಬ್ಧತೆ ಇದ್ದಿತು ಮತ್ತು ಒಂದು ಕಾಲಕ್ಕೆ ಜಂಟಿ

ಮತದಾರರ ಸಮುದಾಯದ ವಿರುದ್ಧ ವಾಸ್ತವಿಕವಾಗಿಯೂ ಬಹುಮತವಿದ್ದಿತು. ಆದರೆ ಈ ತಿದ್ದುಪಡಿಯ ಮಂಡನೆಕಾರರು ಗಮನಕ್ಕೆ ತಂದಂತೆ ಅಲಹಾಬಾದಿನಲ್ಲಿ ಒಂದು ಇತ್ಯರ್ಥಕ್ಕೆ ಬಂದಾಗ ಆ ಒಂದು ಹಂತದಲ್ಲಿ ನಾವು ಈ ಇತ್ಯರ್ಥಕ್ಕೆ ಬದ್ಧರಾಗಿರುವೆವೆ? ಇಲ್ಲ. ಈಗ ನಮ್ಮ ದೇಶದ ವಿಭಜನೆ ಆಗಿದೆ. ರಾಷ್ಟ್ರೀಯತಾವಾದಿ ಮುಸ್ಲಿಮರು ದೇಶದ ಪ್ರತ್ಯೇಕತೆ ತಡೆಯುವ ಸಲುವಾಗಿ ಈ ಸೂತ್ರವನ್ನು, ರಾಷ್ಟ್ರ ಒಂದಾಗುವವರೆಗೆ ಒಂದು ರೀತಿಯ ರಾಜಿಮಾರ್ಗ ಪ್ರಕಟಿಸಿದರು; ಅನಂತರ ನಾವು ಅದನ್ನು ಕೈಬಿಡಬಯಸಿದೆವು. ಆದರೆ ಈಗ ದೇಶದ ಪ್ರತ್ಯೇಕತೆ ಮತ್ತು ತಾವು ಅದನ್ನು ಪುನಃ ಉಪಕ್ರಮಿಸೋಣ ಮತ್ತು ಇನ್ನೊಂದು ವಿಭಜನೆ ಆಗಲಿ ಎಂದು ಹೇಳುತ್ತೀರಿ. ನನಗೆ ಈ ವಾತ್ಸಲ್ಯ ಏನೆಂದು ಅರ್ಥವಾಗುತ್ತಿಲ್ಲ. ಆದುದರಿಂದ, ನಾನು ಈ ಪ್ರಸ್ತಾವವನ್ನು ಕುರಿತು ಏನೊಂದು ಹೇಳಲು ಇಷ್ಟ ಪಟ್ಟಿಲ್ಲದಿದ್ದರೂ, ನಾವು ಎಲ್ಲಿ ನಿಂತಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳಲಾಗುವಂತೆ, ನಾವು ಪರಸ್ಪರ ನಮ್ಮ ಮನಸ್ಸುಗಳನ್ನು ಪರಿಪೂರ್ಣವಾಗಿ ತಿಳಿಯುವುದು ಉತ್ತಮ ಎಂದು ನನಗನಿಸುತ್ತದೆ. ದೇಶದ ವಿಭಜನೆಗೆ ಕಾರಣವಾದ ಪ್ರಕ್ರಿಯೆಯನ್ನು ಪುನಃ ಅಳವಡಿಸಿದ್ದೇ ಆದರೆ, "ಆಗ, ಯಾರೆಲ್ಲ ಆ ವಿಧವನ್ನು ಬಯಸುವರೊ, ಅವರು ಪಾಕಿಸ್ತಾನದಲ್ಲಿ ಸ್ಥಾನಪಡೆದುಕೊಳ್ಳಲಿ ಇಲ್ಲಲ್ಲ" ಎಂದು ನಾನು ಹೇಳುತ್ತೇನೆ (ಚಪ್ಪಾಳೆ). ಇಲ್ಲಿ ನಾವು ಒಂದು ರಾಷ್ಟ್ರ ನಿರ್ಮಿಸುತ್ತಿದ್ದೇವೆ ಮತ್ತು ಒಂದೇ ಆಗಿರುವ ರಾಷ್ಟ್ರದ ತಳಪಾಯ ಹಾಕುತ್ತಿದ್ದೇವೆ. ಯಾರು ಪುನಃ ವಿಭಜಿಸಲು ಮತ್ತು ಆ ಸ್ಫೋಟದ ಬೀಜಗಳನ್ನು ಬಿತ್ತಲಾಶಿಸುವರೋ ಅವರಿಗೆ ಇಲ್ಲಿ ಯಾವ ಸ್ಥಳವೂ ಇರುವುದಿಲ್ಲ, ಮನೆಯೂ ಇರುವುದಿಲ್ಲ ಮತ್ತು ನಾನು ಅದನ್ನು ಸಾದಾಸೀದಾ ಹೇಳಲೇಬೇಕಿದೆ (ಕೇಳಿ, ಕೇಳಿ). ಈಗ ಮೀಸಲಾತಿ ಎಂದರೆ ನೀವು ಸಲಹೆ ಮಾಡಿದ ಖಂಡದಂತೆ ಎಂದು ಆವಶ್ಯಕವಾಗಿ ನೀವು ಅರ್ಥಯಿಸುವುದಾದರೆ ನಿಮ್ಮ ಸ್ವಂತ ಪ್ರಯೋಜನಕ್ಕಾಗಿ ಇರುವುದಕ್ಕೂ ಮೀಸಲಾತಿಯನ್ನು ಹಿಂತೆಗೆದುಕೊಳ್ಳಲು ನಾನು ಸಿದ್ಧನಿದ್ದೇನೆ. ನೀವು ಅದಕ್ಕೆ ಒಪ್ಪಿದರೆ, ನಾನು ಸಿದ್ಧನಿದ್ದೇನೆ ಮತ್ತು ಅದು ನಿಮಗೆ ತೃಪ್ತಿ ತರುವುದಾದರೆ ಈ ಸದನದಲ್ಲಿ ಯಾರೊಬ್ಬರೂ ಮೀಸಲಾತಿಯನ್ನು ಹಿಂತೆಗೆದುಕೊಳ್ಳುವುದರ ವಿರುದ್ಧ ಇರುವುದಿಲ್ಲ ಎಂದು ನನಗೆ ಭರವಸೆ ಇದೆ (ಹರ್ಷೋದ್ಗಾರ) ನೀವು ಎರಡೂ ಪ್ರಯೋಜನ ಹೊಂದಿರಲು ಆಗುವುದಿಲ್ಲ. ಆದುದರಿಂದ ನನ್ನ ಗೆಳೆಯರೇ, ನೀವು ನಿಮ್ಮ ಮನೋಭಾವವನ್ನು ಬದಲಾಯಿಸಿಕೊಳ್ಳಬೇಕು ಇಲ್ಲವೆ ಪರಿಸ್ಥಿತಿಗಳಿಗೆ ನೀವೇ ಹೊಂದಿಕೊಳ್ಳಬೇಕು ಮತ್ತು "ಓಹ್, ನಿಮ್ಮ ಬಗ್ಗೆ ನಮಗೆ ದೊಡ್ಡ ವಾತ್ಸಲ್ಯವಿದೆ" ಎಂದು ಹೇಳಲು ಸೋಗು ಹಾಕಬೇಡಿ. ನಾವು ನಿಮ್ಮ ಪ್ರೀತಿ-ವಾತ್ಸಲ್ಯ ನೋಡಿದ್ದೇವೆ. ಆ ಬಗ್ಗೆ ಏಕೆ ಮಾತು? ನಾವು ಆ ವಾತ್ಸಲ್ಯ ಮರೆಯೋಣ. ನಾವು ವಾಸ್ತವತೆಗಳನ್ನು ಎದುರಿಸೋಣ. ನೀವು ನಿಜವಾಗಿಯೂ ಇಲ್ಲಿರಲು ಮತ್ತು ನಮ್ಮೊಂದಿಗೆ ಸಹಕರಿಸಲು ಬಯಸುವಿರಾ ಅಥವಾ ಪುನಃ ನೀವು ಅಡ್ಡಿಪಡಿಸುವ ತಂತ್ರಗಳನ್ನು ಮಾಡಬಯಸುವಿರಾ? ಎಂದು ನಿಮ್ಮನ್ನೇ ಕೇಳಿಕೊಳ್ಳಿ. ಆದುದರಿಂದ ನಾನು ನಿಮ್ಮಲ್ಲಿ ಮನವಿ ಮಾಡಿದಾಗ, ನಿಮ್ಮ ಹೃದಯದಲ್ಲಿಯೇ ಪರಿವರ್ತನೆಯಾಗಬೇಕು ಎಂದು ಮನವಿ ಮಾಡುತ್ತೇನೆ. ಮಾತುಗಳಲ್ಲಿ ಬದಲಾವಣೆಯಿಲ್ಲ. ಏಕೆಂದರೆ, ಮಾತು ಇಲ್ಲಿ ಏನೂ ಮಾಡಹೋಗುವುದಿಲ್ಲ. ಆದುದರಿಂದ ನಾನು ಇನ್ನೂ ನಿಮ್ಮಲ್ಲಿ ಮನವಿ ಮಾಡುತ್ತೇನೆ; "ಗೆಳೆಯರೆ, ನಿಮ್ಮ ಮನೋಭಾವ ಪುನಃ ಗಮನಿಸಿ ಮತ್ತು ನಿಮ್ಮ ತಿದ್ದುಪಡಿ ಹಿಂತೆಗೆದುಕೊಳ್ಳಿ." "ಓಹ್ ಮುಸ್ಲಿಮರು ಕೇಳಿಸಿಕೊಳ್ಳಲಿಲ್ಲ, ಮುಸ್ಲಿಮ್ ತಿದ್ದುಪಡಿಯನ್ನು ಎತ್ತಿಕೊಳ್ಳಲಿಲ್ಲ" ಎಂದು ಏಕೆ ಹೇಳುತ್ತಾ ಇರಬೇಕು? ಅದರಿಂದ ನಿಮಗೇನಾದರೂ ಆಗುವುದಿದ್ದರೆ, ನೀವು ತುಂಬ ತಪ್ಪು ತಿಳಿದಿರುವಿರಿ ಮತ್ತು ನಾನು ಅದು ಮುಸ್ಲಿಮ್ ಅಲ್ಪಸಂಖ್ಯಾತರನ್ನು ರಕ್ಷಿಸಲು ಈ ಪ್ರಸಕ್ತ ಸ್ಥಿತಿಯಲ್ಲಿ ಮತ್ತು ಪ್ರಸಕ್ತ ವಾತಾವರಣದಲ್ಲಿ ನನಗೆ ಎಷ್ಟು ಶ್ರಮವಾಯಿತು ಎಂದು ನಾನು ಬಲ್ಲೆ. ಆದುದರಿಂದ ನೀವು ಯಾವ ಬಗೆ ಚಳವಳಿ ಕೈಕೊಂಡಿರೊ ಆ ದಿನಗಳು ಮುಗಿದಿವೆ ಎಂಬುದನ್ನು ಮರೆಯಬೇಡಿ ಮತ್ತು ನಾವು ಒಂದು ಹೊಸ ಅಧ್ಯಾಯ ಆರಂಭಿಸೋಣ ಎಂದು ನಾನು ಸಲಹೆ ಮಾಡುತ್ತೇನೆ. ಆದುದರಿಂದ ನಾನು ಮತ್ತೊಮ್ಮೆ ತಮ್ಮನ್ನು ಹಿಂದಿನದನ್ನು ಮರೆತುಬಿಡಿ

ಎಂದು ಮನವಿ ಮಾಡುತ್ತೇನೆ. ಏನೆಲ್ಲ ಆಗಿದೆ ಎಂಬುದನ್ನು ಮರೆತುಬಿಡಿ. ನೀವು ಏನು ಬಯಸಿದಿರೊ ಅದು ಪಡೆದುಕೊಂಡಿದ್ದೀರಿ. ನಿಮಗೆ ಒಂದು ಪ್ರತ್ಯೇಕ ರಾಷ್ಟ್ರ ನಿರ್ಮಾಣವಾಗಿದೆ. ನೆನಪಿಡಿ ಅದಕ್ಕೆ ಜವಾಬ್ದಾರಿ ಮತ್ತು ಯಾರು ಪಾಕಿಸ್ತಾನದಲ್ಲಿ ಉಳಿದಿರುವರೊ ಅವರು. ನೀವು ಚಳವಳಿ ಮಾಡಿ ಅದನ್ನು ಪಡೆದುಕೊಂಡಿರಿ. ಈಗ ನಿಮಗೆ ಇನ್ನೇನು ಬೇಕು? ನನಗೆ ತಿಳಿಯದು. ಬಹುಸಂಖ್ಯಾತ ಹಿಂದೂ ಪ್ರಾಂತ್ಯಗಳಲ್ಲಿ ನೀವು ಅಲ್ಪಸಂಖ್ಯಾತರು ಚಳವಳಿ ಮುನ್ನಡೆಸಿದಿರಿ. ನೀವು ವಿಭಜನೆ ಪಡೆದಿರಿ ಮತ್ತು ಈಗ ಪುನಃ ನೀವು ನನಗೆ ಹೇಳುತ್ತಿದ್ದೀರಿ ಮತ್ತು ನನಗೆ ಕೇಳುತ್ತಿದ್ದೀರಿ, ಕಿರಿಯ ಸೋದರರ ವಾತ್ಸಲ್ಯ ಗಳಿಸುವ ಉದ್ದೇಶಕ್ಕೆ ನಾನು ಅದನ್ನೇ ಪುನಃ ಒಪ್ಪಬೇಕು, ವಿಭಜಿತ ಭಾಗದಲ್ಲಿ ಪುನಃ ದೇಶವನ್ನು ವಿಭಜಿಸಬೇಕು ಎಂಗು ಹೇಳಬೇಕೆಂದು. ದೇವರ ದಯೆಯಿಂದ ನಮಗೂ ತುಸು ಪರಿಜ್ಞಾನ ಇದೆ ಎಂದು ತಿಳಿಯಿರಿ. ವಿಷಯವನ್ನು ಸ್ಪಷ್ಟವಾಗಿ ನಾವು ಅರ್ಥಮಾಡಿಕೊಳ್ಳೋಣ. ಆದುದರಿಂದ ನಾನು ಹಿಂದಿನದನ್ನು ಮರೆಯಬೇಕು ಎಂದು ಕೇಳಿದಾಗ, ನಾನು ಅದನ್ನು ಪ್ರಾಮಾಣಿಕವಾಗಿ ಹೇಳಿದ್ದೇನೆ. ನಿಮಗೆ ಯಾವ ಅನ್ಯಾಯವೂ ಇರುವುದಿಲ್ಲ. ನಿಮ್ಮತ್ತ ಔದಾರ್ಯವಿರುತ್ತದೆ. ಆದರೆ ಅಲ್ಲಿ ಪರಸ್ಪರ ಕೊಟ್ಟು ತೆಗೆದುಕೊಳ್ಳುವುದಿರಬೇಕು. ಅದಿಲ್ಲವೆಂದಾದರೆ, ನಾನು ಹೇಳುತ್ತೇನೆ ತಿಳಿಯಿರಿ, ನಿಮ್ಮ ಮಾತುಗಳ ಹಿಂದೆ ಏನಿದೆಯೋ ಅದನ್ನು ಯಾವ ಮೃದುಮಾತುಗಳು ಮುಚ್ಚಿಡುವುದಿಲ್ಲ. ಆದುದರಿಂದ ನಾನು ಮತ್ತೊಮ್ಮೆ ನೇರವಾಗಿ ಮತ್ತು ದೃಢವಾಗಿ, ನಾವು ಮರೆಯೋಣ ಮತ್ತು ನಾವುಗಳು ಒಂದು ರಾಷ್ಟ್ರವಾಗಿರೋಣ ಎಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅನುಸೂಚಿತ ಜಾತಿ ಗೆಳೆಯರಿಗೂ ನಾನು ಮನವಿ ಮಾಡುತ್ತಿದ್ದೇನೆ: "ನಾವು ಡಾ. ಅಂಬೇಡ್ಕರ್ ಮತ್ತು ಅವರ ಗುಂಪಿನವರು ಏನು ಮಾಡಿದ್ದಾರೋ ಅದು ಮರೆಯೋಣ." ನೀವು ಏನು ಮಾಡಿದಿರೊ ಅದನ್ನೂ ನಾವು ಮರೆಯೋಣ. ಪುನಃ ನಿಮ್ಮ ರೀತಿಯಲ್ಲಿ ನೀವು ಬಹು ಸಮೀಪದಿಂದ ದೇಶದ ವಿಭಜನೆ ತಪ್ಪಿಸಿಕೊಂಡಿರಿ. ನೀವು ಬಾಂಬೆಯಲ್ಲಿ ಪ್ರತ್ಯೇಕ ಮತದಾರರ ಸಮುದಾಯಗಳ ಫಲಿತಾಂಶ ನೋಡಿರುವಿರಿ. ಅಂದರೆ ನಿಮ್ಮ ಸಮುದಾಯದ ಅತ್ಯಂತ ಮಹತ್ತ್ವದ ಆಪದ್ಬಾಂಧವರೊಬ್ಬರು ಬಾಂಬೆಗೆ ಭಂಗಿವಸತಿಗೆ ತಂಗಲು ಬಂದಾಗ, ನಿಮ್ಮ ಜನರೇ ಅವರ ವಸತಿಯ ಮೇಲೆ ಕಲ್ಲೆಸೆಯಲು ಯತ್ನಿಸಿದಿರಿ. ಅದೇನಾಯಿತು? ಅದು ಪುನಃ ಈ ವಿಷದ ಫಲಿತಾಂಶವೇ. ಆದುದರಿಂದ ನಾನು ಇದನ್ನು ಮಾತ್ರ ವಿರೋಧಿಸುತ್ತೇನೆ. ಏಕೆಂದರೆ, ಹಿಂದೂ ಬಹುಸಂಖ್ಯಾತ ಜನರು ನಿಮಗೆ ಒಳ್ಳೆಯದನ್ನೇ ಹಾರೈಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಅವರಿಲ್ಲದಿದ್ದರೆ ನೀವೆಲ್ಲಿರುತ್ತೀರಿ? ಆದ್ದರಿಂದ ಅವರ ವಿಶ್ವಾಸ ಗಳಿಸಿ ಮತ್ತು ನೀವು ಅನುಸೂಚಿತ ಜಾತಿ ಎಂಬುದನ್ನು ಮರೆಯಿರಿ. ಶ್ರೀ ಖಾಂಡೇಕರ್ ಅವರು ಒಬ್ಬ ಅನುಸೂಚಿತ ಜಾತಿ ವ್ಯಕ್ತಿ, ಹೇಗೆ ಎಂದು ನಾನರಿಯೆ. ಅವರು ಮತ್ತು ನಾನು ಭಾರತದ ಹೊರಗೆ ಹೋಗಬೇಕಾದಲ್ಲಿ, ಯಾರೂ ಅವರು ಅನುಸೂಚಿತ ಜಾತಿಯ ವ್ಯಕ್ತಿಯೋ ಅಥವಾ ನಾನು ಒಬ್ಬ ಅನುಸೂಚಿತ ಜಾತಿ ವ್ಯಕ್ತಿಯೋ ಎಂದು ಕಂಡುಹಿಡಿಯುವುದಿಲ್ಲ. ನಮ್ಮ ನಡುವೆ ಅನುಸೂಚಿತ ಜಾತಿ ಎಂಬುದಿಲ್ಲ. ಆದುದರಿಂದ ಅನುಸೂಚಿತ ಜಾತಿಯ ಆ ಪ್ರತಿನಿಧಿಗಳು, ಅನುಸೂಚಿತ ಜಾತಿ ನಮ್ಮ ಸಮಾಜದಿಂದ ಕಾಣಿಸದಂತೆ ಮಾಡಬೇಕಾಗುತ್ತದೆ ಎಂದು ತಿಳಿಯಬೇಕು. ಹಾಗೆ ಕಾಣಿಸದಂತೆ ಮಾಡಬೇಕಿದ್ದರೆ, ಯಾರೆಲ್ಲ ಅಸ್ಪೃಶ್ಯರೆಂಬುದನ್ನು ಬಿಟ್ಟುಬಿಟ್ಟಿದ್ದಾರೋ ಮತ್ತು ನಮ್ಮ ನಡುವೆ ಕುಳಿತುಕೊಳ್ಳುವರೊ, ಅವರು ತಾವು ಅಸ್ಪೃಶ್ಯರು ಎಂಬುದನ್ನು ಮರೆಯಬೇಕು. ಇಲ್ಲದಿದ್ದರೆ ಅವರು ಈ ಕೀಳರಿಮೆಯನ್ನಿಟ್ಟುಕೊಂಡರೆ, ಅವರು ತಮ್ಮ ಸಮುದಾಯದ ಸೇವೆ ಮಾಡಲು ಸಮರ್ಥರಾಗುವುದಿಲ್ಲ. ಅವರು ತಮ್ಮ ಸಮುದಾಯದ ಸೇವೆ ಮಾಡಲು ಈಗ ನಮ್ಮ ಜತೆ ಇದ್ದೇವೆ ಎಂದು ಭಾವಿಸಿದರೆ ಮಾತ್ರ ಸಮರ್ಥರಾಗುತ್ತಾರೆ. ಅವರು ಇನ್ನೆಂದೂ ಅನುಸೂಚಿತ ಜಾತಿಯವರಲ್ಲ ಮತ್ತು ಆದುದರಿಂದ ಅವರು ತಮ್ಮ ರೀತಿ ನೀತಿಗಳನ್ನು ಬದಲಾಯಿಸಿಕೊಳ್ಳಬೇಕು ಮತ್ತು ನಾನು ಅವರಿಗೆ ಕೂಡ, ತಮ್ಮ ಮತ್ತು ಅನುಸೂಚಿತ ಜಾತಿಗಳ ಇತರ ಗುಂಪಿನ ನಡುವೆ ಒಡಕು ಇರಬಾರದು ಎಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಅವರಲ್ಲಿ

ಅನೇಕ ಗುಂಪುಗಳು ಇವೆ. ಆದರೆ ಪ್ರತಿಯೊಂದೂ ತನ್ನದೇ ಆದ ತಿಳಿವಳಿಕೆಯ ರೀತಿ ಯತ್ನಿಸುತ್ತದೆ. ನಾವೀಗ ಪುನಃ ಆರಂಭಿಸಬೇಕಿದೆ. ಆದುದರಿಂದ ನಾವು ಈ ವರ್ಗಗಳನ್ನು ಮತ್ತು ಉಪವರ್ಗಗಳನ್ನು ಮರೆಯೋಣ ಮತ್ತು ನಾವು ಒಟ್ಟಿಗೆ ಒಂದಾಗಿ ನಿಲ್ಲೋಣ.

**ಮಾನ್ಯ ಸಭಾಧ್ಯಕ್ಷರು :** ನಾನು ಮೊದಲು ಶ್ರೀ ನಾಗಪ್ಪನವರ ತಿದ್ದುಪಡಿಯನ್ನು ಮತಕ್ಕೆ ಹಾಕಬೇಕಿದೆ.

**ಶ್ರೀ ಎಸ್.ನಾಗಪ್ಪ :** ನಾನು ನನ್ನ ತಿದ್ದುಪಡಿಯನ್ನು ಒತ್ತಾಯಿಸುವುದಿಲ್ಲ. ನಾನು ಅದನ್ನು ಹಿಂತೆಗೆದುಕೊಳ್ಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಅವರು ತಮ್ಮ ತಿದ್ದುಪಡಿ ಹಿಂತೆಗೆದುಕೊಳ್ಳಲು ಸದನವು ಒಪ್ಪಿಗೆ ನೀಡುತ್ತದೆಯೇ?

**ಗೌರವಾನ್ವಿತ ಸದಸ್ಯರು :** ಹೌದು.

ತಿದ್ದುಪಡಿಯನ್ನು ಸಭೆಯ ಅನುಮತಿ ಪಡೆದು ಹಿಂತೆಗೆದುಕೊಳ್ಳಲಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಬಳಿಕ ಅಹ್ಮದ್ ಇಬ್ರಾಹಿಂ ಸಾಹಿಬ್ ಬಹಾದೂರ್ ಅವರ ತಿದ್ದುಪಡಿ ಈ ರೀತಿ ಇದೆ.

"ಅಲ್ಪಸಂಖ್ಯಾತರು, ಮೂಲಭೂತ ಹಕ್ಕುಗಳು ಇತ್ಯಾದಿ ಕುರಿತ ಸಲಹಾ ಸಮಿತಿಯ ವರದಿಯನ್ನು ಪರಿಗಣಿಸುವಲ್ಲಿ ಸಂವಿಧಾನ ರಚನಾಸಭೆಯ ಈ ಸಭೆ ಅಲ್ಪಸಂಖ್ಯಾತರು ಕುರಿತಂತೆ, ಅಲ್ಪಸಂಖ್ಯಾತರ ಸ್ಥಾನಗಳ ಮೀಸಲಾತಿ ಸಹಿತ ಎಲ್ಲ ಸಮುದಾಯಗಳಿಗೆ ಜಂಟಿಮತದಾರರ ಸಮುದಾಯಗಳ ಆಧಾರದ ಮೇಲೆ ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ಚುನಾವಣೆಗಳನ್ನು ನಡೆಸುವುದಿದ್ದಲ್ಲಿ ಚುನಾವಣೆಗಳನ್ನು ಈ ಕೆಳಗಿನ ಆಧಾರದ ಮೇರೆಗೆ ನಡೆಸಬೇಕು ಎಂದು ನಿರ್ಣಯಿಸಿದೆ."

"ತಮ್ಮ ಸ್ವಂತ ಸಮುದಾಯದಿಂದ ಚಲಾಯಿಸಿದ ಮತಗಳ ಕಡೇಪಕ್ಷ ಶೇಕಡ ೩೦ರಷ್ಟು ಗಳಿಸಿದ ಅಭ್ಯರ್ಥಿಗಳ ಪೈಕಿ, ಜಂಟಿ ಮತದಾರರ ಪಟ್ಟಿ ಮೇರೆಗೆ ಚಲಾಯಿಸಿದ ಅತ್ಯಧಿಕ ಸಂಖ್ಯೆ ಮತಗಳನ್ನು ಗಳಿಸಿದ ಅಭ್ಯರ್ಥಿಯು, ಚುನಾಯಿತನಾಗಿದ್ದಾನೆಂದು ಘೋಷಿಸಲಾಗುತ್ತದೆ. ತಮ್ಮದೇ ಸಮುದಾಯದವರು ಚಲಾಯಿಸಿದ ಮತಗಳ ಶೇಕಡ ೩೦ಕ್ಕೆ ಕಡಿಮೆಯಿಲ್ಲದಷ್ಟು ಮತಗಳನ್ನು ಗಳಿಸಿದ ಅಭ್ಯರ್ಥಿಯು ಇಲ್ಲದಿದ್ದರೆ, ಆಗ ತಮ್ಮದೇ ಸಮುದಾಯದ ಅತ್ಯಧಿಕ ಸಂಖ್ಯೆಯ ಮತಗಳನ್ನು ಗಳಿಸಿದ ಇಬ್ಬರು ಅಭ್ಯರ್ಥಿಗಳ ಪೈಕಿ ಯಾರು ಒಟ್ಟು ಹಾಕಲಾದ ಮತಗಳ ಅತ್ಯಧಿಕ ಸಂಖ್ಯೆಯ ಮತಗಳನ್ನು ಯಾರು ಗಳಿಸಿದವನು ಚುನಾಯಿತನಾಗಿದ್ದಾನೆ ಎಂದು ಘೋಷಿಸಲಾಗುವುದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ನಾನು ಈಗ ಮೂಲ ಖಂಡ ೬ನ್ನು ಮತಕ್ಕೆ ಹಾಕುತ್ತೇನೆ.

ಖಂಡ ೬ನ್ನು ಅಂಗೀಕರಿಸಲಾಯಿತು.

## ಖಂಡ ೭

**ಮಾನ್ಯ ಸಭಾಧ್ಯಕ್ಷರು :** ನಾವೀಗ ಖಂಡ ೭ನ್ನು ತೆಗೆದುಕೊಳ್ಳೋಣ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಮಾನ್ಯರೆ, ನಾನು ಮಂಡಿಸಲು ಕೇಳಿಕೊಳ್ಳುತ್ತೇನೆ:

"೭. ಮತದಾನ ವಿಧಾನ : ಇವು ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳಿರಬಹುದು. ಆದರೆ ಸಂಚಿತ ಮತದಾನಕ್ಕೆ ಅನುಮತಿ ಇಲ್ಲ."

ಈ ತಿದ್ದುಪಡಿಯನ್ನು ನಕಾರಾತ್ಮಕ ರೂಪದಲ್ಲಿ ಅಂದರೆ, ಈಗಿರುವಂತೆ ಮಂಡಿಸುವ ಬದಲು, ಅದನ್ನು ಧನಾತ್ಮಕ ರೂಪದಲ್ಲಿ ಹಾಕಬೇಕು ಎಂದು ಒಂದು ತಿದ್ದುಪಡಿ ಇದೆ. ಅಂದರೆ "ಹಂಚಿಕೆ ಮಾಡಬಹುದಾದ ಮತದಾನ ಇರತಕ್ಕದ್ದು" ಎಂದು. ಆ ತಿದ್ದುಪಡಿಯನ್ನು ಔಪಚಾರಿಕವಾಗಿ ಮಂಡಿಸಲಾಗುತ್ತದೆ ಮತ್ತು ನಾನು

ಅದನ್ನು ಸ್ವೀಕರಿಸಲು ಪ್ರಸ್ತಾವಿಸುತ್ತೇನೆ. ಹೇಗೇ ಆಗಲಿ, ಈ ವರದಿಯನ್ನು ನಾವು ಇಂದು, ಸಭೆ ಮುಕ್ತಾಯಗೊಳಿಸಿ ಏಳುವ ಮೊದಲು, ಈ ಸದನದ ಗೌರವಾನ್ವಿತ ಸದಸ್ಯರಿಗೆ ಸಲಹೆ ಮಾಡುತ್ತೇನೆ. ಆದುದರಿಂದ ಈ ವರದಿಯನ್ನು ಸಂಪೂರ್ಣವಾಗಿ ಚರ್ಚಿಸಲಾಗಿದೆಯಾಗಿ ಮತ್ತು ಮುಖ್ಯ ಅಂಶಗಳನ್ನು ಅಂಗೀಕರಿಸಿದ್ದೇವೆ ಎಂಬುದಾಗಿ ಹಾಗೂ, ಏನಾದರೂ ತಿದ್ದುಪಡಿಗಳಿದ್ದರೆ ಅವುಗಳ ಕುರಿತು ಸುದೀರ್ಘ ಭಾಷಣಗಳು ಇರುವುದಿಲ್ಲ ಮತ್ತು ನಾವು ಸಮಯ ವ್ಯರ್ಥಮಾಡುವುದಿಲ್ಲ ಎಂದು ಆಶಿಸುತ್ತೇನೆ. ನಾನು ಖಂಡವನ್ನು ಸದನದ ಸಮ್ಮತಿಗೆ ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಎರಡು ತಿದ್ದುಪಡಿಗಳಿವೆ. ಒಂದು ಶ್ರೀ ಕೇಶವರಾವ್ ಅವರದು ಮತ್ತು ಇನ್ನೊಂದು ಶ್ರೀ ಮಲ್ಲಿಕ್ ಅವರದು.

(ಶ್ರೀ ಕೇಶವರಾವ್ ಮತ್ತು ಶ್ರೀ ಎಂ.ಬಿ. ಮಲ್ಲಿಕ್ ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನನ್ನ ತಿದ್ದುಪಡಿಯ ಭಾಗ (೨) ಮಾತ್ರ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ. ನಾನು ಭಾಗ (೧)ನ್ನು ಮಂಡಿಸಲು ಇಚ್ಛಿಸುವುದಿಲ್ಲ. ನನ್ನ ತಿದ್ದುಪಡಿಯು ಈ ರೀತಿ ಇದೆ.

"ಮತದಾನವು ಹಂಚಿಕೆ ಮಾಡಬಹುದಾದುದಾಗಿರತಕ್ಕದ್ದು, ಅಂದರೆ ಪ್ರತಿಯೊಬ್ಬ ಮತದಾರನು ಸದಸ್ಯರಿರುವಷ್ಟೂ ಮತಗಳನ್ನು ಹೊಂದಿರುತ್ತಾನೆ ಮತ್ತು ಆತ ಒಬ್ಬ ಅಭ್ಯರ್ಥಿಗೆ ಒಂದು ಮತ ಮಾತ್ರ ಹಾಕಬೇಕು."

ಈ ತಿದ್ದುಪಡಿಯು ಆವಶ್ಯಕ. ಏಕೆಂದರೆ, ನಾವು ಅಳವಡಿಸಿರುವ ಜಂಟಿ ಮತದಾರರ ಸಮುದಾಯಗಳ ಪೈಕಿ ಗರಿಷ್ಠ ಅನುಕೂಲವನ್ನು ಪಡೆಯಲು ಇಚ್ಛಿಸುತ್ತೇನೆ. ಮತದಾರರ ಸಮುದಾಯಗಳ ಪ್ರತಿಯೊಂದು ವರ್ಗವನ್ನು ಪ್ರತಿಯೊಬ್ಬ ಅಭ್ಯರ್ಥಿಯು ತಿಳಿದಿರಬೇಕು ಮತ್ತು ಒಂದು ವಿಶಿಷ್ಟ ವರ್ಗಕ್ಕೆ ತಾನೇ ಸೀಮಿತನಾಗಲು ಸಮರ್ಥನಿಲ್ಲದವರೆಗೆ ಪ್ರತ್ಯೇಕ ಮತದಾರರ ಸಮುದಾಯದ ಅನಿಷ್ಟ ಶಕ್ತಿಗಳನ್ನು ಉಳಿಸಿಕೊಂಡರಾಗುತ್ತದೆ. ನನ್ನ ತಿದ್ದುಪಡಿಯ ಫಲಿತಾಂಶವೆಂದರೆ ಒಬ್ಬ ಅನುಸೂಚಿತ ಜಾತಿ ಅಭ್ಯರ್ಥಿ ಇದ್ದಲ್ಲಿ, ಆತ ತಾನು ಕೇವಲ ಅನುಸೂಚಿತ ಜಾತಿ ಮತಗಳನ್ನೇ ಕೂಡಿಹಾಕಲು ಇಚ್ಛಿಸುತ್ತೇನೆ ಎಂದು ಹೇಳಲು ಸಮರ್ಥನಿರುವುದಿಲ್ಲ ಮತ್ತು ಒಬ್ಬ ಕ್ರೈಸ್ತ ಅಭ್ಯರ್ಥಿಯು ತಾನು ಕ್ರೈಸ್ತರ ಮತಗಳನ್ನೇ ಕೂಡಿಹಾಕಲು ಇಚ್ಛಿಸುತ್ತೇನೆ ಎಂದು ಹೇಳಲು ಸಮರ್ಥನಿರುವುದಿಲ್ಲ. ಪ್ರತಿಯೊಬ್ಬರೂ ಪ್ರತಿಯೊಂದು ಮತವನ್ನು ಪ್ರತಿಯೊಂದು ವರ್ಗದಿಂದ ಕಾಣಲು ಇಚ್ಛಿಸಬೇಕು ಮತ್ತು ಹಾಗಾಗಿ ಇನ್ನಾವುದನ್ನೂ ಮತ್ತೆ ವಿಸ್ತರಿಸದೆ ನಾನು ನನ್ನ ತಿದ್ದುಪಡಿಯನ್ನು ಸೂಚಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಯಾರಾದರು ಏನಾದರೂ ಹೇಳಲು ಬಯಸುವಿರಾ?

**ಶ್ರೀ ಡಿ.ಎಚ್. ಚಂದ್ರಶೇಖರಯ್ಯ** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ನನ್ನ ಹೆಸರಿನಲ್ಲಿರುವ ತಿದ್ದುಪಡಿ ಈ ಕೆಳಗಿನಂತಿದೆ:

"(೧) ವರ್ಗಾಯಿಸಬಹುದಾದ ಒಂದೇ ಮತದ ಅನುಪಾತ ಪ್ರಮಾಣ ಪ್ರಾತಿನಿಧ್ಯದ ವ್ಯವಸ್ಥೆಯ ಮೇಲೆ ಎಲ್ಲ ಚುನಾವಣೆಗಳನ್ನು ನಡೆಸಲು ಉಪಬಂಧ ಕಲ್ಪಿಸಕ್ಕದ್ದು.

(೨) ಈ ಮೇಲಿನ ವ್ಯವಸ್ಥೆ ಅಳವಡಿಸದಿದ್ದರೆ ವರ್ಗಾಯಿಸಲಾಗದ ಒಂದೇ ಮತದ ವ್ಯವಸ್ಥೆ ಉಪಬಂಧ ಕಲ್ಪಿಸತಕ್ಕದ್ದು."

ಅನುಬಂಧದ ಕಂಡಿಕೆ ೭ಕ್ಕೆ ಅನುಗುಣವಾದ ವರದಿಯ ಕಂಡಿಕೆ ೧೨ರಲ್ಲಿ, ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳ ಚುನಾವಣೆಗಳಲ್ಲಿ, ಸಂಚಿತ ಮತದಾನದ ಪದ್ಧತಿಯನ್ನು ಅನುಮತಿಸಬಾರದು. ಆದರೆ ಈಗಾಗಲೇ ಸರ್ದಾರ್ ಪಟೇಲ್‌ಜಿಯವರು ಅಂಗೀಕರಿಸಿದಂತೆ ಅಳವಡಿಸಬೇಕಾದ ಮತದಾನದ ವಾಸ್ತವ ವಿಧಾನ ಕುರಿತ ವರದಿಯಲ್ಲಿ ಯಾವುದೇ ನಿರ್ದಿಷ್ಟ ಸಲಹೆಯನ್ನು ಸೂಚಿಸಿಲ್ಲ. ಈ ಲುಪ್ತ ಭಾಗವನ್ನು ತುಂಬಲು ಹೊಸ ಸಂವಿಧಾನದ ಅಡಿ ಎಲ್ಲ ಚುನಾವಣೆಗಳಲ್ಲಿ ಕಡ್ಡಾಯ ಹಂಚಿಕೆ ಮಾಡಬಹುದಾದ

ಮತದಾನ ಪದ್ಧತಿಯನ್ನು ಅಳವಡಿಸಲು ಪ್ರೇರಿಸುವ ಒಂದು ತಿದ್ದುಪಡಿಯನ್ನು ಶ್ರೀ ಕೆ. ಸಂತಾನಮ್ ಅವರು ಮಂಡಿಸಿರುವರು. ಮಾನ್ಯರೆ, ನನ್ನ ತಿದ್ದುಪಡಿ ಕುರಿತು ಮಾತನಾಡುವ ಮೊದಲು ನಾನು ಸಲಹೆ ಮಾಡಲಾಗಿರುವ ವಿಧಾನ ಕುರಿತು ಕೆಲವು ಮಾತುಗಳು ಹೇಳಲು ಇಷ್ಟಪಡುತ್ತೇನೆ. ಘಟಕ (ಬ್ಲಾಕ್) ಮತ ಎಂದೂ ಕರೆಯಲಾದ ಈ ವಿಧಾನ ಪ್ರತಿ ಮತದಾರನಿಗೂ ತುಂಬಬೇಕಾದ ಸ್ಥಾನಗಳಿರುವಷ್ಟು ಮತಗಳನ್ನು ಹೊಂದಲು ಅನುಮತಿ ನೀಡುತ್ತದೆ. ಆದರೆ ಅವನು ಒಬ್ಬ ಅಭ್ಯರ್ಥಿಗೆ ಒಂದೇ ಮತ ಮಾತ್ರ ನೀಡಲು ಒತ್ತಾಯಿಸಿದೆ. ಇದು ವಿಶ್ವದ ಕೆಲವು ದೇಶಗಳಲ್ಲಿ ರೂಢಿಯಲ್ಲಿರುವ ಪದ್ಧತಿಯಾಗಿದೆ. ಆದರೆ ಅದನ್ನೂ ಅನುಷ್ಠಾನಗೊಳಿಸುವಲ್ಲಿ ಅದರಲ್ಲಿರುವ ಕೆಲವು ಲೋಪಗಳನ್ನು ಬೆಳಕಿಗೆ ಬಂದಿವೆ. ಆದುದರಿಂದ ಅದರತ್ತ ರಾಜಕೀಯ ಚಿಂತಕರು ಮತ್ತು ರಾಜಕಾರಣಿಗಳು ಅದನ್ನು ವಿರೋಧಿಸುವುದು ಹೆಚ್ಚುತ್ತದೆ ಎಂದು ಬರೆದಿರುವ ಲೇಖನಗಳನ್ನು ಗಮನಿಸಿದರೆ ತಿಳಿಯುತ್ತದೆ. ಈ ಪದ್ಧತಿಯಡಿ ಕೇವಲ ಬಹುಮತದ ಪಕ್ಷ ಚುನಾವಣೆಗಳಲ್ಲಿ ಪೂರ್ಣ ಯಶಸ್ಸು ಪಡೆಯುತ್ತಿದೆ. ನನ್ನ ವಿಷಯ ಸ್ಪಷ್ಟವಾಗಿಸಲು ಒಂದು ಉದಾಹರಣೆ ತೆಗೆದುಕೊಳ್ಳುತ್ತೇನೆ. ಒಂದು ವೇಳೆ ೧೦೦ ಮತಗಳುಳ್ಳ ಒಂದು ಮತದಾರರ ಸಮುದಾಯ ಇದೆ ಎನ್ನಿ. ಆಗ ೫೧ ಮತಗಳನ್ನು ಅರ್ಹವಾಗಿ ಗಳಿಸುವ ಪಕ್ಷವು ಠೀವಿಯಿಂದಿರುತ್ತದೆ ಮತ್ತು ಇನ್ನೊಂದು ಪಕ್ಷ ೪೯ ಮತಗಳನ್ನು ಹೊಂದಿದ್ದರೂ ಕಷ್ಟಕ್ಕೆ ಸಿಕ್ಕುತ್ತದೆ. ಈ ಪದ್ಧತಿಯು, ಒಂದು ಪಕ್ಷಕ್ಕೆ ಮಾತ್ರ ಯಶಸ್ಸು ತಂದು ಕೊಡುತ್ತದೆ ಮತ್ತು ಕೇವಲ ಒಂದು ಪಕ್ಷದಿಂದ ರೂಪುಗೊಂಡ ಶಾಸನಸಭೆ ಸ್ವರೂಪದಲ್ಲಿ ರಾಷ್ಟ್ರೀಯವಿರುತ್ತದೆ ಎಂದು ಎಂದೂ ಹೇಳಲಾಗುವುದಿಲ್ಲ ಇಲ್ಲವೆ ದೇಶದಲ್ಲಿ ಎಲ್ಲ ಮುಖ್ಯ ಹಿತಾಸಕ್ತಿಗಳು ಮತ್ತು ಜನರ ಗುಂಪುಗಳನ್ನು ಪ್ರತಿನಿಧಿಸುತ್ತದೆ ಎನ್ನಲೂ ಆಗದು. ಆಧುನಿಕ ಪ್ರಜಾಪ್ರಭುತ್ವವು ನಾವೆಲ್ಲ ತಿಳಿದಂತೆ, ಸಾಮಾನ್ಯವಾಗಿ ಒಂದು ಪ್ರಾತಿನಿಧಿಕ ಪ್ರಜಾಪ್ರಭುತ್ವ, ಅಂದರೆ ನಮ್ಮ ಶಾಸನಸಭೆಗಳು ಸೂಕ್ತವಾಗಿ ಮತ್ತು ಪೂರಾ ದೇಶದ ಸಾರ್ವಜನಿಕ ಅಭಿಪ್ರಾಯವನ್ನು ಬಿಂಬಿಸಬೇಕು. ಆದುದರಿಂದ ಪ್ರಸ್ತಾವಿಸಲಾದ ವಿಧಾನ ಗಂಭೀರ ಆಕ್ಷೇಪಣೆಗಳಿಗೆ ಮುಕ್ತ.

ಈ ಪದ್ಧತಿಯಲ್ಲಿರುವ ದೋಷಗಳನ್ನು ತಪ್ಪಿಸುವ ದೃಷ್ಟಿಯಿಂದ, ಅನುಪಾತ ಪ್ರಮಾಣ ಪ್ರಾತಿನಿಧ್ಯದ ಯಾವುದಾದರೂ ರೂಪ ಅಳವಡಿಸುವುದು ಅಥವಾ ವರ್ಗಾಯಿಸಬಹುದಾದ ಒಂದೇ ಒಂದೇ ಮತ ಪದ್ಧತಿ ಅಥವಾ ವರ್ಗಾಯಿಸಲಾಗದಾದ ಮತ ಪದ್ಧತಿ ಅಳವಡಿಸುವುದು ಆವಶ್ಯಕ. ನಾನು ಈ ಪದ್ಧತಿಗಳ ವಿವರಗಳಿಗೆ ಹೋಗುವುದಿಲ್ಲ. ಆದರೆ ಅವೆರಡೂ ವೈಜ್ಞಾನಿಕವಾದವು ಮತ್ತು ನಮ್ಮ ಪದ್ಧತಿಗಳು ಹಾಗೂ ಈ ಮತದಾನ ಸಂಖ್ಯಾ ಬಲಗಳಿಗೆ ಅನುಗುಣವಾಗಿ ಬಹುಸಂಖ್ಯಾತರಿಗೆ ಮತ್ತು ಅಲ್ಪಸಂಖ್ಯಾತರಿಗೆ ನಿಖರವಾಗಿ ಪ್ರಾತಿನಿಧ್ಯ ಕೊಡುತ್ತವೆ. ನಾನು, ಅಲ್ಪಸಂಖ್ಯಾತರು ಎಂದು ಹೇಳಿದಾಗ, ಬರಿಯ ಕೋಮುವಾರು ಅಲ್ಪಸಂಖ್ಯಾತರು ಎಂದು ಅರ್ಥವಲ್ಲ. ಹಾಗೆ ನೋಡಿದರೆ ಈ ಕೋಮುವಾದ ರಾಜಕೀಯದಿಂದ ಬೇಗನೇ ಹೊರ ಹೋದಂತೆ ನಮ್ಮ ದೇಶಕ್ಕೆ ಒಳ್ಳೆಯದು ಎಂದು ನಾನು ವೈಯಕ್ತಿಕವಾಗಿ ಭಾವಿಸುತ್ತೇನೆ. ಆದರೆ ಕೋಮುವಾದ ಹಾಗೂ ಅಲ್ಪಸಂಖ್ಯಾತರು ಇರುವವರೆಗೆ ಅವರು ನಾನು ಪ್ರಸ್ತಾವಿಸುತ್ತಿರುವ ಪದ್ಧತಿಯ ಅನುಕೂಲ ಪಡೆದುಕೊಳ್ಳುತ್ತಾರೆ. ನಾನು ಹೆಚ್ಚು ನಿರ್ದಿಷ್ಟವಾಗಿ ಗಮನದಲ್ಲಿಟ್ಟಿರುವ ಅಲ್ಪಸಂಖ್ಯಾತರು ರಾಜಕೀಯ ಪರಿಗಣನೆಗಳನ್ನು ಅಥವಾ ಆರ್ಥಿಕ ಸಿದ್ಧಾಂತಗಳನ್ನು ಅಥವಾ ಪ್ರಾದೇಶಿಕ ತಾರತಮ್ಯಗಳನ್ನು ಆಧರಿಸಿದವರಾಗಿದ್ದಾರೆ. ಈ ಮತದಾನದ ಪದ್ಧತಿಯ ವಿಷಯವು, ಅಲ್ಪಸಂಖ್ಯಾತರ ಹಕ್ಕುಗಳನ್ನು ಕುರಿತ ವರದಿಯಲ್ಲಿಗಿಂತ ಒಕ್ಕೂಟ ಸಂವಿಧಾನ ಸಮಿತಿಯ ವರದಿಯಲ್ಲಿ ಹೆಚ್ಚು ಸೂಕ್ತವಾಗಿ ಬರಬೇಕಾದುದು ಎಂದು ನಾನು ಆಲೋಚಿಸುವನಿದ್ದೇನೆ; ಏಕೆಂದರೆ, ಇದು ಶಾಸನಸಭೆಗಳಲ್ಲಿ ಪ್ರಾತಿನಿಧ್ಯ ರೂಪಕ್ಕೆ ಸಂಬಂಧಿಸಿದ ಒಂದು ಸಾರ್ವತ್ರಿಕ ವಿಷಯವಾಗಿದೆ. ಅಲ್ಪಸಂಖ್ಯಾತರ ಸ್ವರೂಪ ಏನೇ ಇರಲಿ, ತಕ್ಕುದಾಗಿ ಶಾಸನಸಭೆಯಲ್ಲಿ ಅದು ಸ್ಥಾನವೊಂದನ್ನು ಕಂಡುಕೊಳ್ಳಬೇಕು. ಈ ಪದ್ಧತಿಯು ವಿಶ್ವದ ಹಲವು ದೇಶಗಳಲ್ಲಿ ರೂಢಿಯಲ್ಲಿದೆ. ಉದಾಹರಣೆಗೆ: ಇಂಗ್ಲೆಂಡ್‌ನಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಕೆಲವು ಸದಸ್ಯರು ಅನುಪಾತ ಪ್ರಮಾಣ ಪ್ರಾತಿನಿಧ್ಯ ತತ್ತ್ವದ ಮೇಲೆ ಕೆಲವು

ವಿಶ್ವವಿದ್ಯಾಲಯಗಳಿಂದ ಆಯ್ಕೆಮಾಡಲಾಗುತ್ತದೆ. ಉತ್ತರ ಐರ್‌ಲ್ಯಾಂಡ್‌ನಲ್ಲಿ ಶಾಸನಸಭೆಯ ಎರಡೂ ಸದನಗಳಿಗೆ ಸದಸ್ಯರನ್ನು ಈ ಪದ್ಧತಿಯ ಆಧಾರದ ಮೇಲೆಯೇ ಆರಿಸಲಾಗುತ್ತಿದೆ. ದಕ್ಷಿಣ ಆಫ್ರಿಕಾದಲ್ಲಿ ಈ ಪದ್ಧತಿಗನುಗುಣವಾಗಿಯೇ ಶಾಸನಸಭೆ ಚುನಾವಣೆಗಳನ್ನು ನಡೆಸಲಾಗುತ್ತದೆ. ಭಾರತದಲ್ಲಿ ನಾವು ಕೆಲವು ಚುನಾವಣೆಗಳ ಸಂಬಂಧವಾಗಿ ಈ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಮತ್ತು ಈ ಸದನದ ಸದಸ್ಯರನ್ನು ಬದಲಾಯಿಸಬಹುದಾದ ಒಂದು ಮತದಿಂದ ಅನುಪಾತ ಪ್ರಮಾಣ ಪ್ರಾತಿನಿಧ್ಯ ತತ್ತ್ವದೊಂದಿಗನುಗುಣವಾಗಿ ಪ್ರಾಂತೀಯ ಶಾಸನಸಭೆಗಳಿಂದ ಚುನಾಯಿಸಲಾಗಿದೆ ಎಂದು ನನಗೆ ತಿಳಿಸಲಾಗಿದೆ. ಆದುದರಿಂದ ಒಂದು ಪದ್ಧತಿಯು ಎಲ್ಲರಿಗೂ ಯುಕ್ತವೂ ಮತ್ತು ನ್ಯಾಯೋಚಿತವಾದುದೂ ಆಗಿರುವಂಥದು. ಎಲ್ಲ ಮುಖ್ಯ ಅಂಶಗಳಿಗೂ ಮತ್ತು ಅನುಪಾತ ಪ್ರಮಾಣ ಮತದಾನ ಸಂಖ್ಯಾಬಲಗಳಿಗನುಗುಣವಾಗಿ ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ಕೊಡುತ್ತದೆ ಮತ್ತು ಶಾಸನಸಭೆಯ ಎಲ್ಲ ರಾಷ್ಟ್ರೀಯ ಹಿತಾಸಕ್ತಿಗಳೂ ಪೂರಾ ಪ್ರಾತಿನಿಧ್ಯ ಪಡೆಯಲು ಖಂಡಿತಾ ಅರ್ಹವಿರುತ್ತವೆ. ಅದಕ್ಕಿರುವ ಒಂದೇ ಆಕ್ಷೇಪವೆಂದರೆ, ಅದ್ದೊಂದು ತುಸು ಜಟಿಲವಾದ ಪದ್ಧತಿ ಇರಬಹುದು. ನಾವೀಗ ಪ್ರಜಾಪ್ರಭುತ್ವದಲ್ಲಿ ದೊಡ್ಡ ಪ್ರಯೋಗಗಳನ್ನು ಯತ್ನಿಸುತ್ತಿರುವುದರಿಂದ ಯಾವ ಕಷ್ಟವೂ ಬಗೆಹರಿಸಲಾಗದಷ್ಟು ದೊಡ್ಡದು ಎಂದು ಪರಿಗಣಿಸಬಾರದು ಎಂದು ನಾನು ಅಂದುಕೊಂಡಿದ್ದೇನೆ. ನಮ್ಮ ದೇಶದಲ್ಲಿ ಜನಸಂಖ್ಯೆಯ ಶೇಕಡ ೯೦ರಷ್ಟು ಅನಕ್ಷರಸ್ಥರು. ಆದರೂ ಯಾವುದೇ ಹೆಚ್ಚಿನ ಕಷ್ಟಗಳಿಲ್ಲದೆ ಚುನಾವಣೆಗಳನ್ನು ನಡೆಸಲಾಗುತ್ತಿದೆ ಮತ್ತು ರಾಜಕೀಯ ಸಂಸ್ಥೆಗಳನ್ನು ನಡೆಸುತ್ತಿದ್ದೇವೆ. ಹಾಗೆಯೇ ಅನುಪಾತೀಯ ಪ್ರಾತಿನಿಧ್ಯ ಪದ್ಧತಿಯ ಜನಸಮೂಹದ ಲಕ್ಷಾಂತರ ಜನರಿಗೆ ಅವಕಾಶ ಕಲ್ಪಿಸಿ ಚೆನ್ನಾಗಿ ಮುಂದುವರಿಯುವುದೆಂದು ನಾನು ಭಾವಿಸುತ್ತೇನೆ.

ಯಾವುದೇ ಕಾರಣಕ್ಕಾಗಿ, ವರ್ಗಾಯಿಸಬಹುದಾದ ಒಂದೇ ಮತ ಪದ್ಧತಿ ಸೂಕ್ತವಲ್ಲ ಎಂದು ಪರಿಗಣಿಸಿದರೆ, ಆಗ ಇನ್ನೂ ಸರಳ ವಿಧಾನವಾಗಿರುವ ವರ್ಗಾಯಿಸಲಾಗದಾದ ಒಂದೇ ಮತದ ಇನ್ನೊಂದು ಪದ್ಧತಿಯನ್ನು, ತರಲು ಯತ್ನಿಸಬಹುದು. ಅದರಂತೆ ಪ್ರತಿಯೊಬ್ಬ ಮತದಾರನೂ, ತುಂಬಬೇಕಾದ ಸ್ಥಾನಗಳ ಸಂಖ್ಯೆ ಏನೇ ಇರಲಿ, ಒಂದು ಮತ ಚಲಾಯಿಸಲು ಮಾತ್ರ ಅರ್ಹನಿರುತ್ತಾನೆ. ಫಲಿತಾಂಶ, ೫೦೦ ಮತದಾರರುಳ್ಳ ಒಂದು ಚುನಾವಣಾ ಕ್ಷೇತ್ರದಲ್ಲಿ ಕೇವಲ ೫೦೦ ಮತಗಳಿಗೆ ಮತ ಹಾಕಲಾಗುತ್ತದೆ ಮತ್ತು ಹೆಚ್ಚಿಗೆ ಇರುವುದಿಲ್ಲ. ಈ ವಿಧಾನ ಅಷ್ಟೇನೂ ಜಟಿಲವಾಗಿಲ್ಲ ಹೆಚ್ಚು ಸರಳವಾಗಿದೆ ಮತ್ತು ನಮ್ಮ ದೇಶದ ಸಂದರ್ಭಗಳಿಗೆ ಸೂಕ್ತವಿದೆ. ಅದು ಘಟಕ ಮತಪದ್ಧತಿಯಲ್ಲಿನ ಎಲ್ಲ ಲೋಪಗಳನ್ನು ಮತ್ತು ದೋಷಗಳನ್ನು ತಪ್ಪಿಸುತ್ತದೆ. ಸಾಧ್ಯವಾದಷ್ಟು ನಮ್ಮ ಭಾಷಣಗಳು ಕಡಿಮೆ ಇರಬೇಕು ಎಂಬ ಸಲಹೆಯ ದೃಷ್ಟಿಯಿಂದ ನಾನು ಸದನದ ಹೆಚ್ಚು ವೇಳೆ ತೆಗೆದುಕೊಳ್ಳುವುದಿಲ್ಲ. ಆದುದರಿಂದ ನಮ್ಮ ಶಾಸನಸಭೆಗಳು ನಿಜವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅನುಸಾರ ಕಾರ್ಯಮಾಡಲು ಮತ್ತು ದೇಶದಲ್ಲಿನ ಎಲ್ಲ ಪ್ರಮುಖ ಜನರಿಗೆ ಮತ್ತು ಹಿತಾಸಕ್ತಿಗಳಿಗೆ ಪ್ರಾತಿನಿಧ್ಯ ನೀಡಲು, ನಾನು ನನ್ನ ಪ್ರಸ್ತಾವವನ್ನು ಸದನವನ್ನು ದಯವಿಟ್ಟು ಅಂಗೀಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಅಜಿತ್ ಪ್ರಸಾದ್ ಜೈನ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯರೆ, ಕಳೆದ ಎರಡು ಅಥವಾ ಮೂರು ದಿನಗಳಲ್ಲಿ ಮಂಡಿಸಲಾದ ಬಹುತೇಕ ನಿರ್ಣಯಗಳ ಇಂಗಿತ, ಜಂಟಿ ಚುನಾವಣೆಯಲ್ಲಿ ಕೆಲವು ಬದಲಾವಣೆಗಳನ್ನು ನೆರವೇರಿಸಬೇಕೆಂಬುದಾಗಿದೆ (ಅಂದರೆ ಪರಿಗಣನೆಗೆ ಈ ಸಮಯದಲ್ಲಿ ಸದನದ ಮುಂದಿರುವ ಜಂಟಿ ಮತದಾರರ ಸಮುದಾಯಗಳ ವ್ಯವಸ್ಥೆ).

ಪ್ರಸಕ್ತ ನಿರ್ಣಯದ ಅರ್ಥವೂ ಕೂಡಾ ಅದೇ ಆಗಿದೆ. ಚುನಾವಣೆಗಳಲ್ಲಿ ವರ್ಗಾಯಿಸಬಹುದಾದ ಒಂದೇ ಮತದಿಂದ, ಸಣ್ಣ ಸಮೂಹಗಳು ತಮ್ಮ ಚುನಾಯಿತ ಪ್ರತಿನಿಧಿಗಳನ್ನು ಕಳುಹಿಸಲು ಅಧಿಕಾರ ಗಳಿಸುತ್ತವೆ. ಹಿಂದಿನ ಅನುಭವವು, ವರ್ಗಾಯಿಸಬಹುದಾದ ಒಂದೇ ಮತದಿಂದ, ಅನುಪಾತ ಪ್ರಮಾಣ ಪ್ರಾತಿನಿಧ್ಯ ವ್ಯವಸ್ಥೆಯನ್ನು ಯಾವಾಗಲಾದರೂ ಅಳವಡಿಸಿದರೆ, ಕೆಲವೇ ವ್ಯಕ್ತಿಗಳು ಕೂಡ ತಮ್ಮ ಪ್ರತಿನಿಧಿಗಳನ್ನು

ಕಳುಹಿಸಬಹುದು ಎಂದು ತೋರಿಸಿದೆ. ಎಲ್ಲೆಲ್ಲಿ ಮುಸ್ಲಿಮರು ಅಥವಾ ಅನುಸೂಚಿತ ಜಾತಿಗಳ ಅಥವಾ ಇತರ ಸಣ್ಣ ಅಲ್ಪಸಂಖ್ಯಾತರ ಸದಸ್ಯರು ಇರುತ್ತಾರೆಯೋ, ಅವರು ಈ ಪದ್ಧತಿಯಡಿ ತಮ್ಮ ಮತಗಳ ಮೂಲಕವೇ ತಮ್ಮ ಪ್ರತಿನಿಧಿಗಳನ್ನು ಆರಿಸಲು ಅಧಿಕಾರ ಹೊಂದಬಹುದು. ಪ್ರತಿಯಾಗಿ, ಜಂಟಿ ಚುನಾವಣೆಯ ಪದ್ಧತಿಯು ಒಂದು ಪ್ರಜಾಪ್ರಭುತ್ವ ಪದ್ಧತಿ. ಅದರ ಮಹತ್ತ್ವ, ಒಬ್ಬ ಅಭ್ಯರ್ಥಿಯು ಚುನಾವಣೆಯಲ್ಲಿ ಸಾಧ್ಯವಿರುವ ಅತ್ಯಂತ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ನೆರವಾಗುವುದೇ ಆಗಿದೆ. ಹಾಗಾಗಿ ಯಾರಾದರೂ ಅಭ್ಯರ್ಥಿಯು ಒಬ್ಬ ಮುಸ್ಲಿಮ್ ಇದ್ದರೆ, ಆಗ ಆತನ ಚುನಾವಣೆಯಲ್ಲಿ ಹಿಂದೂಗಳು ಮತ್ತು ಮುಸ್ಲಿಮರಿಬ್ಬರೂ ಭಾಗವಹಿಸಲು ಸಮರ್ಥರಿರಬಹುದು. ಮತ್ತು ಆತ ಒಬ್ಬ ಹಿಂದೂ ಆದರೆ, ಆಗಲೂ ಹಿಂದೂಗಳು ಮತ್ತು ಮುಸ್ಲಿಮರಿಬ್ಬರೂ ಅದರಲ್ಲಿ ಪಾಲ್ಗೊಳ್ಳಲು ಸಮರ್ಥರಿರಬಹುದು. ಆದರೆ ವರ್ಗಾಯಿಸಬಹುದಾದ ಒಂದೇ ಮತದಿಂದ ಅನುಪಾತೀಯ ಪ್ರಾತಿನಿಧ್ಯ ವಿಫಲವಾಗುತ್ತಿದೆ. ಏಕೆಂದರೆ, ಕೆಲವು ಹಿಂದೂಗಳು ಮತ್ತು ಮುಸ್ಲಿಮರು ಪ್ರತ್ಯೇಕವಾಗಿ ತಮ್ಮ ಪ್ರತಿನಿಧಿಗಳನ್ನು ಚುನಾಯಿಸಬಹುದು. ಹಾಗಾಗಿ ಜಂಟಿ ಚುನಾವಣೆಯ ಉದ್ದೇಶವೇ ಸೋಲುತ್ತದೆ.

ಈ ತಿದ್ದುಪಡಿಯ ಎರಡನೇ ಭಾಗ ಅಭ್ಯರ್ಥಿಗಳ ಸಂಖ್ಯೆ ಎಷ್ಟೇ ಇದ್ದರೂ ಒಬ್ಬ ಮತದಾರ ಒಂದು ಮತವನ್ನು ಮಾತ್ರ ಹೊಂದಿರಬೇಕು ಎಂಬಷ್ಟರ ಮಟ್ಟಿಗೆ ಸೂಕ್ತವಾಗಿದೆ. ಹೇಗೆಂದರೆ ಮುಸ್ಲಿಮರು ಅಥವಾ ಅನುಸೂಚಿತ ಜಾತಿಗಳ ಸದಸ್ಯರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಲು ಅರ್ಹರೆಂದೇ ಆಗಿದೆ. ಆದುದರಿಂದ ಈ ತಿದ್ದುಪಡಿಗಳೆರಡರ ಒಟ್ಟಾರೆ ಫಲಿತಾಂಶವೆಂದರೆ, ಪ್ರತ್ಯೇಕ ಚುನಾವಣೆಗಳ ದೋಷಗಳನ್ನು ತೆಗೆಯಲು ಯತ್ನಿಸಿದಾಗ್ಯೂ ಅವು ಒಂದು ವಿಭಿನ್ನ ರೂಪದಲ್ಲಿ ಮತ್ತೆ ತೋರುತ್ತವೆ ಹಾಗೂ ಇದರ ಫಲಿತಾಂಶವು ಅಲ್ಪಸಂಖ್ಯಾತರು ಅಂದರೆ, ಅನುಸೂಚಿತ ಜಾತಿಗಳು ಅಥವಾ ಮುಸ್ಲಿಮರು ಅಥವಾ ಇತರ ಅಲ್ಪಸಂಖ್ಯಾತರು ತಮ್ಮ ಚುನಾವಣೆಗಳಿಗೆ ತಮ್ಮ ಜನರಲ್ಲಿ ಕೋಮುವಾರು ಭಾವನೆಗಳಿಗೆ ಉತ್ತೇಜನ ಮಾಡಿಕೊಳ್ಳಲು ಒಂದು ಅವಕಾಶಪಡೆಯುವರು. ಹಾಗಾಗಿ ಜಂಟಿ ಚುನಾವಣೆಗಳ ಮೂಲಕ ಒಂದು (ಸೂಕ್ತ) ವಾತಾವರಣ ಸೃಷ್ಟಿಸಲು ಕೈಕೊಂಡ ನಿರ್ಧಾರ ಸದ್ಯದ ಭವಿಷ್ಯದಲ್ಲಿ ಕೈಗೂಡುವುದಿಲ್ಲ.

ಆದುದರಿಂದ ಈ ತಿದ್ದುಪಡಿಯು, ದೇಶದಲ್ಲಿ ಪುನಃ ವಿಭಜನೆ ಮತ್ತು ತೊಂದರೆಗಳನ್ನು ಸೃಷ್ಟಿಸುವಂಥದು, ಭಿನ್ನತೆಯ ಹಾಗೂ ಕೋಮುವಾರು ಭಾವನೆಯನ್ನು ಹರಡುವ ಭಯಾನಕ ಸಾಧ್ಯತೆಯುಳ್ಳದ್ದು ಎಂದು ನನಗೆನಿಸುತ್ತಿದೆ. ಈಗಿಷ್ಟೆ ಗೌರವಾನ್ವಿತ ಸದಸ್ಯರು ಮಂಡಿಸಿದ ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಏಕೆಂದರೆ, ಅದು ನಮ್ಮ ಮಾರ್ಗದಲ್ಲಿ ಹಾಗೂ ನಮ್ಮ ಮುಂದೆ ಇರುವ ಕೆಲಸದಲ್ಲಿ ಅಡೆತಡೆಗಳನ್ನು ಸೃಷ್ಟಿಸುತ್ತದೆ.]*

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಈಗ ನಾನೇನೂ ಹೇಳಬೇಕಿಲ್ಲವೆಂದು ನನಗನಿಸುತ್ತದೆ. ಶ್ರೀ ಕೆ. ಸಂತಾನಮ್ ಅವರು ಮಂಡಿಸಿದ ತಿದ್ದುಪಡಿಯನ್ನು ಸಮ್ಮತಿಸಲು ನಾನು ಸೂಚಿಸುತ್ತೇನೆ. ಮಂಡಿಸಲಾದ ಇನ್ನೊಂದು ತಿದ್ದುಪಡಿ, ನಮ್ಮ ಸ್ಥಿತಿಗಳಿಗೆ ಸೂಕ್ತವಾಗುವುದಿಲ್ಲ. ಏಕೆಂದರೆ, ನಾನು ವಯಸ್ಕರ ಮತದಾನ ಪದ್ಧತಿಯಿಂದ ಚುನಾವಣೆಗಳನ್ನು ನಡೆಸುವ ಒಂದು ಪ್ರಯೋಗವನ್ನು ಈಗ ಮಾಡಹೊರಟಿರುತ್ತೇನೆ. ಅದು ಮತದಾರರ ಪಟ್ಟಿಗಳ ಮೇಲೆ ಲಕ್ಷಾಂತರ ಮುಗ್ಧ ಮತದಾರರನ್ನು ತರುತ್ತಿದೆ. ಸಂದರ್ಭ ಅದಾಗಿರುವುದರಿಂದ ಸಲಹೆ ಮಾಡಲಾಗಿರುವ ಜಟಿಲ ವ್ಯವಸ್ಥೆಯು ನಮಗೆ ಸಂಪೂರ್ಣ ಸೂಕ್ತವಲ್ಲ. ಆದುದರಿಂದ ನಾನು ಅದನ್ನು ಒಪ್ಪಲು ಸೂಚಿಸುವುದಿಲ್ಲ. ನಾನದನ್ನು ವಿರೋಧಿಸುತ್ತೇನೆ ಹಾಗೂ ಕಂಡಿಕೆಯನ್ನು ಅಂಗೀಕರಿಸಬೇಕೆಂದು ಇದನ್ನು ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಸಮ್ಮತಿಸಲಾಗಿರುವ ಶ್ರೀ ಸಂತಾನಮ್ ಅವರ ತಿದ್ದುಪಡಿ ಇದಾಗಿದೆ:

"ಮತದಾನ ವಿತರಣೀಯ ಇರತಕ್ಕದ್ದು. ಅಂದರೆ ಪ್ರತಿಯೊಬ್ಬ ಮತದಾರನೂ ಸದಸ್ಯರಿರುವಷ್ಟು ಮತಗಳನ್ನು ಹೊಂದಿರುತ್ತಾನೆ ಮತ್ತು ಅವನು ಒಬ್ಬ ಅಭ್ಯರ್ಥಿಗೆ ಕೇವಲ ಒಂದೇ ಮತ ಕೊಡಬೇಕು."

ನಾನದನ್ನು ತೆಗೆದುಕೊಳ್ಳುತ್ತೇನೆ, ಅದು ಯಾವುದರ ಬದಲಿಯಾಗಿದೆ ಎಂದರೆ....

**ಶ್ರೀ ಕೆ. ಸಂತಾನಮ್ :** ಸಂಚಿತ ಮತದಾನ ಕುರಿತ ಅನಂತರದ ಭಾಗದ ಬದಲಿಗಿದೆ.

**ಮಾನ್ಯ ಸಭಾಧ್ಯಕ್ಷರು :** ತಿದ್ದುಪಡಿಯಾದ ಕಂಡಿಕೆ ೭ಕ್ಕೆ ಈಗ ಮತ ಹಾಕಬೇಕು.

ಮುಂದಿಟ್ಟಿರುವ ವಿಷಯ :

"ಅನೇಕ ಚುನಾವಣಾ ಕ್ಷೇತ್ರಗಳಿರಬಹುದು. ಆದರೆ ಮತದಾನ ವಿತರಣೀಯವಾಗಿರತಕ್ಕದ್ದು. ಅಂದರೆ ಪ್ರತಿಯೊಬ್ಬ ಮತದಾರನೂ ಸದಸ್ಯರೆಷ್ಟು ಇರುವರೋ ಅಷ್ಟೇ. ಮತಗಳನ್ನು ಹೊಂದಿರುತ್ತಾನೆ ಮತ್ತು ಅವನು ಒಬ್ಬ ಅಭ್ಯರ್ಥಿಗೆ ಒಂದೇ ಮತ ಹಾಕಬೇಕು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಖಂಡ ೮

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಈ ವಿಷಯ ಸಚಿವಸಂಪುಟಗಳಲ್ಲಿ ಪ್ರಾತಿನಿಧ್ಯ ಕುರಿತದ್ದಾಗಿದೆ. ಅದನ್ನು ನಾನು ಮಂಡಿಸುತ್ತೇನೆ.

"೮. ಅಲ್ಪಸಂಖ್ಯಾತರಿಗೆ ಮೀಸಲಾತಿ ಇಲ್ಲ-(ಎ) ಸಚಿವಸಂಪುಟಗಳಲ್ಲಿ ಅಲ್ಪಸಂಖ್ಯಾತರಿಗೆ ಸ್ಥಾನಗಳ ಶಾಸನಬದ್ಧ ಮೀಸಲಾತಿ ಇರುವುದಿಲ್ಲ. ಆದರೆ ೧೯೩೫ರ ಭಾರತ ಸರ್ಕಾರದ ಅಧಿನಿಯಮದಡಿ ರಾಜ್ಯಪಾಲರುಗಳಿಗೆ ಕೊಡಲಾದ ಸೂಚನಾಪತ್ರದ ಕಂಡಿಕೆ ೮ರಲ್ಲಿಯಂತೆ ಒಂದು ಒಪ್ಪಂದವನ್ನು ಸಂವಿಧಾನದ ಪರಿಶಿಷ್ಟವೊಂದರಲ್ಲಿ ಒದಗಿಸತಕ್ಕದ್ದು."

ಇದನ್ನು ಎಲ್ಲ ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತ ಸಮುದಾಯಗಳ ಪ್ರತಿನಿಧಿಗಳ ಸಲಹಾ ಸಮಿತಿಯಲ್ಲಿ ಸರ್ವಾನುಮತದಿಂದ ಒಪ್ಪಿರುವರು. ಅದನ್ನು ಸದನವು ಸಮ್ಮತಿಸುತ್ತದೆ ಎಂದು ನಾನು ಆಶಿಸುತ್ತೇನೆ. ಇದು ಯಥಾರ್ಥವಾದ, ೧೯೩೫ರ ಭಾರತ ಸರ್ಕಾರದ ಅಧಿನಿಯಮದಲ್ಲಿನ ಪ್ರಸಕ್ತ ನಿಬಂಧನೆಯ ಒಂದು ಪ್ರತಿ ಆಗಿದೆ.

(ಶ್ರೀಯುತರುಗಳಾದ ತಾಜಮಲ್ ಹುಸೇನ್, ಎಸ್. ನಾಗಪ್ಪ ಮತ್ತು ವಿ.ಐ. ಮುನಿಸ್ವಾಮಿ ಪಿಳ್ಳೈ, ರವರು ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ)

**ಶ್ರೀ ಡಿ.ಎಚ್. ಚಂದ್ರಶೇಖರಯ್ಯ :** ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸಲು ಇಷ್ಟ ಪಟ್ಟಿರುವ ತಿದ್ದುಪಡಿ ಕೆಳಗಿನಂತಿದೆ:

"೧೯೩೫ರ ಭಾರತ ಸರ್ಕಾರದ ಅಧಿನಿಯಮದಡಿಯಲ್ಲಿ ಪ್ರಾಂತ್ಯಗಳ ರಾಜ್ಯಪಾಲರಿಗೆ ನೀಡಿರುವ ಸೂಚನಾಪತ್ರದ ಕಂಡಿಕೆ ೮ ಮತ್ತು ಇತರರ ಪೈಕಿ ಸಚಿವರ ಪರಿಷತ್ತಿಗೆ ಆಯ್ಕೆಯಾಗಲಿರುವ, ಅಂಗೀಕರಿಸುವ ರಾಜ್ಯಗಳ ಪ್ರತಿನಿಧಿಗಳಿಗೆ ಒದಗಿಸಲು ಅನುಸರಿಸಲು ಪ್ರಸ್ತಾವಿಸಿದ್ದನ್ನು ಈಗ ತಿದ್ದುಪಡಿ ಮಾಡಬೇಕು."

ಕೋಮುವಾರು ಅಲ್ಪಸಂಖ್ಯಾತರ ಸಂಬಂಧವಾಗಿ ಸೂಚನಾ ಪತ್ರದ ಕಂಡಿಕೆ ೭ರಲ್ಲಿ ವ್ಯಕ್ತವಾಗಿರುವ ಒಪ್ಪಂದವನ್ನು ಅನುಸರಿಸಲು ಪ್ರಸ್ತಾವಿಸಿದೆ. ಇನ್ನೊಂದು ಸಂದರ್ಭದಲ್ಲಿ ನಾನು ಹೇಳಿದಂತೆ, ನಾನು ಕೋಮುವಾರು ಅಥವಾ ಧಾರ್ಮಿಕ ಸ್ವರೂಪದ ಅಲ್ಪಸಂಖ್ಯಾತರನ್ನು ಮಾತ್ರ ನನ್ನ ದೃಷ್ಟಿಯಲ್ಲಿಟ್ಟುಕೊಂಡಿಲ್ಲ; ಆದರೆ ಇತರ ವಿಚಾರಗಳನ್ನು ಆಧರಿಸಿದ ಅಲ್ಪಸಂಖ್ಯಾತರನ್ನು ಕೂಡ ಗಮನಿಸಲಾಗಿದೆ.

**ಶ್ರೀ ಕೆ.ಎಂ. ಮುನ್ಷಿ :** ನಾನೊಂದು ಕ್ರಿಯಾಲೋಪ ಪ್ರಶ್ನೆಯನ್ನು ಎತ್ತಿದ್ದೇನೆ. ಇದು ಒಂದು ಅಲ್ಪಸಂಖ್ಯಾತರ ಸಮಿತಿಯ ವರದಿ ಮತ್ತು ನಾವು ಅಲ್ಪಸಂಖ್ಯಾತರೊಂದಿಗೆ ಮಾತ್ರ ವ್ಯವಹರಿಸುತ್ತಿದ್ದೇವೆ ಮತ್ತು ರಾಜ್ಯಗಳಲ್ಲ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ರಾಜ್ಯಗಳು ಬಹುಸಂಖ್ಯೆಯಲ್ಲಿವೆ. ೫೦೦ ರಾಜ್ಯಗಳಿವೆ. ಆದರೂ ನಾವು ಒಂದೇ ಒಂದು ರಾಷ್ಟ್ರ!

**ಶ್ರೀ ಡಿ.ಎಸ್. ಚಂದ್ರಶೇಖರಯ್ಯ :** ಕ್ರಿಯಾಲೋಪದ ವಿಚಾರವಾಗಿ ನಾನೊಂದು ಮಾತು ಹೇಳಲೇ? ಅಲ್ಪಸಂಖ್ಯಾತರನ್ನು ಕುರಿತ ಸಮಿತಿಯ ವರದಿಯಲ್ಲಿ ಎಷ್ಟು ಬಗೆಯ ಅಲ್ಪಸಂಖ್ಯಾತರನ್ನು ಕುರಿತು ಚರ್ಚಿಸಲಾಗಿದೆ ಎಂದು ಹೇಳಿಲ್ಲ. ಅದು ಯಾವುದೇ ಬಗೆಯ ಅಲ್ಪಸಂಖ್ಯಾತರನ್ನು ಉಲ್ಲೇಖಿಸಬಹುದು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ನೀವು ಬಹುಸಂಖ್ಯಾತರಾಗಿದ್ದೀರಿ.

**ಮಾನ್ಯ ಸಭಾಧ್ಯಕ್ಷರು :** ವಾಸ್ತವವಾಗಿ ನೀವು, ರಾಜ್ಯಗಳನ್ನು ಒಂದು ಅಲ್ಪಸಂಖ್ಯಾತ ಆಗಿ ತರಲಾಗುವುದಿಲ್ಲ. ಅಲ್ಪಸಂಖ್ಯಾತರು ಸಾಧಾರಣವಾಗಿ ಕೋಮುವಾರು ಅಲ್ಪಸಂಖ್ಯಾತರಿಗೆ ಅಥವಾ ಸಾಂಸ್ಕೃತಿಕ ಅಲ್ಪಸಂಖ್ಯಾತರಿಗೆ ಅಥವಾ ಜನಾಂಗೀಯ ಅಲ್ಪಸಂಖ್ಯಾತರಿಗೆ ಉಲ್ಲೇಖವಾಗುತ್ತಾರೆ.

**ಶ್ರೀ ಡಿ.ಎಚ್. ಚಂದ್ರಶೇಖರಯ್ಯ :** ಈ ವರದಿಯಲ್ಲಿ ಕೋಮುವಾರು ಅಲ್ಪಸಂಖ್ಯಾತರನ್ನು ಮಾತ್ರ ಉಲ್ಲೇಖಮಾಡಿದರೆ ಆಗ ನಾನು ಹೇಳುವುದಕ್ಕೆ ಹೆಚ್ಚೇನೂ ಇಲ್ಲ.

**ಮಾನ್ಯ ಸಭಾಧ್ಯಕ್ಷರು :** ಇಡೀ ವಿಷಯವು ಅಲ್ಪಸಂಖ್ಯಾತರ ಬಗೆಗೇ ಇದೆ ಮತ್ತು ಇದನ್ನು ನೀವು ಅನುಸೂಚಿಯಲ್ಲಿ ಕಾಣುವಿರಿ. ವರದಿಯಲ್ಲಿ ಉಲ್ಲೇಖಿಸಿರುವ ಕೋಮುವಾರು ಅಲ್ಪಸಂಖ್ಯಾತರನ್ನು ಹೊರತು ಪಡಿಸಿ, ಇತರ ಅಲ್ಪಸಂಖ್ಯಾತರ ಯಾವ ಪ್ರಶ್ನೆಯೂ ಇಲ್ಲ.

**ಮೌಲಾನಾ ಹಸ್ರತ್ ಮೋಹಾನಿ :** ನೀವು ನಿಮ್ಮ ಜನಸಂಖ್ಯಾನುಪಾತ ಆಲೋಚಿಸುತ್ತಿದ್ದೀರಿ. ಇದರರ್ಥ ನಾವು, ಸಮುದಾಯಗಳು ಮತ್ತು ರಾಷ್ಟ್ರಗಳ ಅರ್ಥದಲ್ಲಿ ಆಲೋಚಿಸುತ್ತಿದ್ದೇವೆ ಎಂದು. ತಾವು ಯಾವುದೇ ರಾಜಕೀಯ ಪಕ್ಷ ಉಲ್ಲೇಖಿಸುವುದಿಲ್ಲವೆ? ಆದುದರಿಂದ, ಈ ಇಡೀ ಅಲ್ಪಸಂಖ್ಯಾತರ ವರದಿಯು ಬಹಳ ಮೂಲಭೂತವಾಗಿ ತಪ್ಪು ತತ್ತ್ವವನ್ನಾಧರಿಸಿದೆ ಎಂದು ನಾನು ಆಕ್ಷೇಪಿಸುತ್ತೇನೆ. ಅದು ರಾಜಕೀಯ ಪಕ್ಷಗಳನ್ನು ಉಲ್ಲೇಖಿಸಬೇಕು ಮತ್ತು ಮತ ಆಧಾರದ ಪಕ್ಷಗಳಿಗಲ್ಲ. ಇಡೀ ವಿಷಯವೇ ಅಸಂಗತವಾಗಿದೆ. ನೀವು ನಿಮ್ಮ ವೇಳೆ ಮತ್ತು ಶಕ್ತಿಯನ್ನು ಈ ಎಲ್ಲ ತಿದ್ದುಪಡಿಗಳನ್ನು ಅಂಗೀಕರಿಸುವಲ್ಲಿ ವ್ಯರ್ಥಮಾಡುತ್ತಿದ್ದೀರಿ. ನೀವು ಸದನಕ್ಕೆ ಈ ಅಂತಿಮ ವರದಿಯನ್ನು ಸಭೆಯ ಮುಂದಿಟ್ಟಾಗ, ನಾನು ಈ ಆಕ್ಷೇಪ ಎತ್ತುತ್ತೇನೆ. ಮಾನ್ಯರೆ, ಇಡೀ ವಿಷಯ ಅಸಂಗತ, ನಿರರ್ಥಕ ಮತ್ತು ಭಾರೀ ವಂಚನೆ ಎಂದು ನಾನು ಹೇಳುತ್ತೇನೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ.ಪಟೇಲ್ :** ಈ ಖಂಡಕ್ಕೆ ಯಾವ ತಿದ್ದುಪಡಿಯೂ ಇಲ್ಲ ಮತ್ತು ನಾನು ಶ್ರೀ ಹಸ್ರತ್ ಮೋಹಾನಿಯವರು ಹೇಳಿದ್ದನ್ನು ಅನುಸರಿಸುವುದಿಲ್ಲ. ಆದುದರಿಂದ ನಾನು ಉತ್ತರಿಸಲು ಉದ್ದೇಶಿಸಿಲ್ಲ.

**ಶ್ರೀ ಎಮ್.ಎಸ್. ಅನೆ** (ದಕ್ಷಿಣ : ರಾಜ್ಯಗಳು) : ಮಾನ್ಯರೆ, ನಾನು ಗೌರವಾನ್ವಿತ ಸದಸ್ಯರು "ವಂಚನೆ" ಎಂಬ ಶಬ್ದವನ್ನು ಹಿಂತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೋರುತ್ತೇನೆ. ಇದು ಸದನಕ್ಕೆ ಒಂದು ಅವಮರ್ಯಾದೆ. ಇದು ಅಸಂಸದೀಯ.

**ಮಾನ್ಯ ಸಭಾಧ್ಯಕ್ಷರು :** ನೀವು "ಭಾರೀ ವಂಚನೆ" ಎಂಬ ಶಬ್ದಗಳನ್ನು ಬಳಸಿದಿರಾ?

**ಮೌಲಾನಾ ಹಸ್ರತ್ ಮೋಹಾನಿ :** ಹೌದು, ನಾನು ಇದು ಒಂದು ಭಾರಿ ವಂಚನೆ ಎಂದು ಹೇಳಿದೆ.

**ಮಾನ್ಯ ಸಭಾಧ್ಯಕ್ಷರು :** ನೀವು ಅದನ್ನು ಹಿಂತೆಗೆದುಕೊಳ್ಳಿ. ನಾನು ಖಂಡ ೮ನ್ನು ಮತಕ್ಕೆ ಹಾಕುತ್ತೇನೆ. ಖಂಡ ೮ನ್ನು ಅಂಗೀಕರಿಸಲಾಯಿತು.

## ಖಂಡ ೯

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :**

"೯. ಎಲ್ಲ ಅಲ್ಪಸಂಖ್ಯಾತರರಿಗೆ ಸೂಕ್ತ ಪಾಲು ಭರವಸೆ ನೀಡುವ ಅಖಿಲ ಭಾರತ ಪ್ರಾಂತೀಯ ಸೇವೆಗಳಲ್ಲಿ ಮತ್ತು

ಪ್ರಾಂತೀಯ ಸೇವೆಗಳಲ್ಲಿ ಆಡಳಿತದ ದಕ್ಷತೆಯ ಪರಿಗಣಿಸಿ ಈ ಸೇವೆಗಳಿಗೆ ನೇಮಕಾತಿಗಳು ಮಾಡುವಲ್ಲಿ ಎಲ್ಲ ಅಲ್ಪಸಂಖ್ಯಾತರ ಕೋರಿಕೆಗಳನ್ನು ಸಮಂಜಸವಾಗಿ ದೃಷ್ಟಿಯಲ್ಲಿಟ್ಟುಕೊಳ್ಳತಕ್ಕದ್ದು."

ಈ ಖಂಡವನ್ನು ಸೇವೆಗಳಲ್ಲಿ ಅಲ್ಪಸಂಖ್ಯಾತರಿಗೆ ಸೂಕ್ತ ಪ್ರಾತಿನಿಧ್ಯ ದೊರತಿದೆಯೇ ಎಂಬುದನ್ನು ಕಂಡುಕೊಳ್ಳುವುದಾಗಲಿ ಮತ್ತು ಆಡಳಿತದಲ್ಲಿ ದಕ್ಷತೆಗೆ ಬಾಧಕವಾಗದಂತೆ ನೋಡಿಕೊಳ್ಳುವುದಕ್ಕಾಗಿ ರೂಪಿಸಲಾಗಿದೆ. ಆ ಅಂಶವನ್ನು ಗಮನದಲ್ಲಿಟ್ಟುಕೊಂಡು, ರಾಜ್ಯವು ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ನೀಡತಕ್ಕದೆಂಬುದನ್ನು ಕೂಡ ಗಮನಿಸಲಾಗಿದೆ. ನಾನು ಈ ಪ್ರತಿಪಾದನೆಯನ್ನು ಸದನದ ಒಪ್ಪಿಗೆಗೆ ಮಂಡಿಸುತ್ತೇನೆ.

(ಶ್ರೀ ತಾಜಮಲ್ ಹುಸೇನ್ ತಮ್ಮ ತಿದ್ದುಪಡಿ ಮಂಡಿಸಲಿಲ್ಲ.)

**ಶ್ರೀ ಮಹಾವೀರ್ ತ್ಯಾಗಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) ಮಾನ್ಯರೆ, ತಿದ್ದುಪಡಿಯು ತುಂಬ ಸರಳವೂ ಮತ್ತು ಹಾನಿಕರವಲ್ಲದ್ದೂ ಆಗಿದೆ. ವಾಕ್ಯದ ಆರಂಭದಲ್ಲಿ ಇರುವ "ಭರವಸೆ" ಎಂಬ ಶಬ್ದವನ್ನು ಕೈಬಿಡಲು ಮಾತ್ರ ನಾನು ಸದನವನ್ನು ಕೇಳಿಕೊಳ್ಳುತ್ತಿದ್ದೇನೆ. ಅದು, ಎಲ್ಲ ಅಲ್ಪಸಂಖ್ಯಾತರಿಗೂ ಖಾತರಿ ಕೊಡುತ್ತದೆ.

**ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಕ್ರಿಯಾಲೋಪದ ವಿಚಾರವೊಂದು ನಾನು ಹೇಳುತ್ತಿದ್ದೇನೆ. ಮಾನ್ಯರೆ, ಈ ತಿದ್ದುಪಡಿಯು ಅಂಚಿನಲ್ಲಿರುವ ಟಿಪ್ಪಣಿಗೆ ಮಾತ್ರ ಸಂಬಂಧಿಸುತ್ತದೆ. ನಾವು ಸಾಮಾನ್ಯವಾಗಿ ಅಂಚಿನ ಟಿಪ್ಪಣಿಗಳಿಗೆ ತಿದ್ದುಪಡಿಗಳನ್ನು ಪ್ರಸ್ತಾವಿಸುವುದಿಲ್ಲ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಈ ತಿದ್ದುಪಡಿಯು ಸಂಬಂಧಪಟ್ಟ ವಿಷಯಕ್ಕೆ ಸಂಬಂಧಿಸಿಲ್ಲ.

**ಶ್ರೀ ಮಹಾವೀರ್ ತ್ಯಾಗಿ** : ಶಬ್ದ ಆಕ್ಷೇಪಣೀಯವಾಗಿದೆ. ಏಕೆಂದರೆ, ವರದಿಯ ಕಂಡಿಕೆ ೧೪ರಲ್ಲಿ "ನಮ್ಮ ಜನಸಂಖ್ಯೆಗೆ ಅನುಪಾತ ಪ್ರಮಾಣದಲ್ಲಿ ಅಲ್ಪಸಂಖ್ಯಾತ ಸಮುದಾಯಗಳಿಗೆ ಸಾರ್ವಜನಿಕ ಸೇವೆಗಳಲ್ಲಿ ಪ್ರಾತಿನಿಧ್ಯಕ್ಕೆ ಸಾಂವಿಧಾನಿಕ ಭರವಸೆ ಇರಬೇಕು ಎಂಬ ಒಂದು ಪ್ರಸ್ತಾವವು ನಮಗೆ ಬಂದಿದೆ ಎಂದು ಹೇಳಿದೆ–ಅಂತಹ ಒಂದು ಖಾತರಿ ಇರುವ ಯಾವುದೇ ಇತರ ಸಂವಿಧಾನದ ಬಗ್ಗೆ ನಮಗೆ ತಿಳಿದಿಲ್ಲ" ಎಂದು ಹೇಳಲಾಗಿದೆ. "ಭರವಸೆ ಇದೆ" ಎಂಬ ಪದ ಅಲ್ಲಿ ಆಕ್ಷೇಪಕ್ಕೊಳಗಾಗಿತ್ತು. ಇದೀಗ ಅದು ಹೇಗೋ ಇಲ್ಲಿ ನುಸುಳಿದೆ. ಈ ಭಾಗದ ಶೀರ್ಷಿಕೆಯಿಂದಲೂ ನಾವು ಈ ಶಬ್ದವನ್ನು ತೆಗೆದಿದ್ದಿದ್ದರೆ ಉತ್ತಮವಿರುತ್ತಿತ್ತು.

**ಮಾನ್ಯ ಸಭಾಧ್ಯಕ್ಷರು** : ಶೀರ್ಷಿಕೆಯಿಂದ ತೆಗೆದುಹಾಕಬಹುದು. "ಎಲ್ಲ ಅಲ್ಪಸಂಖ್ಯಾತರಿಗೂ ಸೂಕ್ತ ಪಾಲು" ಎಂದು ಅಲ್ಲಿ ಓದಬೇಕು ಅದಷ್ಟು ಸಾಕು.

**ಶ್ರೀ ಮಹಾವೀರ್ ತ್ಯಾಗಿ** : ಅಲ್ಲಿ "ಭರವಸೆ" ಎಂಬ ಶಬ್ದವು ಇಲ್ಲದಿದ್ದರೆ ನಾನು ತೃಪ್ತನಾಗುತ್ತೇನೆ.

**ಗೌರವಾನ್ವಿತ ಸರ್ದಾರ ವಲ್ಲಭಭಾಯಿ ಜೆ.ಪಟೇಲ್** : ನನ್ನ ಪ್ರಕಾರ ಅದು ಅಲ್ಲಿ ಇರುವುದಿಲ್ಲ.

**ಶ್ರೀ ಮಹಾವೀರ್ ತ್ಯಾಗಿ** : ಇತರರ ಅಭಿಪ್ರಾಯದ ಪ್ರಕಾರವೂ ಅದು ಇರುವುದಿಲ್ಲ ಎಂದು ನಾನು ಆಶಿಸುತ್ತೇನೆ. ಆದರೂ ನಾನು ನನ್ನ ತಿದ್ದುಪಡಿಗೆ ಒತ್ತಾಯಿಸುವುದಿಲ್ಲ. (ಶ್ರೀಯುತರುಗಳಾದ ಪಿ. ಕಕ್ಕನ್ ಮತ್ತು ಉಪೇಂದ್ರನಾಥ ಬರ್ಮನ್ ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ.)

**ಶ್ರೀ ಚಂದ್ರಿಕಾ ರಾಮ್** (ಬಿಹಾರ್ : ಸಾಮಾನ್ಯ) : ನಾನು ಕೆಲವು ಮಾತುಗಳನ್ನಾಡಲು ಇಷ್ಟಪಡುತ್ತೇನೆ. ನಾನು ಮಂಡಿಸಲು ಇಚ್ಛಿಸುವುದಿಲ್ಲ. ಆದರೆ ನನ್ನ ಹೆಸರಿನಲ್ಲಿರುವ ತಿದ್ದುಪಡಿಯನ್ನು ಹಿಂತೆಗೆದುಕೊಳ್ಳುವಾಗ ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಹಿಂತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ, ನಿಮ್ಮ ತಿದ್ದುಪಡಿ ಮಂಡಿಸಿಲ್ಲ. ಆದರೆ ಏನಾದರೂ ನೀವು ಹೇಳುವುದಿದ್ದರೆ ಯಾವ ಅಭ್ಯಂತರವೂ ಇಲ್ಲ. ಆದರೆ ಸಂಕ್ಷಿಪ್ತವಾಗಿರಲಿ.

**ಶ್ರೀ ಚಂದ್ರಿಕಾ ರಾಮ್** (ಬಿಹಾರ್ : ಸಾಮಾನ್ಯ): *[ಮಾನ್ಯರೆ, ಈ ವಿಷಯದ ಬಗ್ಗೆ ನಿರ್ಧಾರ

ಕೈಗೊಂಡಾಗ ಆರಂಭದಲ್ಲಿ ಸಲಹಾ ಸಮಿತಿಯಲ್ಲಿ ಚರ್ಚೆಯು ಸಮರ್ಪಕವಾಗಿ ನಡೆಯುತ್ತಿತ್ತು. ಪ್ರಾಂತೀಯ ಸೇವೆಗಳಲ್ಲಿ ಮೀಸಲಾತಿ ನಮಗೆ ಕೊಡಬೇಕು ಎಂದು ಭಾವಿಸಿದ್ದೆವು. ನಮ್ಮಲ್ಲೇ ಅವನ್ನು ಚರ್ಚಿಸಿದ ಅನಂತರ ನಮ್ಮ ಗೌರವಾನ್ವಿತ ಸದಸ್ಯರು ಕೆಲವು ಮುಖ್ಯ ವಿಷಯದಡಿಯ ಟಿಪ್ಪಣಿಯನ್ನು ಗಮನಿಸಿ ಸರ್ದಾರ್ ಅವರೊಂದಿಗೆ ಅದನ್ನು ಚರ್ಚಿಸಬಹುದೆಂದು ಸಲಹೆ ಮಾಡಿದರು. ಆದುದರಿಂದ ಪ್ರಾಂತೀಯ ಸೇವೆಗಳಲ್ಲಿ ಈ ಬಗ್ಗೆ ಕೆಲವು ಶಾಸನಬದ್ಧ ಉಪಬಂಧಗಳು ಇರಬೇಕು ಎಂಬುದು ಸೂಕ್ತ ಎಂದು ನಾವು ಆಲೋಚಿಸಿದೆವು. ನಾವು (ಅಂತಹ ಯಾವುದೇ ಉಪಬಂಧ) ಕೇಂದ್ರವನ್ನು ಅಗತ್ಯಪಡಿಸುವುದಿಲ್ಲ. ಏಕೆಂದರೆ, ಕೇಂದ್ರ ಸೇವೆಗಳಲ್ಲಿ ಇಂದಿಗೂ ನಮ್ಮ ಸ್ಥಾನ ತೃಪ್ತಿಕರವಾಗಿದೆ. ಆದರೆ ಪ್ರಾಂತ್ಯಗಳ ಸಂಬಂಧವಾಗಿ ನಮ್ಮ ಹಕ್ಕುಗಳನ್ನು ನಿರ್ಲಕ್ಷಿಸಲಾಗಿದೆ. ಉದಾಹರಣೆಗೆ: ಉತ್ತರಪ್ರದೇಶದಲ್ಲಿ ನಾವು ಶೇಕಡ ೨೫ಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದೇವೆ; ಆದರೆ ವೃತ್ತಪತ್ರಿಕೆಗಳು ಮತ್ತಿತರ ವರದಿಗಳಿಂದ ತಿಳಿದುಬರುವಂತೆ ನಮಗೆ ಮೀಸಲಾಗಿರುವ ಸ್ಥಾನಗಳು ಕೇವಲ ಶೇಕಡ ೧೦ ಎಂದು ತಿಳಿದಿದ್ದೇವೆ. ಪ್ರಾಂತೀಯ ಸೇವೆಗಳಲ್ಲಿ ನಮ್ಮನ್ನು ನಿರ್ಲಕ್ಷಿಸಲಾಗಿದೆ ಮತ್ತು ನಾವು ಸರ್ದಾರ್ ಸಾಹಿಬ್ ಅವರಿಂದ ನೆರವು ಬಯಸುತ್ತೇವೆ. ಏನೆಂದರೆ ಅವರು ಕೇಂದ್ರದ ಪರ ವಾದಿಸುವಂತೆ ಹಾಗೆಯೇ ಪ್ರಾಂತ್ಯಗಳ ಪರವಾಗಿಯೂ ವಾದಿಸುವುದರಿಂದ ಜನಸಂಖ್ಯೆ ಆಧಾರದ ಮೇಲೆ ಸೇವೆಗಳನ್ನು ಒದಗಿಸಬಹುದು. ಏಕೆಂದರೆ, ಶಿಕ್ಷಣದ ಸಲುವಾಗಿ ಹಣ ಖರ್ಚುಮಾಡುವುದೆಂದರೆ, ಸೇವೆಗಳಲ್ಲಿ ನಮಗಿರುವ ನಮ್ಮ ಪಾಲನ್ನು ಬಿಡಬೇಕೆಂದು ಅರ್ಥವಲ್ಲ. ಇದು ಬಹಳ ಮುಖ್ಯವಾದ ವಿಷಯ. ನಾನು ಈ ತಿದ್ದುಪಡಿಯನ್ನು ಮಂಡಿಸಲು ಒತ್ತಾಯಿಸುವುದಿಲ್ಲ. ಆದರೆ ಈ ಖಂಡದ ಮಂಡನೆಕಾರರಾದ ಸರ್ದಾರ್ ಅವರಿಂದ ಪೂರ್ಣ ರಕ್ಷಣೆ ಇದೆ ಮತ್ತು ಈ ಖಂಡದಲ್ಲಿ ಏನಿದೆಯೋ ಅದು ಸಂವಿಧಾನದಲ್ಲಿ ಎಲ್ಲಿಯಾದರೂ ಒಂದು ಸ್ಥಾನ ಕಂಡುಕೊಳ್ಳುತ್ತದೆ ಎಂಬ ಭರವಸೆಯನ್ನು ನಾನು ಅಪೇಕ್ಷಿಸುತ್ತೇನೆ.

ಈ ಕೆಲವು ಮಾತುಗಳೊಂದಿಗೆ ನಾನು ನನ್ನ ತಿದ್ದುಪಡಿ ಹಿಂತೆಗೆದುಕೊಳ್ಳುತ್ತಿದ್ದೇನೆ.]*

**ಮಾನ್ಯ ಸಭಾಧ್ಯಕ್ಷರು :** ಇದಕ್ಕೆ ಯಾವ ತಿದ್ದುಪಡಿಯೂ ಇಲ್ಲ. ಶ್ರೀ ಚಂದ್ರಿಕಾ ರಾಮ್ ಹಾಕಿದ ಪ್ರಶ್ನೆ ಮಾತ್ರ ಇದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಶ್ರೀ ಚಂದ್ರಿಕಾ ರಾಮ್ ಅವರು ಯಾವುದಾದರೂ ಬಗೆಯ ಭರವಸೆ ಮಾತ್ರ ಬಯಸುತ್ತಾರೆ. ಅಲ್ಪಸಂಖ್ಯಾತರ ಸಮಿತಿ ವರದಿ ಅಂಗೀಕಾರವಾದರೆ ಅಲ್ಪಸಂಖ್ಯಾತರಿಗೆ ಪ್ರತಿಯೊಂದೂ ಅನುಕೂಲಕರವಾಗಿ ಇರುತ್ತದೆ ಎಂಬ ಭರವಸೆಯನ್ನಿಷ್ಟೇ ನಾನು ಕೊಡಬಲ್ಲೆ.

**ಮಾನ್ಯ ಸಭಾಧ್ಯಕ್ಷರು :** ನಾನು ಖಂಡ ೯ನ್ನು ಮತಕ್ಕೆ ಹಾಕುತ್ತೇನೆ.

ಖಂಡ ೯ನ್ನು ಅಂಗೀಕರಿಸಲಾಯಿತು.

## ಖಂಡ ೧೦

**ಮಾನ್ಯ ಸಭಾಧ್ಯಕ್ಷರು :** ಈಗ, ನಾವು ಖಂಡ ೧೦ಕ್ಕೆ ಹೋಗೋಣ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಈ ಖಂಡದಲ್ಲಿ ನೀವು ಆಂಗ್ಲೋ ಇಂಡಿಯನ್ ಸಮುದಾಯವು ಅನುಭವಿಸುತ್ತಿರುವ ಕೆಲವು ರಿಯಾಯಿತಿಗಳ ಪರಿಗಣನೆಗೆ ಸಲಹಾ ಸಮಿತಿಯು ಒಂದು ಉಪಸಮಿತಿಯ ನೇಮಕ ಮಾಡಿದುದನ್ನು ನೋಡುವಿರಿ. ಸಮಿತಿ ಹಾಗೂ ಸದಸ್ಯರು ಇಲ್ಲಿ ನಮೂದಾಗಿರುವುದು ಒಂದು ಸರ್ವಾನುಮತದ* ವರದಿಯನ್ನು ಸಲ್ಲಿಸಿದ್ದಾರೆ ಮತ್ತು ನಾನು ಆ ಸಮಿತಿಯ ವರದಿಯ ಬಗ್ಗೆ ತಮ್ಮ ಗಮನ ಸೆಳೆಯುವುದಕ್ಕೆ ಇಚ್ಛಿಸುತ್ತೇನೆ ಮತ್ತು ಆ ಸಮಿತಿಯ ಶಿಫಾರಸುಗಳನ್ನು ಪ್ರಸ್ತಾವವಾಗಿ ಮಂಡಿಸುತ್ತೇನೆ. ಕಂಡಿಕೆ ೨ ಈ ರಿಯಾಯಿತಿಗಳ ಐತಿಹಾಸಿಕ ಹಿನ್ನೆಲೆಯನ್ನು ಕೊಡುವ ಪರಿಚಯ ಭಾಗವಾಗಿದೆ. ಮತ್ತು ಖಂಡ (೧) ವಾಸ್ತವ ಪ್ರಸ್ತಾವ, ಪ್ರಸ್ತಾವವು ಖಂಡ (೧)ರಿಂದ ಆರಂಭವಾಗುತ್ತದೆ...

"(೧) ರೈಲ್ವೆ, ಅಂಚೆ ಮತ್ತು ತಂತಿ ಮತ್ತು ಸುಂಕ ಇಲಾಖೆಗಳಲ್ಲಿ ಆಂಗ್ಲೋ ಇಂಡಿಯನ್ನರ ನೇಮಕಾತಿಯ ಪ್ರಸಕ್ತ ಆಧಾರವು ಒಕ್ಕೂಟ ಸಂವಿಧಾನ ಚಾಲನೆಗೆ ಬಂದ ಅನಂತರದ ಎರಡು ವರ್ಷಗಳ ಕಾಲ ಬದಲಾಗದೆ ಇರತಕ್ಕದ್ದು. ಅನಂತರ ಪ್ರತಿ ಎರಡು ವರ್ಷಗಳ ಅಂತರದಲ್ಲಿ ಮೀಸಲಾತಿ ಖಾಲಿ ಜಾಗಗಳನ್ನು ಪ್ರತಿ ಬಾರಿ ಶೇ. ೧೦ರಷ್ಟು ಕಡಿಮೆ ಮಾಡತಕ್ಕದ್ದು. ಹೇಗೇ ಆಗಲಿ ಇದು ಮೀಸಲಿರಿಸಿದ ನೇಮಕಾತಿಗಳ ನಿಗದಿತ ಪಾಲು ಮೀರಿದ ಪ್ರವರ್ಗಗಳಲ್ಲಿ ಆಂಗ್ಲೋ ಇಂಡಿಯನ್ನರ ನೇಮಕಾತಿಯನ್ನು ಅವರು ಅದನ್ನು ಇತರ ಸಮುದಾಯಗಳೊಂದಿಗೆ ಮುಕ್ತ ಸ್ಪರ್ಧೆಯಲ್ಲಿ ವೈಯಕ್ತಿಕ ಅರ್ಹತೆ ಮೇರೆಗೆ ಪಡೆದುಕೊಳ್ಳಲು ಸಮರ್ಥರಿದ್ದರೆ, ತಡೆಯುವುದಿಲ್ಲ.

(೨) ಒಕ್ಕೂಟ ಸಂವಿಧಾನದ ಕಾರ್ಯಾಚರಣೆಗೆ ಬರುವ ದಿನದಿಂದ ಹತ್ತು ವರ್ಷಗಳ ಅನಂತರ ಎಲ್ಲ ಅಂತಹ ಮೀಸಲಾತಿಗಳು ನಿಲ್ಲುತ್ತವೆ.

(೩) ಈ ಸೇವೆಗಳಲ್ಲಿ ಯಾವುದೇ ಸಮುದಾಯಕ್ಕೆ ಹತ್ತು ವರ್ಷಗಳು ಕಳೆದ ಅನಂತರ ಯಾವ ಮೀಸಲಾತಿಯೂ ಇರುವುದಿಲ್ಲ."

ಇದು ಪ್ರಸ್ತಾವದ ಮೊದಲ ಭಾಗ. ಇನ್ನೊಂದು ಭಾಗ ಶೈಕ್ಷಣಿಕ ಸವಲತ್ತುಗಳನ್ನು ಉಲ್ಲೇಖಿಸುತ್ತದೆ. ನಾನು ಇದನ್ನು ಮೊದಲು ಮಂಡಿಸುತ್ತೇನೆ. ಸಲಹಾ ಸಮಿತಿಯ ಸದಸ್ಯರು ಮತ್ತು ಆಂಗ್ಲೋ ಇಂಡಿಯನ್ ಸಮುದಾಯದ ಸದಸ್ಯರ ನಡುವೆ ಒಂದು ಒಪ್ಪಿದ ಪ್ರತಿಪಾದನೆ ಇದು ಎಂದು ನಾನು ಸದನಕ್ಕೆ ತಿಳಿಸಬಯಸುತ್ತೇನೆ. ಇದನ್ನು ಸಾರ್ವತ್ರಿಕವಾಗಿ ಒಪ್ಪಲಾಗಿದೆ ಮತ್ತು ಈ ಒಪ್ಪಂದವನ್ನು ಈ ಸದನ ಕಾರ್ಯಗತಗೊಳಿಸುತ್ತದೆ ಎಂದು ನಾನು ಆಶಿಸುತ್ತೇನೆ.

***ಅನುಬಂಧ**

**ಮಾನ್ಯ ಸಭಾಧ್ಯಕ್ಷರು :** ಯಾರಾದರೂ ಈ ಕುರಿತು ಏನಾದರೂ ಹೇಳಬಯಸುವಿರಾ?

(ಯಾವ ಸದಸ್ಯರೂ ಮಾತನಾಡಲು ಏಳಲಿಲ್ಲ)

**ಮಾನ್ಯ ಸಭಾಧ್ಯಕ್ಷರು :** ನಾನು ಇದನ್ನು ಮತಕ್ಕೆ ಹಾಕುತ್ತೇನೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ನಾನು ಮಂಡಿಸುತ್ತೇನೆ :

"ಆಂಗ್ಲೋ ಇಂಡಿಯನ್ನರಿಗೆ ವಿಶೇಷ ಶೈಕಣಿಕ ಸೌಲಭ್ಯಗಳು"– ಭಾರತದಲ್ಲಿ ಪ್ರಸ್ತುತ ಸುಮಾರು ೫೦೦ ಆಂಗ್ಲೋ ಇಂಡಿಯನ್ ಶಾಲೆಗಳಿವೆ. ಈ ಶಾಲೆಗಳಿಗೆ ಒಟ್ಟು ಸರ್ಕಾರಿ ಅನುದಾನ ಸುಮಾರು ರೂ.೪೫ ಲಕ್ಷ. ಇದು, ಈ ಶಾಲೆಯೂ ಮಾಡಿದ ಒಟ್ಟು ವೆಚ್ಚದ ಸುಮಾರು ಶೇಕಡ ೨೪ರಷ್ಟು. ಅನುದಾನದಲ್ಲಿ ಇದ್ದಕ್ಕಿದ್ದಂತೆ ಕಡಿತ ಮಾಡಿರುವುದು ಈ ಶಾಲೆಗಳ ಆರ್ಥಿಕ ಸ್ಥಿತಿಯನ್ನು ಗಂಭೀರವಾಗಿ ಅಸ್ತವ್ಯಸ್ತಗೊಳಿಸುತ್ತದೆ; ಮತ್ತು ಇದು ಅವರನ್ನು ಕ್ರಮೇಣ ಇತರ ಅಂಥವೇ ವಿದ್ಯಾಸಂಸ್ಥೆಗಳೊಂದಿಗೆ ಸರಿಸಮನಾಗಿ ಬರುವಂತೆ ಮಾಡಲು ದೇಶದಲ್ಲಿ ಈಗ ಇರುವ ಬದಲಾದ ಸ್ಥಿತಿಗಳಿಗೆ ತಾವೇ ಹೊಂದಿಕೊಳ್ಳಲು ಅವರಿಗೆ ಸಾಕಷ್ಟು ಕಾಲ ಮತ್ತು ಅವಕಾಶಗಳನ್ನು ಕೊಟ್ಟ ಅನಂತರ ಮಾತ್ರ ಸಾಧ್ಯವಾಗಬಹುದು. ಈ ರೀತಿಯಲ್ಲಿ ಈ ಸಂಸ್ಥೆಗಳು ಆಂಗ್ಲೋ ಇಂಡಿಯನ್ ಸಮುದಾಯಕ್ಕೆ ಮಾತ್ರವಲ್ಲದೆ, ಇಡೀ ರಾಷ್ಟ್ರದಲ್ಲಿ ಬೆಳೆಯುತ್ತಿರುವ ಶೈಕ್ಷಣಿಕ ಅಗತ್ಯಗಳನ್ನು ಒದಗಿಸಲು ಒಂದು ಮೌಲಿಕ ಶೈಕ್ಷಣಿಕ ಆಸ್ತಿ ಆಗಬಹುದು ಎಂದೂ ನಾವು ಭಾವಿಸುತ್ತೇವೆ. ಅಂತೆಯೇ ನಾವು ಈ ರೀತಿ ಶಿಫಾರಸು ಮಾಡುತ್ತೇವೆ.

(೧) ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳಿಂದ ಆಂಗ್ಲೋ ಇಂಡಿಯನ್ ಶಿಕ್ಷಣಕ್ಕೆ ಮಾಡಲಾದ ಪ್ರಸಕ್ತ ಅನುದಾನಗಳು ಒಕ್ಕೂಟ ಸಂವಿಧಾನ ಕಾರ್ಯಾಚರಣೆಗೆ ಬಂದ ಮೂರು ವರ್ಷಗಳು ಬದಲಾಗದೆ ಮುಂದುವರಿಯಬೇಕು.

(೨) ಮೊದಲ ಮೂರು ವರ್ಷಗಳು ಮುಗಿದ ಅನಂತರ, ಅನುದಾನಗಳನ್ನು ಶೇಕಡ ೧೦ರಷ್ಟು ಕಡಿಮೆ ಮಾಡಬಹುದು ಮತ್ತು ೬ನೇ ವರ್ಷದ ಅನಂತರ ಮತ್ತು ಶೇಕಡ ೧೦ರಷ್ಟು ಒಂಬತ್ತನೆ ವರ್ಷದ ಅನಂತರ ಪುನಃ ಶೇಕಡ

೧೦ರಷ್ಟು, ೧೦ ವರ್ಷಗಳ ಅವಧಿಯ ಕೊನೆಯಲ್ಲಿ ಆಂಗ್ಲೋ ಇಂಡಿಯನ್ನರಿಗೆ ವಿಶೇಷ ರಿಯಾಯಿತಿಗಳು ನಿಲ್ಲುತ್ತವೆ. (೩) ಈ ೧೦ ವರ್ಷಗಳ ಅವಧಿಯಲ್ಲಿ ಎಲ್ಲ ಅಂತಹ ರಾಜ್ಯ ನೆರವಿನ ಆಂಗ್ಲೋ ಇಂಡಿಯನ್ ಶಾಲೆಗಳಲ್ಲಿ ಖಾಲಿ ಜಾಗಗಳ ಶೇಕಡ ೪೦ರಷ್ಟನ್ನು, ಇತರ ಸಮುದಾಯಗಳ ಸದಸ್ಯರಿಗೆ ದೊರಕಿಸತಕ್ಕದ್ದು. ಈ ವರದಿಯಲ್ಲಿ ಉಪಯೋಗಿಸಿದ ಆಂಗ್ಲೋ ಇಂಡಿಯನ್ ಶಬ್ದ ೧೯೩೫ರ ಗೌರ್ನಮೆಂಟ್ ಆಫ್ ಇಂಡಿಯಾ ಕಾಯಿದೆಯಲ್ಲಿ ಕೊಟ್ಟಿರುವ ಅರ್ಥ ಹೊಂದಿರುತ್ತದೆ."

ಇದು ಸಲಹಾ ಸಮಿತಿಯಿಂದ ಮತ್ತು ಸಲಹಾ ಸಮಿತಿಯಲ್ಲಿ ಆಂಗ್ಲೋ ಇಂಡಿಯನ್ ಪ್ರತಿನಿಧಿಗಳಿಂದ ಸರ್ವಾನುಮತದಿಂದ ಒಪ್ಪಲಾದ ಪ್ರತಿಪಾದನೆ ಕೂಡಾ ಆಗಿದೆ. ಆದುದರಿಂದ, ನಾನು ಈ ಒಪ್ಪಂದವನ್ನು ಸದನ ಕಾರ್ಯಗತಮಾಡುತ್ತದೆ ಎಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಯಾರಾದರೂ ಇದನ್ನು ಕುರಿತು ಏನಾದರೂ ಹೇಳಬಯಸುವಿರಾ?

(ಯಾವ ಸದಸ್ಯರೂ ಮಾತನಾಡಲು ಏಳಲಿಲ್ಲ)

**ಮಾನ್ಯ ಸಭಾಧ್ಯಕ್ಷರು :** ಹಾಗಾದರೆ ನಾನು ಇದನ್ನು ಮತಕ್ಕೆ ಹಾಕುತ್ತೇನೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಖಂಡ ೧೧

**ಮಾನ್ಯ ಸಭಾಧ್ಯಕ್ಷರು :** ಖಂಡ ೧೧

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :** ಖಂಡ ೧೧

"ಅಲ್ಪಸಂಖ್ಯಾತರಿಗೆ ಒದಗಿಸಲಾದ ರಕ್ಷಣೋಪಾಯಗಳನ್ನು ಕುರಿತಂತೆ ಕ್ರಮವಾಗಿ ಕೇಂದ್ರ ಮತ್ತು ಪ್ರಾಂತೀಯ ಶಾಸನಸಭೆಗಳಿಗೆ ವರದಿ ಮಾಡಲು ಕೇಂದ್ರದಲ್ಲಿ ರಾಷ್ಟ್ರಪತಿಗಳು ಮತ್ತು ಪ್ರಾಂತ್ಯಗಳಲ್ಲಿ ರಾಜ್ಯಪಾಲರು ಒಬ್ಬ ಅಧಿಕಾರಿಯನ್ನು ನೇಮಕಮಾಡತಕ್ಕದ್ದು.

ಇದು ಕೇವಲ ಒಂದು ಆಡಳಿತಾತ್ಮಕ ಏರ್ಪಾಟು ಮತ್ತು ನಾನು ಸದನ ಇದನ್ನು ಒಪ್ಪುತ್ತದೆ ಎಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಇದಕ್ಕೆ ಕೆಲವು ತಿದ್ದುಪಡಿಗಳಿವೆ (ಶ್ರೀಯುತರುಗಳಾದ ಮಹಾವೀರ್ ತ್ಯಾಗಿ ಮತ್ತು ತಾಜಮಲ್ ಹುಸೇನ್ ಅವರು ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ)

**ಮಾನ್ಯ ಸಭಾಧ್ಯಕ್ಷರು :** ಇನ್ನಾವುದೇ ತಿದ್ದುಪಡಿ ಇಲ್ಲ. ಯಾರಾದರೂ ಇದನ್ನು ಕುರಿತು ಏನಾದರೂ ಹೇಳಬಯಸುವಿರಾ?

(ಯಾವ ಸದಸ್ಯರೂ ಮಾತನಾಡಲು ಏಳಲಿಲ್ಲ)

**ಮಾನ್ಯ ಸಭಾಧ್ಯಕ್ಷರು :** ನಾನು ಇದನ್ನು ಮತಕ್ಕೆ ಹಾಕುತ್ತೇನೆ.

ಖಂಡ ೧೧ನ್ನು ಅಂಗೀಕರಿಸಲಾಯಿತು.

## ಖಂಡ ೧೨

**ಮಾನ್ಯ ಸಭಾಧ್ಯಕ್ಷರು :** ನಾವು ಖಂಡ ೧೨ಕ್ಕೆ ಹೋಗೋಣ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್ :**

"೧೨. ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಸ್ಥಿತಿಗಳನ್ನು ಅನ್ವೇಷಿಸಲು ಕೇಂದ್ರಕ್ಕೆ ಅಥವಾ ಸಂದರ್ಭಾನುಸಾರ ಘಟಕ ಸರ್ಕಾರಕ್ಕೆ ಶಿಫಾರಸು ಮಾಡಲು ಹಾಗೂ ಅನುದಾನ ನೀಡುವಲ್ಲಿನ ತೊಡಕುಗಳ ಅಧ್ಯಯನಮಾಡಲು ಹಾಗೂ ತೊಡಕುಗಳನ್ನು ತೆಗೆದುಹಾಕುವಲ್ಲಿ ಮತ್ತು ಕೊಡಲೇಬೇಕಾದ ಆರ್ಥಿಕ ಅನುದಾನಗಳಿಗೆ

ಮತ್ತು ಅಂತಹ ಅನುದಾನಗಳಿಗೆ ಷರತ್ತುಗಳನ್ನು ನಿಗದಿಪಡಿಸಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ, ಒಂದು ಶಾಸನಬದ್ಧ ಆಯೋಗವನ್ನು ರಚಿಸತಕ್ಕದ್ದು."

ಇದು ಕೂಡ, ಶೋಷಣೆಗೊಳಗಾದ ಮತ್ತು ಹಿಂದುಳಿದ ವರ್ಗಗಳ ಪ್ರಯೋಜನಕ್ಕಾಗಿ ಇರುವ ಒಂದು ಆಡಳಿತಾತ್ಮಕ ವ್ಯವಸ್ಥೆಯಾಗಿದೆ. ಸದನವು ಇದಕ್ಕೆ ಸಮ್ಮತಿಸುತ್ತದೆ ಎಂದು ನಾನು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಇದಕ್ಕೆ ಕೆಲವು ತಿದ್ದುಪಡಿಗಳಿವೆ.

(ಶ್ರೀಯುತರುಗಳಾದ ತಾಜಮಲ್ ಹುಸೇನ್, ಪಿ. ಕಕ್ಕನ್, ಎಚ್.ವಿ. ಪಾಟಸ್ಕರ್ ಮತ್ತು ವಿ.ಐ. ಮುನಿಸ್ವಾಮಿ ಪಿಳ್ಳೈ ಇವರು ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ)

**ಮಾನ್ಯ ಸಭಾಧ್ಯಕ್ಷರು** : ಇತರ ಯಾವ ತಿದ್ದುಪಡಿಗಳಿಲ್ಲ. ನಾನು ಖಂಡ ೧೨ನ್ನು ಮತಕ್ಕೆ ಹಾಕುತ್ತೇನೆ.

ಖಂಡ ೧೨ನ್ನು ಅಂಗೀಕರಿಸಲಾಯಿತು.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ.ಪಟೇಲ್** : ಮಾನ್ಯರೆ, ಈಗ ಎಲ್ಲ ವಿಷಯಗಳು ಮುಗಿದಿವೆ ಮತ್ತು ಅಂಗೀಕರಿಸಿದ ತಿದ್ದುಪಡಿಗಳಿಂದ, ತಿದ್ದಿದಂತೆ ಮತ್ತು ಸಮ್ಮತಿಸಿದ ನಿರ್ಣಯಗಳಂತೆ ವರದಿಯನ್ನು ಅಂಗೀಕರಿಸಬಹುದು.

**ಮೌಲಾನಾ ಹಸ್ರತ್ ಮೋಹಾನಿ** : ಮಾನ್ಯರೆ, ಇಡೀ ವರದಿ ಬಗೆಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಲು ನನಗೊಂದು ಅವಕಾಶ ನೀಡಬೇಕೆಂದು ನಾನು ವಿನಂತಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಈಗ ನಾವು ಅನುಬಂಧದ ಪ್ರತಿ ಖಂಡವನ್ನೂ ಗಮನಿಸಿದ್ದೇವೆ ಮತ್ತು ವರದಿಯನ್ನು ಸದನದ ನಿರ್ಣಯಗಳ ಪ್ರಕಾರ ಬದಲಾಯಿಸಿದಂತೆ, ಬದಲಾವಣೆಗೊಂಡಿದೆ ಎಂದು ಪ್ರತಿಪಾದಿಸಲಾಗುತ್ತದೆ.

ಈಗ ಪ್ರತಿಪಾದನೆ ಎಂದರೆ, ವರದಿಯನ್ನು ಸಮ್ಮತಿಸಲಾಗಿದೆ ಎಂದು ಇದೆ. ಮತಕ್ಕೆ ಹಾಕುವುದು ಆವಶ್ಯಕವೆ?

**ಶ್ರೀ ಕೆ.ಎಮ್. ಮುನ್ಷಿ** : ಮಾನ್ಯರೆ, ಇದು ಸಂವಿಧಾನ ರಚನಾಸಭೆಯ ಸಲಹಾ ಸಮಿತಿಯ ವರದಿಯಾಗಿದೆ ಮತ್ತು ಸಂವಿಧಾನ ರಚನಾಸಭೆಯೇ ಅಂಗೀಕರಿಸಬೇಕಾದ ಕರಡು ವರದಿಯಲ್ಲ. ಆದುದರಿಂದ ವರದಿಯನ್ನು ತಿದ್ದುಪಡಿ ಮಾಡಲಾಗುವುದಿಲ್ಲ ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ. ಅಂದರೆ ಸಲಹಾ ಸಮಿತಿಯ ಮುಂದೆ ಏನಾದರೂ ಚರ್ಚೆಗೆ ಮಂಡಿಸಬೇಕು ಅಷ್ಟೆ. ತಾಂತ್ರಿಕವಾಗಿ ಏನು ಮಾಡಲಾಗಿದೆಯೋ ಅದನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಸದನವು ವರದಿಯನ್ನು ಪರಿಗಣನೆಗೆ ತೆಗೆದುಕೊಳ್ಳಲು ನಿರ್ಧರಿಸಿ, ವರದಿಯಲ್ಲಿನ ನಿರ್ಣಯಗಳನ್ನು ಮತ್ತು ಅನುಬಂಧದಲ್ಲಿ ಅವು ಒಂದು ಸ್ಥಾನ ಪಡೆದುಕೊಳ್ಳುವುದನ್ನು ಗಮನಿಸಿದೆ. ಆ ನಿರ್ಣಯಗಳನ್ನು ಸದನ ತಿದ್ದುಪಡಿ ಮಾಡಿದೆ. ಆದುದರಿಂದ ನಾನು ಮಾನ್ಯರೆ, ವರದಿ ಮೇಲೆಯೇ ಯಾವ ನಿರ್ಣಯವನ್ನೂ ತೆಗೆದುಕೊಳ್ಳುವ ಅಗತ್ಯವಿಲ್ಲ ಎಂದು ನಿವೇದಿಸಿಕೊಳ್ಳುತ್ತಿದ್ದೇನೆ. ಇದು ಸಲಹಾ ಸಮಿತಿಯ ಒಂದು ವರದಿ ಮತ್ತು ಹಾಗೆಯೇ ಉಳಿಯಬೇಕು. ವರದಿಗೆ ಸಲಹೆ ಮಾಡಲಾದ ಕೆಲವು ತಿದ್ದುಪಡಿಗಳಿದ್ದವು. ಆದರೆ ಅವುಗಳಿಗೆ ಅವಕಾಶವಿಲ್ಲವೆಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ. ಏಕೆಂದರೆ, ವರದಿಯು, ಅದು ಸಂವಿಧಾನ ರಚನಾಸಭೆಯ ವರದಿಯಾಗಿ ವಿಶ್ವಕ್ಕೆ ಅಥವಾ ಒಂದು ಮೂರನೆಯ ಪಕ್ಷಕ್ಕೆ ಹೋಗುವುದಾದರೆ ಮಾತ್ರ ಸಂವಿಧಾನ ರಚನಾಸಭೆಯು ಅಂಗೀಕರಿಸಬಹುದು. ಆದುದರಿಂದ ಮಾನ್ಯರೆ, ನಾನು ಸದನದಿಂದ ತಿದ್ದುಪಡಿಯಾದ ನಿರ್ಣಯಗಳು ವರದಿಗೆ ಸಂಬಂಧಿಸಿ ಮಾಡಬೇಕಾದುದಿಲ್ಲ ಎಂದು ನಿವೇದಿಸುತ್ತಿದ್ದೇನೆ. ಇದು ನನ್ನ ನಿವೇದನೆ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ** : ಸದನವು ವರದಿಯನ್ನು ಪರಿಗಣಿಸಿದೆ ಎನ್ನಲು ತೋರಿಸುವುದಕ್ಕೆ ಏನಿದೆ?

**ಶ್ರೀ ಕೆ.ಎಮ್. ಮುನ್ಷಿ** : ಸದನವು ವರದಿಯನ್ನು ಪರಿಗಣಿಸಿದೆ ಎನ್ನಲು ತೋರಿಸುವುದಕ್ಕೆ ಏನಿದೆ?

ಎಂದು ಶ್ರೀ ಮೈತ್ರ ಹೇಳುತ್ತಾರೆ. ಸದನವು, ವರದಿಯನ್ನು ಪರಿಗಣಿಸಲು, ಔಪಚಾರಿಕವಾಗಿ ಒಂದು ನಿರ್ಣಯವನ್ನು ಅಂಗೀಕರಿಸಿದೆ. ಬಳಿಕ ಅದು ಅನುಬಂಧವನ್ನು ಎತ್ತಿಕೊಂಡಿತು. ಅನುಬಂಧವು ವರದಿಯಲ್ಲಿ ಒಂದು ಸ್ಥಾನ ಕಂಡುಕೊಳ್ಳುವ ಕಾರ್ಯಾಚರಣೆಯ ನಿರ್ಣಯಗಳನ್ನು ಒಳಗೊಂಡಿತ್ತು. ಇವನ್ನು ಬದಲಾಯಿಸಲಾಗಿದೆ. ಅಥವಾ ಸಮ್ಮತಿಸಲಾಗಿದೆ. ಆದರೆ ಸದನದ ಮುಂದೆ ಇಡುವ ಉದ್ದೇಶಕ್ಕಾಗಿ ವರದಿಯಲ್ಲಿ ರೂಪಿಸಲಾದ ಸಲಹಾ ಸಮಿತಿಯ ಪದವಿನ್ಯಾಸಗಳನ್ನು ನಾವು ಬದಲಾಯಿಸಲಾಗದು.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ :** ಕೆಲವು ತಿದ್ದುಪಡಿಗಳು ಮೊದಲಾದವುಗಳೊಂದಿಗೆ ಸದನವು ವರದಿಯನ್ನು ಸಮ್ಮತಿಸಿದೆ ಎಂದು ಹೇಳುವುದಕ್ಕೆ ಏನಾದರೊಂದು ಲಿಖಿತ ದಾಖಲೆ ಇರಬೇಕು.

**ಶ್ರೀ ಕೆ.ಎಮ್. ಮುನ್ಷಿ :** ನಿರ್ಣಯಗಳನ್ನು ಭಾಗಶಃ ಸಮ್ಮತಿಸಲಾಗಿದೆ. ಭಾಗಶಃ ತಿದ್ದುಪಡಿಯಾಗಿವೆ ಮತ್ತು ವರದಿಯನ್ನು ಸದನದ ಮುಂದೆ ಇಡಲಾಗಿದೆ. ಕ್ರಿಯಾಲೋಪ ಕುರಿತು ನಾನು ತಿಳಿಸಿದ ವಿಚಾರವೆಂದರೆ, ವರದಿಗೆ ಹೊಸ ಕಂಡಿಕೆಗಳು ಇರುವಂತಿಲ್ಲ. ಅಥವಾ ಅದರಿಂದ ಏನೊಂದನ್ನು ತೆಗೆಯುವಂತಿಲ್ಲ. ಏಕೆಂದರೆ, ಇದು ಸಗನದ ಒಂದು ವರದಿ. ನಿರ್ಣಯಗಳನ್ನು ಈ ಸದನವು ಸೂಕ್ತವಾಗಿ ಸಮ್ಮತಿಸಿದೆ ಅಥವಾ ಮಾರ್ಪಡಿಸಿದೆ, ವರದಿಯಲ್ಲಿ ಇರುವಂತೆ ಇರತಕ್ಕದ್ದು.

ಮಾನ್ಯರೆ, ಇದು ಒಂದು ಮುಖ್ಯ ಕ್ರಿಯಾಲೋಪದ ವಿಚಾರ. ನಾನು ಒಂದು ಆದೇಶ ಬಯಸುತ್ತೇನೆ. ಏಕೆಂದರೆ, ಈ ಹಿಂದೆ ನಾವು ವರದಿಯನ್ನು ಅಂಗೀಕರಿಸಬೇಕು ಅಥವಾ ಬದಲಾಯಿಸಬೇಕು ಅಥವಾ ಅದಕ್ಕೆ ಕೆಲವು ಕಂಡಿಕೆಗಳನ್ನು ಸೇರಿಸಬೇಕು ಎಂದು ಮಾತನಾಡುತ್ತಿದ್ದೆವು. ಇದೊಂದು ತುಂಬ ತಪ್ಪು ಕ್ರಮ. ಏಕೆಂದರೆ, ಒಂದು ಸಮಿತಿಯ ವರದಿಯನ್ನು ನೀವು ಬದಲಿಸುವಂತಿಲ್ಲ. ಇದು ಒಂದು ವಿಧದ ನ್ಯಾಯಾಲಯ ಮನವಿಯಲ್ಲ. ಇದು ಕೇವಲ ಸದನದ ಮುಂದೆ ಪರಿಗಣಿಸಲು ಇಡಲಾದ ಒಂದು ವರದಿ.

**ಮೌಲಾನಾ ಹಸ್ರತ್ ಮೋಹಾನಿ :** ನಾನು ವರದಿಗೆ ಏನೊಂದೂ ಸೇರಿಸಲು ಅಥವಾ ವರದಿಯಿಂದ ಏನೊಂದು ತೆಗೆಯಲು ಇಷ್ಟಪಡುವುದಿಲ್ಲ. ನಾನು ಹೇಳುವುದೇನೆಂದರೆ, ಮಾನ್ಯರೆ, ಏನಾದರೂ ಅವಲೋಕನವನ್ನು ಮಾಡಲು ಎದ್ದು ನಿಂತಾಗ ತಾವು ಇದು ಸಂದರ್ಭವಲ್ಲ ಎಂದು ಹೇಳುವಿರಿ. ನಾನು ಹೇಳುತ್ತೇನೆ. ಇಡೀ ವರದಿಯನ್ನು ಸದನದ ಮತಕ್ಕೆ ಹಾಕಬೇಕು. ನಾನು ಇಡೀ ವಿಷಯ ವಿರೋಧಿಸಿದಾಗ, ನಾನು ಏನು ಹೇಳಲು ಇಷ್ಟಪಡುತ್ತೇನೋ ಅದನ್ನು ಹೇಳಲು ನನಗೆ ಹಕ್ಕಿದ್ದಾಗ ಹೇಳುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಸದ್ದು, ಸದ್ದು, ನೀವು ಆ ಅವಕಾಶವನ್ನು ಕಳೆದುಕೊಂಡಿದ್ದೀರಿ ಎಂದು ನನಗೆನಿಸಿದೆ. ವರದಿಯನ್ನು ಪರಿಗಣಿಸಲು ತೆಗೆದುಕೊಳ್ಳಬೇಕೆಂದು ಪ್ರತಿಪಾದನೆ ಮಂಡಿಸಿದಾಗ ಸ್ವತಃ ನಿಮ್ಮ ಅಭಿಪ್ರಾಯ ಹೇಳಲು ಅದು ಸಕಾಲವಾಗಿತ್ತು. ಬಹುಶಃ ನೀವು ಇಲ್ಲಿರಲಿಲ್ಲ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಕ್ರಿಯಾಲೋಪದ ವಿಚಾರವೆಂದರೆ, ನಾವು ವರದಿಯ ಪರಿಗಣನೆಗೆ ಸದನದ ಒಪ್ಪಿಗೆಯನ್ನು ತೆಗೆದುಕೊಂಡಿದ್ದೇವೆ. ಬಳಿಕ ಖಂಡ ಖಂಡವಾಗಿ ನಾವು ತಿದ್ದುಪಡಿಗಳನ್ನು ಚರ್ಚಿಸಿದೆವು ಮತ್ತು ಖಂಡಗಳ ತಿದ್ದುಪಡಿಯಾದ ಅನಂತರ ಪರಿಗಣಿಸುತ್ತಿದ್ದ ವರದಿಯು ಸಂಪೂರ್ಣಗೊಂಡದ್ದು ಸಮ್ಮತಿಗಾಗಿ ತಿದ್ದುಪಡಿಯಾದ ವರದಿಯನ್ನು ಸದನದ ಮತಕ್ಕೆ ಹಾಕಬೇಕು ಎನ್ನುವುದು ಯಾವಾಗಲೂ ಇರುವ ಸಂಪ್ರದಾಯ. ಅದು ಎಂದಿನ ಕ್ರಮ. ಮಾನ್ಯರೆ, ಈಗ ಖಂಡ ಖಂಡವಾಗಿ ತಿದ್ದುಪಡಿಯಾದ ವರದಿಯನ್ನು ಅಂಗೀಕರಿಸತಕ್ಕದ್ದು. ಇದು ಸೂಕ್ತ ಸಂಸದೀಯ ಕ್ರಮವಾಗಿರುತ್ತದೆ.

ಇದರ ಹೊರತಾಗಿ, ವರದಿಯ ಕರಡು ಕಂಡಿಕೆಗಳ ಬಗೆಗೆ ಸೂಚನೆ ಕೊಡಲಾದ ನಿರ್ಣಯಗಳಿವೆ. ಪ್ರತ್ಯೇಕವಾಗಿಯೇ ಇರುವ ಆ ನಿರ್ಣಯಗಳನ್ನು ಚರ್ಚೆಗೆ ಎತ್ತಿಕೊಂಡರೂ ಸರಿ ಅಥವಾ ಹಿಂತೆಗೆದುಕೊಂಡರೂ ಸರಿ ಅಥವಾ ಇಡೀ ವರದಿಗೆ ಸಮ್ಮತಿ ನೀಡಬಹುದು.

**ಮಾನ್ಯ ಸಭಾಧ್ಯಕ್ಷರು :** ಪ್ರಸಕ್ತ ಸಮಯದಲ್ಲಿ ನಿಮ್ಮ ಮನಸ್ಸಿನಲ್ಲಿ ಯಾವ ವಿಶಿಷ್ಟ ವಿಷಯವಿದೆ?

**ಮೌಲಾನಾ ಹಸ್ರತ್ ಮೋಹಾನಿ :** ನಾನು ಕೋಮುವಾರು ರೀತಿ ಸ್ಥಾನಗಳ ಮೀಸಲಾತಿಗೆ ಸಂಬಂಧಿಸಿದ ಭಾಗವನ್ನು ಉಲ್ಲೇಖಿಸಲು ಇಷ್ಟಪಡುತ್ತೇನೆ. ಇಡೀ ಪದ್ಧತಿ ತಪ್ಪು ಎಂದು ನಾನು ಹೇಳುತ್ತೇನೆ. ನಾನು ಸ್ಥಾನಗಳ ಮೀಸಲಾತಿ ಮತ್ತು ಕೋಮುವಾರು ರೀತಿ ಕೋಮುವಾರು ಪ್ರಾತಿನಿಧ್ಯಕ್ಕೆ ಸಂಬಂಧಿಸಿದುದರ ಹೊರತು ಇನ್ನಾವುದನ್ನು ಉಲ್ಲೇಖಿಸಲು ಇಷ್ಟಪಡುವುದಿಲ್ಲ. ನನಗೆ ಕೇವಲ ಐದು ನಿಮಿಷಗಳ ಅವಕಾಶ ಕೊಡುವಿರಾ?

**ಮಾನ್ಯ ಸಭಾಧ್ಯಕ್ಷರು :** ನಾನು ಈ ಮೊದಲೇ ಹೇಳಿದಂತೆ, ನೀವು ಅವಕಾಶ ಕಳೆದುಕೊಂಡಿದ್ದೀರಿ.

**ಡಾ. ಎಸ್. ರಾಧಾಕೃಷ್ಣನ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಸಲಹಾ ಸಮಿತಿಯು ನಮಗೆ ಕಳುಹಿಸಿದ ವರದಿಯನ್ನು ನಾವು ಒಪ್ಪುತ್ತಿಲ್ಲ ಎಂಬುದೇ ನಿಜ. ಅನುಸೂಚಿಯಲ್ಲಿನ ಖಂಡಗಳಲ್ಲಿ ಕೆಲವು ಖಂಡಗಳಿಗೆ ನಾವು ತಿದ್ದುಪಡಿ ಮಾಡಿದ್ದೇವೆ ಮತ್ತು ಆ ಎಲ್ಲ ತಿದ್ದುಪಡಿ ಮಾಡಿದ ಖಂಡಗಳು ನಮ್ಮ ನಿರ್ಣಯಗಳನ್ನು ಸೂಚಿಸುತ್ತವೆ. ನಾವು ಮಾಡಿದ ನಿರ್ಣಯಗಳನ್ನು ಹೇಳುವಲ್ಲಿ, ನಾವು ಪೀಠಿಕೆಯಾಗಿ ಒಂದು ಅಥವಾ ಎರಡು ವಾಕ್ಯಗಳನ್ನು ಸೇರಿಸಿರಬಹುದು. ಸಾಮರಸ್ಯದಿಂದ ಕೂಡಿದ ಜಾತ್ಯತೀತ, ಪ್ರಜಾಪ್ರಭುತ್ವ ರಾಷ್ಟ್ರವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ರಾಷ್ಟ್ರದಲ್ಲಿ ಅಲ್ಪಸಂಖ್ಯಾತರನ್ನು ಪ್ರತ್ಯೇಕ ಸಮೂಹಗಳಾಗಿ ಇರಿಸಲು ನಿಯೋಜಿಸಿದ ಎಲ್ಲ ಸಾಧನಗಳನ್ನು ಕೈಬಿಡಬೇಕು ಮತ್ತು ಇದು ಒಂದೇ ರಾಷ್ಟ್ರವೆಂಬುದಾಗಿ ಅಭಿವೃದ್ಧಿಪಡಿಸಿ ಆ ರಾಷ್ಟ್ರಕ್ಕೇ ನಿಷ್ಠೆ ತೋರಬೇಕು. ಇದು ನಮ್ಮ ಗುರುತಿಸಲ್ಪಟ್ಟ ಗುರಿಯಾಗಿರಬೇಕಾದಾಗ, ನಾವು ನಮ್ಮ ಈಚಿನ ಹಿಂದಿನ ದಿನಗಳನ್ನು ಉಪೇಕ್ಷಿಸಲು ಇಷ್ಟಪಡುವುದಿಲ್ಲ. ಆದುದರಿಂದ ಹತ್ತು ವರ್ಷಗಳ ಅವಧಿಯಲ್ಲಿ ಈ ಹಿಂದೆ ಮಾಡಿದ ಶಿಫಾರಸುಗಳನ್ನು ಅಲ್ಪಸಂಖ್ಯಾತರು ತಕ್ಕ ಪ್ರಾತಿನಿಧ್ಯ ಪಡೆಯಬೇಕೆಂದು ಉದ್ದೇಶಿಸಲಾಗಿತ್ತು. ನಾವು ನಿರ್ಣಯಗಳನ್ನು ಕೈಬಿಡುವ ಮುನ್ನ, ನಾವು ಕೆಲವು ಉಪಕ್ರಮ ವಾಕ್ಯಗಳನ್ನು ಈ ಅಲ್ಪಸಂಖ್ಯಾತರನ್ನು ಖಾಯಂ ಆಗಿಯೇ ಅಲ್ಪಸಂಖ್ಯಾತರನ್ನಾಗಿರಿಸಬೇಕೆಂಬುದು, ಈ ಸದನದ ಇಚ್ಛೆಯಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕಾಗಿದೆ. ನಾವು, ರಾಷ್ಟ್ರದಲ್ಲಿ ತಡೆ ಒಡ್ಡುವ ಮಂದಿಗಳಿಗೆ ಒಂದು ಕೊನೆ ಹಾಕೋಣ. ನಮ್ಮ ಆದರ್ಶವೇನು? ನಮ್ಮ ದೇಶವನ್ನು ಸಾಮರಸ್ಯದಿಂದ ಕೂಡಿದ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಅಭಿವೃದ್ಧಿಸುವುದು ನಮ್ಮ ಆದರ್ಶ. ಆದುದರಿಂದಲೆ ನಾವು ಇದಕ್ಕಾಗಿ ಮೂಲಭೂತ ಹಕ್ಕುಗಳಲ್ಲಿ ಸಾರ್ವಜನಿಕ ಉದ್ಯೋಗದಲ್ಲಿ ತಾರತಮ್ಯಕ್ಕೆ ಅವಕಾಶ ಕೊಡುವುದಿಲ್ಲ ಎಂದು ಉಪಬಂಧ ಕಲ್ಪಿಸಿರುವುದರಿಂದ ಇದು ಒಂದು ಜಾತ್ಯತೀತ ರಾಷ್ಟ್ರ ಎಂದು ಹೇಳುತ್ತೇವೆ. ನೀವು ಇದನ್ನು ಒಂದು ಇಸ್ಲಾಮಿಕ್, ಹಿಂದೂ ಅಥವಾ ಕ್ರೈಸ್ತ ರಾಷ್ಟ್ರ ಮಾಡುವಿರಾದರೆ, ಅದು ಇತರ ಮತಗಳ ಅನುಯಾಯಿಗಳಿಗೆ ಗಾಬರಿಗೆ ಕಾರಣವಾಗುತ್ತದೆ. ಆದುದರಿಂದ ನಾವು ನಮ್ಮ ಉದ್ದೇಶವನ್ನು ಘೋಷಿಸಬೇಕು–ಅಂದರೆ ನಮ್ಮ ಅಪೇಕ್ಷೆ ಸಾಮರಸ್ಯದಿಂದ ಕೂಡಿದ ಪ್ರಜಾಪ್ರಭುತ್ವವಾದಿ, ಜಾತ್ಯತೀತ ರಾಷ್ಟ್ರ ನಿರ್ಮಾಣ ಮಾಡುವುದಾಗಿದೆ. ಸಮಾಜದ ವಿವಿಧ ಪಂಗಡಗಳನ್ನು ದೂರದಲ್ಲಿಡಲು ಇಲ್ಲಿವರೆಗೆ ನಿಯೋಜಿಸಿದ ಸಾಧನಗಳನ್ನು ದೂರ ಎಸೆಯಬೇಕಾಗಿದೆ; ನಾವೀಗ ಕೆಲವು ರಾಜಿಸೂತ್ರಗಳನ್ನು ಒದಗಿಸಿದರೆ, ಅದರಿಂದಾಗಿ ಹಿಂದೆ ಆಗಿಹೋದುದನ್ನು ಸರಿಪಡಿಸಬಹುದು. ನಾವು ನಮ್ಮ ದೃಷ್ಟಿಯಲ್ಲಿರುವ ಆದರ್ಶ ಮತ್ತು ನಮಗೆ ಒದಗಿರುವ ವಾಸ್ತವ ಸ್ಥಿತಿಗಳ ನಡುವೆ ರಾಜಿಗೆ ಬರುವುದಾಗಬೇಕು. ಈ ರಿಯಾಯಿತಿಗಳು ಕೇವಲ ಹತ್ತು ವರ್ಷಗಳ ಅವಧಿಗೆ ಕಾರ್ಯಾಚರಣೆಯಲ್ಲಿರುತ್ತವೆ.

ನನ್ನ ಸಲಹೆಯು, ನಾವು ಮಾಡಿರುವ ನಿರ್ದಿಷ್ಟ ಶಿಫಾರಸುಗಳಿಗೆ ಸಂಬಂಧಿಸಿಲ್ಲ. ಅದು ಬರಿಯ ನಮ್ಮ ದೃಷ್ಟಿಯಲ್ಲಿನ ಕೇಂದ್ರದ ಗುರಿಗಳನ್ನು ಕುರಿತು ಎರಡು ವಾಕ್ಯಗಳನ್ನು ಹೇಳುತ್ತದೆ. ಮಾನ್ಯ ಸಭಾಧ್ಯಕ್ಷರೆ, ಪ್ರತಿ ರಾಷ್ಟ್ರವೂ ಒಂದು ವಿಶಿಷ್ಟ ಉದ್ದೇಶಕ್ಕಾಗಿ ಕೆಲಸಮಾಡುತ್ತದೆ. ಅದು ಸೋವಿಯತ್ ರಾಷ್ಟ್ರವಿರಲಿ ಅಥವಾ ನಾಜಿ ರಾಷ್ಟ್ರವಿರಲಿ ಅಥವಾ ಅಮೆರಿಕ ರಾಷ್ಟ್ರವಿರಲಿ. ನಮ್ಮ ಉದ್ದೇಶವೇನು? ನಾವು, ಇಡೀ ಭಾರತದಲ್ಲಿ ಈ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಅಸ್ತಿತ್ವ ನೀಡಿ ಇಟ್ಟುಕೊಳ್ಳಲು ಬಯಸುತ್ತೇವೆಯೆ? ನಾವು, ಸಾಕಷ್ಟು ನರಳಿಲ್ಲವೇ?

ಪಂಜಾಬಿನಲ್ಲಿ ಸಂಭವಿಸಿದ ದುರಂತ ಘಟನೆಗಳು, ನೇರವಾಗಿ ವಿನಾಶಕಾರಿ ಪ್ರವೃತ್ತಿಗಳು ಮತ್ತು ಉದ್ದೇಶಪೂರ್ವಕವಾಗಿ ಪಕ್ಷಪಾತ ಸಿದ್ಧಾಂತಗಳನ್ನು ಬೆಳೆಸಿರುವುದಕ್ಕೆ ಸಾಕ್ಷಿಯಾಗಿದೆ. ಇವು ದೈವಿಕ ಕಾರ್ಯಗಳಲ್ಲ ಆದರೆ ಮಾನವನ ಕೆಲಸಗಳು. ರಾಷ್ಟ್ರ ನಿಷ್ಠೆಯನ್ನು ಬೆಳೆಸಲು ಐ.ಎನ್.ಎ. ಅಥವಾ ಭಾರತೀಯ ಸೇನೆಯಲ್ಲಿ ಇಚ್ಚಿಸಿದರೆ ನಾವು ಯಶಸ್ಸು ಕಾಣುತ್ತೇವೆ; ನಾವು, ಎಲ್ಲಿ ಒಂದು ರಾಷ್ಟ್ರಕ್ಕೆ ಅಡ್ಡಿಪಡಿಸಲು ಪ್ರಯತ್ನಿಸಿದರೆ ಅಲ್ಲಿ ಸಹ ನಾವು ಯಶಸ್ವಿಯಾದೆವು. ನಾವು ಈಗ ವಿನಾಶಕಾರಿ ಪ್ರವೃತ್ತಿಗಳನ್ನು ತಡೆದು ನಿಲ್ಲಿಸಲು ಸಕಾಲವಾಗಿದೆ ಮತ್ತು ಹಾಗೆಯೇ ಇತರ ಗುರಿಗಳನ್ನು ಸಾಧಿಸಲು ಎಚ್ಚರ ವಹಿಸಬೇಕಾಗಿದೆ ಮತ್ತು ಈ ಅಲ್ಪಸಂಖ್ಯಾತರನ್ನು ಅಲ್ಪಸಂಖ್ಯಾತರಾಗಿಯೇ ಉಳಿಸಿಕೊಳ್ಳುವುದು ನಮ್ಮ ಬಯಕೆಯಲ್ಲ ಎಂದು ಹೇಳಬೇಕಾಗಿದೆ. ರಾಜಿಸೂತ್ರಗಳು ತಾತ್ಕಾಲಿಕ ಮತ್ತು ಹತ್ತನೇ ವರ್ಷದ ಕೊನೆಗೆ ನಿಂತು ಹೋಗುತ್ತವೆ. ಆದುದರಿಂದ ನಾನು ಸದನದ ಅನುಮತಿ ಕೋರಿ, ಅನುಸೂಚಿಯಲ್ಲಿರುವ ವಿಷಯಗಳಿಗೆ ಪೂರ್ವಭಾವಿಯಾಗಿ ನಾನು ಹೇಳಿರುವ ವಾಕ್ಯಗಳನ್ನು ಸೇರಿಸಬೇಕೆಂದು ಔಪಚಾರಿಕವಾಗಿ ಇದನ್ನು ಮಂಡಿಸುತ್ತೇನೆ.

**ಶ್ರೀ ರಿಜ್ವಾನ್ ಅಲ್ಲಾಹ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ಮಾನ್ಯರೆ, ಶ್ರೀ ಮುನ್ಷಿಯವರು ಎತ್ತಿದ ಮೊದಲ ಅಂಶವು ಕ್ರಮಬದ್ಧವಾಗಿಲ್ಲ. ಸಾಮಾನ್ಯವಾಗಿ ಯಾವುದೇ ಸಮಿತಿಯಿಂದ ಬರುವ ವರದಿಯನ್ನು ಈ ಸದನವು ಪರಿಗಣಿಸುತ್ತದೆ ಮತ್ತು ಬಳಿಕ ಸದನವು, ಅದನ್ನು ತನ್ನದೇ ಸ್ವಂತ ವರದಿಯಾಗಿ ಭಾವಿಸಿ ಅದನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸುತ್ತದೆ. ಆದ್ದುದರಿಂದ ಶ್ರೀ ಮುನ್ಷಿಯವರ ವಾದದ ಪ್ರಕಾರ ಅಧಿಕಾರಕ್ಕೆ ಮೀರಿದ ವರದಿಯನ್ನು ಅಳವಡಿಸುವ ಯಾವುದೇ ಅಗತ್ಯವಿಲ್ಲ ಎಂಬುದು ಮತ್ತು ಅದು ಸೂಕ್ತವಾದುದು ಆಗಿಲ್ಲ. ಎರಡನೆಯದಾಗಿ, ಪ್ರೊ. ರಾಧಾಕೃಷ್ಣನ್ ಹೇಳಿದ್ದು ಕೂಡ ಕ್ರಮಬದ್ಧವಾದುದಲ್ಲ. ಅವರು ತಮ್ಮ ಒಂದು ನಿರ್ಣಯವನ್ನು ಉಪಕ್ರಮಿಸುವ ಮೂಲಕ ಒಂದು ಹೊಸ ಉದ್ದೇಶವನ್ನು ಮುಂದಿಡಲು ಬಯಸುತ್ತಾರೆ. ಆದರೆ ಅದನ್ನು ಉದ್ದೇಶಗಳು ನಿರ್ಣಯವನ್ನು ಪರಿಗಣನೆ ಮಾಡುವಾಗ ಮಂಡಿಸಬೇಕಿತ್ತು. ಅವರು ಮುಂದಿಡಲು ಬಯಸುವ ಅದು, ಒಂದು ಹೊಸ ವಿಷಯ ಮತ್ತು ಹಾಗಾಗಿ ಅದು ಬದ್ಧವಾದುದಲ್ಲ.

**ಶ್ರೀ ಶಂಕರ್ ದತ್ತಾತ್ರಯ ದೇವ್** (ಬಾಂಬೆ : ಸಾಮಾನ್ಯ) : ಮಾನ್ಯರೆ, ಗಮನಿಸಲು ನಮ್ಮ ಮುಂದೆ ನಿಖರವಾಗಿ ಏನಿದೆ ಎಂಬುದು ನಾವು ತಿಳಿದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಗಮನಿಸಬೇಕಾದ ಎರಡು ಅಂಶಗಳು ಬಂದಿವೆ. ಮೊದಲನೆಯದನ್ನು ಶ್ರೀ ಮುನ್ಷಿಯವರು ಎತ್ತಿರುವಂಥದ್ದು ಈಗ ನಾವು ಅನುಬಂಧದಲ್ಲಿನ ವಿಷಯಗಳನ್ನು ಅಂಗೀಕರಿಸಿದ್ದೇವೆ. ಆದ್ದರಿಂದ ವರದಿ ಬಗ್ಗೆಯೇ ಏನೊಂದೂ ಹೇಳುವ ಆವಶ್ಯಕತೆಯಿಲ್ಲ ಮತ್ತು ಅವರ ವರದಿಯಲ್ಲಿಯೇ ಇಲ್ಲದಿರುವುದನ್ನು ಆ ಸಮಿತಿಯ ಸದಸ್ಯರಿಗೆ ಏನಾದರೊಂದನ್ನು ಒದಗಿಸುವುದು ಸದನಕ್ಕೆ ಸಾಧ್ಯವಿಲ್ಲ. ಅದು ಎತ್ತಿರುವ ವರದಿ ಬಗ್ಗೆಯೇ ನಾವು ಏನೊಂದನ್ನು ಹೇಳದಿರುವಾಗ ಎತ್ತಿರುವ ಕ್ರಿಯಾಲೋಪದ ಬಗ್ಗೆ ಏನೂ ಹೇಳಲಾಗದು. ಏಕೆಂದರೆ, ಆ ಬಗ್ಗೆ ಏನೊಂದನ್ನು ಹೇಳುವ ಹಾಗಿಲ್ಲ. ಮತ್ತು ನಮ್ಮ ಅಭಿಪ್ರಾಯಗಳೇನು ಎಂಬುದಕ್ಕೂ, ನಾವು ಚರ್ಚೆ ಮಾಡುವಾಗ ವ್ಯಕ್ತಪಡಿಸಲಾಗಿರುವ ಅಭಿಪ್ರಾಯಗಳೇ ಆಗಿವೆ.

**ಶ್ರೀ ಶಂಕರ್ ದತ್ತಾತ್ರಯ ದೇವ್** : ಆ ಕುರಿತು ತಾವು ನಿರ್ಣಯ ಕೊಟ್ಟಿರುವಿರಾ?

**ಮಾನ್ಯ ಸಭಾಧ್ಯಕ್ಷರು** : ನಾನು ಸ್ಥಿತಿಯನ್ನು ವಿವರಿಸುತ್ತಿದ್ದೇನೆ.

**ಶ್ರೀ ಕೆ. ಸಂತಾನಮ್** : ಮಾನ್ಯರೆ, ನಾನು, ಕರಡಿನ ಬಗ್ಗೆ ಪರಿಗಣಿಸಬೇಕಾದ ವಿಷಯಗಳನ್ನು ಮಾತ್ರ ದಾಖಲಿಸಬೇಕು ಎಂದು ನಿವೇದಿಸಿಕೊಳ್ಳುತ್ತಿದ್ದೇನೆ. ಆದುದರಿಂದ ನಾನು ಶ್ರೀ ಮುನ್ಷಿಯವರ ಅಭಿಪ್ರಾಯವನ್ನು ಬೆಂಬಲಿಸುತ್ತೇನೆ. ಡಾ. ರಾಧಾಕೃಷ್ಣನ್ ಅವರು ಹೇಳಿರುವ ವಿಷಯಗಳು ಖಂಡಿತವಾಗಿಯೂ ಒಂದು ಉತ್ತಮ ನಿರ್ಣಯಗಳು ಆದರೆ ನಾನು ಅವುಗಳನ್ನು ಹೇಗೆ ಕರಡು ತಯಾರಿಸುವಿಕೆಯಲ್ಲಿ ಅಳವಡಿಸಬೇಕೆಂದು ತಿಳಿಯುತ್ತಿಲ್ಲ ಸಾಮಾನ್ಯ ಪ್ರೋತ್ಸಾಹಕ ಮಾತುಗಳೆಂಬುದು ಸರಿ. ಆದರೆ ಅವುಗಳನ್ನು ವಿಧೇಯಕದಲ್ಲಿ

ಪಂಜಾಬಿನಲ್ಲಿ ಸಂಭವಿಸಿದ ದುರಂತ ಘಟನೆಗಳು, ನೇರವಾಗಿ ವಿನಾಶಕಾರಿ ಪ್ರವೃತ್ತಿಗಳು ಮತ್ತು ಉದ್ದೇಶಪೂರ್ವಕವಾಗಿ ಪಕ್ಷಪಾತ ಸಿದ್ಧಾಂತಗಳನ್ನು ಬೆಳೆಸಿರುವುದಕ್ಕೆ ಸಾಕ್ಷಿಯಾಗಿದೆ. ಇವು ದೈವಿಕ ಕಾರ್ಯಗಳಲ್ಲ ಆದರೆ ಮಾನವನ ಕೆಲಸಗಳು. ರಾಷ್ಟ್ರ ನಿಷ್ಠೆಯನ್ನು ಬೆಳೆಸಲು ಐ.ಎನ್.ಎ. ಅಥವಾ ಭಾರತೀಯ ಸೇನೆಯಲ್ಲಿ ಇಚ್ಛಿಸಿದರೆ ನಾವು ಯಶಸ್ಸು ಕಾಣುತ್ತೇವೆ; ನಾವು, ಎಲ್ಲಿ ಒಂದು ರಾಷ್ಟ್ರಕ್ಕೆ ಅಡ್ಡಿಪಡಿಸಲು ಪ್ರಯತ್ನಿಸಿದರೆ ಅಲ್ಲಿ ಸಹ ನಾವು ಯಶಸ್ವಿಯಾದೆವು. ನಾವು ಈಗ ವಿನಾಶಕಾರಿ ಪ್ರವೃತ್ತಿಗಳನ್ನು ತಡೆದು ನಿಲ್ಲಿಸಲು ಸಕಾಲವಾಗಿದೆ ಮತ್ತು ಹಾಗೆಯೇ ಇತರ ಗುರಿಗಳನ್ನು ಸಾಧಿಸಲು ಎಚ್ಚರ ವಹಿಸಬೇಕಾಗಿದೆ ಮತ್ತು ಈ ಅಲ್ಪಸಂಖ್ಯಾತರನ್ನು ಅಲ್ಪಸಂಖ್ಯಾತರಾಗಿಯೇ ಉಳಿಸಿಕೊಳ್ಳುವುದು ನಮ್ಮ ಬಯಕೆಯಲ್ಲ ಎಂದು ಹೇಳಬೇಕಾಗಿದೆ. ರಾಜಿಸೂತ್ರಗಳು ತಾತ್ಕಾಲಿಕ ಮತ್ತು ಹತ್ತನೇ ವರ್ಷದ ಕೊನೆಗೆ ನಿಂತು ಹೋಗುತ್ತವೆ. ಆದುದರಿಂದ ನಾನು ಸದನದ ಅನುಮತಿ ಕೋರಿ, ಅನುಸೂಚಿಯಲ್ಲಿರುವ ವಿಷಯಗಳಿಗೆ ಪೂರ್ವಭಾವಿಯಾಗಿ ನಾನು ಹೇಳಿರುವ ವಾಕ್ಯಗಳನ್ನು ಸೇರಿಸಬೇಕೆಂದು ಔಪಚಾರಿಕವಾಗಿ ಇದನ್ನು ಮಂಡಿಸುತ್ತೇನೆ.

**ಶ್ರೀ ರಿಜ್ವಾನ್ ಅಲ್ಲಾಹ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ಮಾನ್ಯರೆ, ಶ್ರೀ ಮುನ್ಷಿಯವರು ಎತ್ತಿದ ಮೊದಲ ಅಂಶವು ಕ್ರಮಬದ್ಧವಾಗಿಲ್ಲ. ಸಾಮಾನ್ಯವಾಗಿ ಯಾವುದೇ ಸಮಿತಿಯಿಂದ ಬರುವ ವರದಿಯನ್ನು ಈ ಸದನವು ಪರಿಗಣಿಸುತ್ತದೆ ಮತ್ತು ಬಳಿಕ ಸದನವು, ಅದನ್ನು ತನ್ನದೇ ಸ್ವಂತ ವರದಿಯಾಗಿ ಭಾವಿಸಿ ಅದನ್ನು ತಿದ್ದುಪಡಿಯಾದ ರೂಪದಲ್ಲಿ ಅಂಗೀಕರಿಸುತ್ತದೆ. ಆದುದರಿಂದ ಶ್ರೀ ಮುನ್ಷಿಯವರ ವಾದದ ಪ್ರಕಾರ ಅಧಿಕಾರಕ್ಕೆ ಮೀರಿದ ವರದಿಯನ್ನು ಅಳವಡಿಸುವ ಯಾವುದೇ ಅಗತ್ಯವಿಲ್ಲ ಎಂಬುದು ಮತ್ತು ಅದು ಸೂಕ್ತವಾದುದು ಆಗಿಲ್ಲ. ಎರಡನೆಯದಾಗಿ, ಪ್ರೊ. ರಾಧಾಕೃಷ್ಣನ್ ಹೇಳಿದ್ದು ಕೂಡ ಕ್ರಮಬದ್ಧವಾದುದಲ್ಲ. ಅವರು ತಮ್ಮ ಒಂದು ನಿರ್ಣಯವನ್ನು ಉಪಕ್ರಮಿಸುವ ಮೂಲಕ ಒಂದು ಹೊಸ ಉದ್ದೇಶವನ್ನು ಮುಂದಿಡಲು ಬಯಸುತ್ತಾರೆ. ಆದರೆ ಅದನ್ನು ಉದ್ದೇಶಗಳು ನಿರ್ಣಯವನ್ನು ಪರಿಗಣನೆ ಮಾಡುವಾಗ ಮಂಡಿಸಬೇಕಿತ್ತು. ಅವರು ಮುಂದಿಡಲು ಬಯಸುವ ಅದು, ಒಂದು ಹೊಸ ವಿಷಯ ಮತ್ತು ಹಾಗಾಗಿ ಅದು ಬದ್ಧವಾದುದಲ್ಲ.

**ಶ್ರೀ ಶಂಕರ್ ದತ್ತಾತ್ರಯ ದೇವ್** (ಬಾಂಬೆ : ಸಾಮಾನ್ಯ) : ಮಾನ್ಯರೆ, ಗಮನಿಸಲು ನಮ್ಮ ಮುಂದೆ ನಿಖರವಾಗಿ ಏನಿದೆ ಎಂಬುದು ನಾವು ತಿಳಿದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಗಮನಿಸಬೇಕಾದ ಎರಡು ಅಂಶಗಳು ಬಂದಿವೆ. ಮೊದಲನೆಯದನ್ನು ಶ್ರೀ ಮುನ್ಷಿಯವರು ಎತ್ತಿರುವಂಥದ್ದು ಈಗ ನಾವು ಅನುಬಂಧದಲ್ಲಿನ ವಿಷಯಗಳನ್ನು ಅಂಗೀಕರಿಸಿದ್ದೇವೆ. ಆದ್ದರಿಂದ ವರದಿ ಬಗ್ಗೆಯೇ ಏನೊಂದೂ ಹೇಳುವ ಆವಶ್ಯಕತೆಯಿಲ್ಲ ಮತ್ತು ಅವರ ವರದಿಯಲ್ಲಿಯೇ ಇಲ್ಲದಿರುವುದನ್ನು ಆ ಸಮಿತಿಯ ಸದಸ್ಯರಿಗೆ ಏನಾದರೊಂದನ್ನು ಒದಗಿಸುವುದು ಸದನಕ್ಕೆ ಸಾಧ್ಯವಿಲ್ಲ. ಅದು ಎತ್ತಿರುವ ವರದಿ ಬಗ್ಗೆಯೇ ನಾವು ಏನೊಂದನ್ನು ಹೇಳದಿರುವಾಗ ಎತ್ತಿರುವ ಕ್ರಿಯಾಲೋಪದ ಬಗ್ಗೆ ಏನೂ ಹೇಳಲಾಗದು. ಏಕೆಂದರೆ, ಆ ಬಗ್ಗೆ ಏನೊಂದನ್ನು ಹೇಳುವ ಹಾಗಿಲ್ಲ. ಮತ್ತು ನಮ್ಮ ಅಭಿಪ್ರಾಯಗಳೇನು ಎಂಬುದಕ್ಕೂ, ನಾವು ಚರ್ಚೆ ಮಾಡುವಾಗ ವ್ಯಕ್ತಪಡಿಸಲಾಗಿರುವ ಅಭಿಪ್ರಾಯಗಳೇ ಆಗಿವೆ.

**ಶ್ರೀ ಶಂಕರ್ ದತ್ತಾತ್ರಯ ದೇವ್** : ಆ ಕುರಿತು ತಾವು ನಿರ್ಣಯ ಕೊಟ್ಟಿರುವಿರಾ?

**ಮಾನ್ಯ ಸಭಾಧ್ಯಕ್ಷರು** : ನಾನು ಸ್ಥಿತಿಯನ್ನು ವಿವರಿಸುತ್ತಿದ್ದೇನೆ.

**ಶ್ರೀ ಕೆ. ಸಂತಾನಮ್** : ಮಾನ್ಯರೆ, ನಾನು, ಕರಡಿನ ಬಗ್ಗೆ ಪರಿಗಣಿಸಬೇಕಾದ ವಿಷಯಗಳನ್ನು ಮಾತ್ರ ದಾಖಲಿಸಬೇಕು ಎಂದು ನಿವೇದಿಸಿಕೊಳ್ಳುತ್ತಿದ್ದೇನೆ. ಆದುದರಿಂದ ನಾನು ಶ್ರೀ ಮುನ್ಷಿಯವರ ಅಭಿಪ್ರಾಯವನ್ನು ಬೆಂಬಲಿಸುತ್ತೇನೆ. ಡಾ. ರಾಧಾಕೃಷ್ಣನ್ ಅವರು ಹೇಳಿರುವ ವಿಷಯಗಳು ಖಂಡಿತವಾಗಿಯೂ ಒಂದು ಉತ್ತಮ ನಿರ್ಣಯಗಳು ಆದರೆ ನಾನು ಅವುಗಳನ್ನು ಹೇಗೆ ಕರಡು ತಯಾರಿಸುವಿಕೆಯಲ್ಲಿ ಅಳವಡಿಸಬೇಕೆಂದು ತಿಳಿಯುತ್ತಿಲ್ಲ ಸಾಮಾನ್ಯ ಪ್ರೋತ್ಸಾಹಕ ಮಾತುಗಳೆಂಬುದು ಸರಿ. ಆದರೆ ಅವುಗಳನ್ನು ವಿಧೇಯಕದಲ್ಲಿ

ಅಳವಡಿಸಬೇಕಾದಾಗ ಅವುಗಳಿಗೆ ಯಾವ ಸ್ಥಾನ ಇದೆ ಎಂಬುದು ಗೊತ್ತಾಗುತ್ತಿಲ್ಲ ಅವು ಬಹುಶಃ ಅಪ್ರಸ್ತುತವಾಗುತ್ತದೆ.

**ಶ್ರೀ ಆರ್.ವಿ. ಧುಲೇಕರ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ಇಡೀ ವರದಿ ಈಗ ನಮ್ಮ ಮುಂದೆ ಇದೆ ಮತ್ತು ನಾನು ಈ ಹಂತದಲ್ಲಿ ಆಚಾರ್ಯ ರಾಧಾಕೃಷ್ಣನ್ ಅವರಿಗೆ ಇಡೀ ವರದಿಯ ಉದ್ದೇಶ, ಎಲ್ಲ ವಿಧದ ಮೀಸಲಾತಿಯನ್ನು ರದ್ದುಮಾಡಬೇಕು ಮತ್ತು ಹತ್ತು ವರ್ಷಗಳೊಳಗೆ ಎಲ್ಲ ಅಡೆತಡೆ ಉಂಟುಮಾಡುವ ಶಕ್ತಿಗಳನ್ನೂ ಹೋಗಲಾಡಿಸಬೇಕು; ಇದರಿಂದ ಹತ್ತು ವರ್ಷಗಳ ಅನಂತರ ನಾವು ಒಂದು ಸಾಮರಸ್ಯದಿಂದ ಕೂಡಿದ ರಾಷ್ಟ್ರವಾಗಿ ಆಗಬಹುದು ಎಂಬುದನ್ನು ಮಂಡಿಸಿರುವುದು ಸರಿ ಇದೆ ಎಂದು ನಿವೇದಿಸಿಕೊಳ್ಳುತ್ತಿದ್ದೇನೆ. ಆದುದರಿಂದ ಆಚಾರ್ಯ ರಾಧಾಕೃಷ್ಣನ್ ಅವರ ಸಲಹೆಯನ್ನು ಕಾರ್ಯರೂಪಕ್ಕೆ ತರಲು ಇದು ಸೂಕ್ತ ಸ್ಥಳ ಮತ್ತು ಕ್ರಿಯಾಲೋಪದ ವಿಚಾರ ನ್ಯಾಯಯುತವಾಗಿಯೇ ಇಲ್ಲ. ಏಕೆಂದರೆ, ಅದನ್ನು ಪ್ರಸ್ತಾವಿಸುವುದಕ್ಕೆ ಅವಕಾಶವೇ ಇಲ್ಲ ಎಂದು ಹೇಳಿಕೊಳ್ಳುತ್ತಿದ್ದೇನೆ. ಆದುದರಿಂದ ನಾನು ಈ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಕ್ರಿಯಾಲೋಪ ಕುರಿತು ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ ಎನಿಸುತ್ತದೆ ಮತ್ತು ನಾನು ಈಗ ನನ್ನ ಆದೇಶ ನೀಡಲು ಅನುಮತಿ ಇದೆ ಎಂದು ಭಾವಿಸಿದ್ದೇನೆ. ಈ ಸದನಕ್ಕೆ ಸಂಬಂಧಿಸಿದ ಹಾಗೆ ಅದು ಪ್ರಸಕ್ತ ಸಮಯದಲ್ಲಿ ಕರಡು ರಚನಾಸಮಿತಿಗೆ ಕೆಲವು ವಿಷಯಗಳನ್ನು ಕುರಿತು ಕೆಲವು ಖಂಡಗಳನ್ನು ಉಪಕ್ರಮಿಸಲು ಸೂಚನೆಗಳನ್ನು ಮಾತ್ರ ನೀಡುತ್ತಿದೆ ಎಂಬ ಅಭಿಪ್ರಾಯದೊಂದಿಗೆ ಒಪ್ಪಲು ನಾನು ಪ್ರವೃತ್ತನಾಗಿದ್ದೇನೆ ಮತ್ತು ಕರಡು ರಚನಾಸಮಿತಿಯು ನಾವೀಗ ಅಂಗೀಕರಿಸಿರುವ ಹಾಗೂ ಅನುಬಂಧದಲ್ಲಿರುವ ಆ ಸೂಚನೆಗಳನ್ನು ತೆಗೆದುಕೊಳ್ಳಬೇಕಿದೆ. ಆದುದರಿಂದ ಈ ಹಂತದಲ್ಲಿ ಹೆಚ್ಚೇನೂ ಹೇಳುವ ಆವಶ್ಯಕತೆ ಇರುವುದಿಲ್ಲ ಮತ್ತು ಈ ಸದನದ ನಿರ್ಣಯಗಳೆಂದು, ಅನುಬಂಧದಲ್ಲಿ ಏನಿದೆಯೋ ಅವನ್ನು ಸೇರಿಸುವುದು ಕರಡು ರಚನಾಸಮಿತಿಗೆ ಬಿಟ್ಟದ್ದಾಗಿದೆ.

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಮಾನ್ಯರೆ, ಸದನದ ಮಾಹಿತಿಗಾಗಿ, ನಾನು ಈ ರೀತಿ ಹೇಳಬಹುದಾಗಿದೆ ಎಂದರೆ ಸಲಹಾ ಸಮಿತಿಯ ಕಾರ್ಯಗಳಿಗೆ ಸಂಬಂಧಿಸಿದಂತೆ ಉಳಿದ ವಿಷಯಗಳೆಂದರೆ ಮೊದಲನೆಯದು, ಪೂರ್ವ ಪಂಜಾಬ್ ಮತ್ತು ಪಶ್ಚಿಮ ಬಂಗಾಳಗಳಿಗೆ ಸಂಬಂಧಿಸಿದ ವಿಷಯ ಭಾಗ ಮತ್ತು ಇನ್ನೊಂದು ವಿಷಯವೆಂದರೆ, ಸಲಹಾ ಸಮಿತಿಯು ಈಗ ಸ್ವೀಕರಿಸಿರುವ ಬುಡಕಟ್ಟು ಮತ್ತು ಹೊರತುಪಡಿಸಿದ ಪ್ರದೇಶ ಸಮಿತಿಯ ವರದಿ. ಆದರೆ ಅದನ್ನು ಪರಿಗಣಿಸಲು ಮತ್ತಷ್ಟು ಸಮಯ ಬೇಕಾಗುತ್ತದೆ. ಮೂರನೆಯ ವಿಷಯ ಸಂವಿಧಾನ ರಚನಾಸಭೆಯಲ್ಲಿ ನಾವು ಕಳೆದ ಬಾರಿ ಸಂಧಿಸಿದಾಗ, ನಾವು ಕೆಲವು ಮೂಲಭೂತ ಹಕ್ಕುಗಳನ್ನು ಒಪ್ಪಿದೆವು ಮತ್ತು ಆ ವರದಿಯ ಉಳಿದ ಭಾಗವನ್ನು ಇನ್ನೂ ಸಲ್ಲಿಸಬೇಕಿದೆ. ಈ ಪ್ರಸ್ತಾವಗಳನ್ನು ಗಮನಿಸಲಾಗುವುದು ಮತ್ತು ಸಮಿತಿಯ ಅಂತಿಮ ವರದಿಯು ಸದನ ಮತ್ತೆ ಸಭೆ ಸೇರಿದಾಗ ಸದನದ ಮುಂದೆ ಬರುತ್ತದೆ. ಪ್ರಸ್ತುತ ಸಲಹಾ ಸಮಿತಿಯ ವರದಿ ಪೂರ್ಣಗೊಳಿಸಿದೆ. ಸದನವು ನೀಡಿದ ಸಹಕಾರಕ್ಕಾಗಿ ಮತ್ತು ನಿಗದಿಪಡಿಸಿದ ಸಮಯದಲ್ಲಿ ಕೆಲಸ ಮುಗಿಸಿದುದಕ್ಕಾಗಿ ಸದನಕ್ಕೆ ನಾನು ವಂದಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಮೂಲಭೂತ ಹಕ್ಕುಗಳು ಕುರಿತು ಏನು ಹೇಳಲಾಗಿದೆ? ನಾವೀಗ ಅದನ್ನು ಎತ್ತಿಕೊಳ್ಳೋಣವೇ?

**ಗೌರವಾನ್ವಿತ ಸರ್ದಾರ್ ವಲ್ಲಭಭಾಯಿ ಜೆ. ಪಟೇಲ್** : ಸದನವು ಅದನ್ನೆತ್ತಿಕೊಳ್ಳುವುದಾದರೆ ನನ್ನದೇನೂ ಆಕ್ಷೇಪವಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಈಗ ಸಮಯವಿಲ್ಲದ ಕಾರಣ ನಾವು ನಾಳೆ ಬೆಳಗ್ಗೆ ೧೦ ಗಂಟೆಗೆ ನಮ್ಮ ಎಂದಿನ ಕಾರ್ಯಕಲಾಪಗಳನ್ನು ಪ್ರಾರಂಭಿಸೋಣ. ಆದರೆ ಈ ಅಪರಾಹ್ನ ಒಂದು ವಿಶೇಷ ಉದ್ದೇಶಕ್ಕಾಗಿ

ನಾವು ಸ್ವಲ್ಪಕಾಲ ಸೇರುತ್ತಿದ್ದೇವೆ ಎಂದು ಹೇಳಲು ಇಚ್ಛಿಸುತ್ತೇನೆ. ಅದೇಂದರೆ, ಈ ಸದನಕ್ಕೆ ಕೊಡುಗೆಯಾಗಿ ಬಂದಿರುವ ಮಹಾತ್ಮ ಗಾಂಧಿಯವರ ಭಾವಚಿತ್ರದ ಅನಾವರಣ. ಆದುದರಿಂದ ನಾನು ಆ ಉದ್ದೇಶಕ್ಕಾಗಿ ನಾವು ಮಧ್ಯಾಹ್ನ ೩ ಗಂಟೆಗೆ ಸೇರಬೇಕು ಎಂದು ಪ್ರಸ್ತಾವಿಸುತ್ತಿದ್ದೇನೆ.

ಸಭೆಯನ್ನು ಮಧ್ಯಾಹ್ನ ಮೂರು ಗಂಟೆವರೆಗೆ ಭೋಜನಕ್ಕಾಗಿ ಮುಂದೂಡಲಾಯಿತು.

ಭಾರತದ ಸಂವಿಧಾನ ರಚನಾಸಭೆಯು ಮಧ್ಯಾಹ್ನ ಮೂರು ಗಂಟೆಗೆ ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಮಾನ್ಯ ಸಭಾಧ್ಯಕ್ಷರ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಪುನಃ ಸೇರಿತು.

## ಮಹಾತ್ಮ ಗಾಂಧಿಯವರ ಭಾವಚಿತ್ರದ ಕೊಡುಗೆ ಮತ್ತು ಅನಾವರಣ

**ಮಾನ್ಯ ಸಭಾಧ್ಯಕ್ಷರು :** ಶ್ರೀ ಪಟ್ಟಾಣಿ.

**ಶ್ರೀ ಎ.ಪಿ. ಪಟ್ಟಾಣಿ** (ಪಶ್ಚಿಮ ಭಾರತ ರಾಜ್ಯಗಳು) : ಈ ಕೆಳಗಿನ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸಲು ನನಗೆ ಅತ್ಯಂತ ಸಂತೋಷವಾಗುತ್ತದೆ.

"ಭಾರತದ ಸಂವಿಧಾನ ರಚನಾಸಭೆಯು ಸರ್ ಆಸ್ವಾಲ್ಡ್ ಬಿರ್ಲೆ ಅವರು ರಚಿಸಿದ, ರಾಷ್ಟ್ರಕ್ಕೆ ಶ್ರೀ ಪ್ರಭಾಶಂಕರ್ ಪಟ್ಟಾಣಿಯವರು ವರ್ಗಾಯಿಸಿದ ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಸ್ವೀಕರಿಸಿದೆ ಎಂದು ನಿರ್ಣಯಿಸಲಾಗಿದೆ."

ನನ್ನ ದೇಶದ ಈ ಸಂವಿಧಾನದ ರಚನಾಸಭೆಯಲ್ಲಿ ನಿಂತು ಒಂದು ಹೊಣೆಗಾರಿಕೆಯನ್ನು ನಿರ್ವಹಿಸಲು ಮತ್ತು ದಿವಂಗತರಾದ ನನ್ನ ತಂದೆಯವರ ಇಚ್ಛೆ ಪೂರೈಸಲು ಇಂದು ನನಗಾಗುತ್ತಿರುವ ಸಂತೋಷವನ್ನು ಮಾತುಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ.

ಸದ್ಯ ಅನಾವರಣಗೊಳಿಸಬೇಕಿರುವ ಭಾವಚಿತ್ರವನ್ನು, ಎರಡನೆ ದುಂಡುಮೇಜಿನ ಸಮ್ಮೇಳನ ಅವಧಿಯಲ್ಲಿ ಇಂಗ್ಲೆಂಡ್‌ನಲ್ಲಿ ಮಹಾನ್ ವರ್ಣಚಿತ್ರ ಕಲಾವಿದ ಸರ್ ಆಸ್ವಾಲ್ಡ್ ಬಿರ್ಲೆಯವರು ರಚಿಸಿದ್ದಾಗಿದೆ ಮತ್ತು ಅದನ್ನು ನನ್ನ ತಂದೆ ಖರೀದಿಸಿದರು. ಸರ್ ಆಸ್ವಾಲ್ಡ್ ಅವರು ಈ ಭಾವಚಿತ್ರವನ್ನು ಸ್ವತಃ ತಾನೇ ರಚಿಸಿದ್ದರು ಮತ್ತು ನನ್ನ ತಂದೆಯವರು ಅದನ್ನು ಬಯಸಿದ್ದರಿಂದ ಮತ್ತು ಅದನ್ನು ಭಾರತಕ್ಕೆ ತೆಗೆದು ಹೋಗುವುದಕ್ಕಾಗಿ ಹೇಳಿದ್ದರಿಂದ ಅವರು ಅದನ್ನು ಕೊಡಲು ಒಪ್ಪಿದರು. ಹೇಗೇ ಇರಲಿ, ಅದು ಭಾರತಕ್ಕೆ ತಲುಪಿದಾಗ. ಜಾಗ್ರತೆಯಿಂದ ಮೂಲ ಪ್ಯಾಕಿಂಗ್‌ನಲ್ಲಿ ಹೇಗೆ ಇತ್ತೋ ಹಾಗೆಯೇ ಎತ್ತಿಡಲಾಯಿತು. ನಮಗೆ ಅದನ್ನು ನೋಡಲು ಅವಕಾಶಮಾಡಲಿಲ್ಲ ಮತ್ತು ಇಂಗ್ಲೆಂಡಿನಲ್ಲಿ ಕುಟುಂಬವಾಗಲಿ ಅಥವಾ ಅವರ ಗೆಳೆಯರಾಗಲಿ ಅವರು ಅದನ್ನು ಏನು ಮಾಡಲು ಉದ್ದೇಶಿಸಿದ್ದಾರೆ ಎಂಬ ಮಾಹಿತಿಯನ್ನೂ ಅವರಿಂದ ಪಡೆದುಕೊಳ್ಳಲಾಗಲಿಲ್ಲ. ಆದರೆ ೧೯೩೫ರ ಅಧಿನಿಯಮ ಅಂಗೀಕಾರವಾದ ಕೆಲ ಸಮಯದ ಅನಂತರ, ಅವರು ನನಗೆ ತುಂಬ ಗೌಪ್ಯವಾಗಿ ಹೇಳಿದ್ದೇನೆಂದರೆ, ತಾವು ಅದನ್ನು ಆ ಅಧಿನಿಯಮದ ಅಡಿ ಹೊಸ ಸರ್ಕಾರ ರಚನೆಯಾಗಿ, ಅದರ ಉದ್ಘಾಟನೆಯ ಸಮಯದಲ್ಲಿ ರಾಷ್ಟ್ರಕ್ಕೆ ಅದನ್ನು ಕೊಡುಗೆ ನೀಡಲು ಉದ್ದೇಶಿಸಿದ್ದರೆಂದೂ ಹೇಳಿದ್ದರು. ಕಾಲ ಸರಿಯಿತು. ಆ ಅಧಿನಿಯಮವು ಚಾಲನೆಗೆ ಬರುವ ಯಾವ ಭರವಸೆಯೂ ಇರಲಿಲ್ಲ. ನನ್ನ ತಂದೆ ತೀರಿಕೊಂಡರು. ೧೯೩೮ರ ಫೆಬ್ರವರಿಯಲ್ಲಿ ತೀರಿಕೊಂಡ ಹತ್ತು ನಿಮಿಷಗಳೊಳಗೆ ಅವರು ಭಾವನಗರದಿಂದ ಮಹಾತ್ಮಾಜಿಯವರನ್ನು ಭೇಟಿ ಮಾಡಲು, ಅಂದರೆ ಫೆಬ್ರವರಿ ೧೬ರಂದು ಹರಿಪುರಕ್ಕೆ ವಿಮಾನದಲ್ಲಿ ಬರಲು ಯೋಜಿಸಿದ್ದರು. ಆ ಕಾರ್ಯಕ್ರಮ ಮತ್ತು ಭೇಟಿಯು ಇತರ ಸಂದರ್ಭಗಳಿಂದ ರದ್ದಾಯಿತು. ಆದರೆ ತಮ್ಮ ಸಾವಿಗೆ ಮುನ್ನ ಅವರು, ನನಗೆ ಈ ಭಾವಚಿತ್ರವನ್ನು ಮನಸ್ಸಿನಲ್ಲಿಟ್ಟುಕೊಳ್ಳಲು ಮತ್ತು ಅದರ ಬಗೆಗಿನ ತಮ್ಮ ಇಚ್ಛೆಯನ್ನು ಎರಡು ಮೂರು ಬಾರಿ ಹೇಳಿದ್ದರು.

ಮಾನ್ಯರೆ, ನಾನು ನಿವೇದಿಸಿಕೊಂಡಂತೆ ೧೯೩೫ರ ಅಧಿನಿಯಮ ಕಾರ್ಯರೂಪಕ್ಕೆ ಬರಲಿಲ್ಲ. ಆದರೆ

೧೯೪೭ರ ಅಧಿನಿಯಮದ ಅಡಿ ಹೊಸ ಸರ್ಕಾರ ಸ್ಥಾಪಿಸಬೇಕಾದಾಗ, ನಾನು ಪ್ರಸಕ್ತ ನಮೂದಿಸುತ್ತಿರುವುದನ್ನು ಮತ್ತು ಭಾವಚಿತ್ರ ಕುರಿತು ನಮ್ಮ ಪ್ರಧಾನ ಮಂತ್ರಿಗಳಾದ ಪಂಡಿತ್ ಜವಾಹರಲಾಲ್ ನೆಹರು ಅವರಿಗೆ ನನ್ನ ತಂದೆಯವರ ಸಂದೇಶದ ಬಗ್ಗೆ ತಿಳಿಸಿದೆ. ಮಾನ್ಯರೆ, ಸಂಕ್ಷಿಪ್ತವಾಗಿ ಇದು ಈ ಸಂದರ್ಭದ ಹಿನ್ನೆಲೆ.

ಮಹಾತ್ಮಾಜಿಯವರ ಕುರಿತು ಕೆಲವು ಮಾತುಗಳನ್ನು ಹೇಳಲು ಈ ಅವಕಾಶವನ್ನೆತ್ತಿಕೊಳ್ಳಲು ನಾನು ಇಚ್ಛಿಸುತ್ತೇನೆ. ನಾನಿದನ್ನು ಪೂಜ್ಯಭಾವದಿಂದ ಮತ್ತು ಸಂಕೋಚದಿಂದ ಹೇಳುತ್ತಿದ್ದೇನೆ. ನಾನು ಮಹಾತ್ಮಾಜಿಯವರನ್ನು ಕುರಿತು ಏನೊಂದು ಹೇಳಿದರೂ ಅದು ಕೈಲಾಸ ಪರ್ವತವನ್ನು ಒಂದು ಅಡಿಕಡ್ಡಿಯಿಂದ ಅಳೆಯಲು ಪ್ರಯತ್ನಿಸಿದಂತೆ ಇಲ್ಲವೆ ನಮ್ಮ ಶಾಸ್ತ್ರಗಳಲ್ಲಿ ಹೇಳಿದಂತೆ ಹಿಮಾಲಯದ ಸೌಂದರ್ಯ ಮತ್ತು ವೈಭವವನ್ನು ವರ್ಣಿಸಲು ಲೇಖನಿ ಮತ್ತು ಮಸಿ ಬಳಸಿ ಯತ್ನಿಸಿದಂತೆ ಎಂಬ ಅರಿವು ನನಗಿದೆ. ನಾನು ಮತ್ತು ಸದನದ ಕೆಲವು ಇತರ ಗೌರವಾನ್ವಿತ ಸದಸ್ಯರು ಶ್ರೀಕೃಷ್ಣ, ಸುದಾಮ, ನರಸಿಮೆಹ್ತಾ, ದಯಾನಂದ ಸರಸ್ವತಿ ಮತ್ತು ಮಹಾತ್ಮ ಗಾಂಧಿಯವರ ಕಾಥೇವಾಡಕ್ಕೆ ಸೇರಿದವರೆಂದು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಇದಕ್ಕಾಗಿ ನಾವು ಹೆಮ್ಮೆಪಡುವುದಾದರೆ ನಾವು ಅವರ ಉದಾಹರಣೆಗಳನ್ನು ಪಾಲಿಸಲು ಯತ್ನಿಸಬೇಕು ಮತ್ತು ಅನುಸರಿಸಬೇಕು ಕೂಡ. ವಿಶೇಷವಾಗಿ ಮಹಾತ್ಮಾಜಿಯವರ ಉದಾಹರಣೆ. ಅವರೊಂದಿಗೆ ಜೀವಿಸಿದೆವು ಮತ್ತು ಅವರು ರಾಜರಿಗೂ ಮತ್ತು ಜನರಿಗೂ ಮಿತ್ರರಾಗಿದ್ದರು. ಅವರು ಸ್ವತಃ ವಾಸ್ತವದಲ್ಲಿ ತಾವೇ ಯಾವ ಸಮುದಾಯಕ್ಕೂ ಸೇರಿದವರಲ್ಲ. ಅವರಿಗೆ ದೇಶ, ಮನೆ ಎಂಬುದಿಲ್ಲ. ವಿಶ್ವವೇ ಅವರ ಮನೆ. ಯಾವ ಸಮುದಾಯಕ್ಕೆ ಸೇರಿರುವರೊ ಅದೇ ಮಾನವಕುಲ. ಸತ್ಯಾನ್ವೇಷಣೆಯೇ ದೇವರ ಸೇವೆ, ಇವುಗಳಿಂದ ಅವರು ಎಲ್ಲರ ಮನ್ನಣೆಗಳನ್ನು ಪಡೆದರು ಮತ್ತು ಯಾರೆಲ್ಲ ಪ್ರಾಮಾಣಿಕರೊ ಗೌರವಾನ್ವಿತರೊ ಮತ್ತು ದೈವಭೀರುಗಳೊ ಅವರನ್ನು ಪ್ರೀತಿಸಿದರು. ಹಾಗೂ ಚೇತನದ ಈ ಉನ್ನತ ಮಟ್ಟವೇ ನನ್ನ ತಂದೆಯವರನ್ನು ಆಕರ್ಷಿಸಿ, ಅವರನ್ನು ಮಹಾತ್ಮರ ವಿನೀತ ಅನುಯಾಯಿಯಾಗಿ ಮಾಡಿತು. ಬಾಪುರವರೇ ನನಗೆ ಅವರ ಸಂಬಂಧವು (ಇಂಗ್ಲಿಷ್ ಭಾಷೆಯಲ್ಲಿ ಸಂಬಂಧ ಎಂಬ ಶಬ್ದವಿಲ್ಲ) ನನ್ನ ತಂದೆಯವರು, ಅವರಿಗೆ, ಅವರು ದಕ್ಷಿಣ ಆಫ್ರಿಕಾದಲ್ಲಿದ್ದಾಗ ಬರೆದ ಮೊದಲ ಕಾಗದದಿಂದ ಆರಂಭವಾಯಿತು. ನಾನು ತಿಳಿದಂತೆ, ಇದು ಕಳೆದ ಶತಮಾನದಲ್ಲಿ ಆಗಿದೆ.

ಆಧುನಿಕ ಜೀವನದ ಮಹಾನ್ ಸತ್ಯ ವಾಸ್ತವಾಂಶ ಮತ್ತು ಹಾಗೆ ನೋಡಿದರೆ ವಿಶ್ವ ಇತಿಹಾಸದ ಸತ್ಯ ಸಂಗತಿ ಎಂದರೆ ಮಹಾತ್ಮರು ಭಾರತ ಮತ್ತು ಇಂಗ್ಲೆಂಡ್ ಎರಡರಲ್ಲೂ ಎಲ್ಲ ತೊಂದರೆಗಳ ಮೂಲ ಈ ದೇಶದಲ್ಲಿನ ವಿದೇಶಿ ಆಡಳಿತದ ಪ್ರಭಾವ. ಈ ಶೋಧ ಮಾಡಿ ಅವರು ಅದನ್ನು ಬಗೆಹರಿಸಲು ಸಜ್ಜಾದರು; ಮತ್ತು ಶಸ್ತ್ರರಹಿತ ಕ್ರಾಂತೀಯ ನಾಯಕತ್ವ ವಹಿಸಿ, ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು. ನಮ್ಮೆಲ್ಲರ ಕೆಲಸ ಈ ಸಾಧನೆಯನ್ನು ಯಶಸ್ವಿಗೊಳಿಸುವುದಾಗಿದೆ. ಆಗ ಅವರು ನಮಗೆ ದಯಪಾಲಿಸಿರುವ ಫಲ ಪ್ರತಿಯೊಬ್ಬರನ್ನು ತಲುಪಿ ಅತ್ಯುತ್ತಮ ಜೀವನ ನಡೆಸುವಂತೆ ಮಾಡುತ್ತದೆ. ಕಡೆಯದಾಗಿ, ಈ ಚಿತ್ರವನ್ನು ರಾಷ್ಟ್ರಕ್ಕೆ ತಮ್ಮದೇ ಸ್ವಂತ ಮಾತುಗಳಲ್ಲಿ ಅರ್ಪಿಸುವುದು ನನ್ನ ತಂದೆಯವರ ಬಯಕೆ ಆಗಿತ್ತು. ಆ ಮಾತುಗಳು ಈ ರೀತಿ ಇವೆ:

"ಯಾರು ಶಾಂತಿಗಾಗಿ ಯಾರೊಬ್ಬರಿಗಿಂತ ಹೆಚ್ಚಾಗಿ ಶ್ರಮಿಸಿದರೊ ಮತ್ತು ಮಾನವನ ಜೀವನದಲ್ಲಿ ಅಂತಿಮವಾಗಿ, ಏಕೈಕ ದಾರಿಯಾದ ಅಹಿಂಸೆಯನ್ನು ಬೋಧಿಸಿದರೊ ಆ ಸಂತನ ಭಾವಚಿತ್ರ ಇದಾಗಿದೆ."

(ಚಪ್ಪಾಳೆ)

ಮಾನ್ಯರೆ, ಇದು ನಾನು ಮುಟ್ಟಿಸಬೇಕಾಗಿದ್ದ ಸಂದೇಶವಾಗಿದೆ ಮತ್ತು ಇಲ್ಲಿ (ಭಾವಚಿತ್ರ ಸ್ಥಾಪಿಸಿದ್ದ ಜಾಗ ತೋರಿಸಿ) ಭಾವಚಿತ್ರವಿದೆ. ನಾನು ನನ್ನ ಕರ್ತವ್ಯ ಮಾಡಿರುತ್ತೇನೆ. ನಾನು ಭಾವಚಿತ್ರ ಅನಾವರಣ ಮಾಡಲು ಕೇಳಿಕೊಳ್ಳುತ್ತೇನೆ.

(ಅನಂತರ ಸಭಾಧ್ಯಕ್ಷರು ಭಾವಚಿತ್ರ ಅನಾವರಣ ಮಾಡಿದರು.)

**ಮಾನ್ಯ ಸಭಾಧ್ಯಕ್ಷರು :** ಗೌರವಾನ್ವಿತ ಸದಸ್ಯರೆ, ಈ ಸದನಕ್ಕೆ ಕೊಡುಗೆ ನೀಡಿದ ಶ್ರೀ ಪಟ್ಟಾಣಿಯವರಿಗೆ ಈ ಸದನದ ಎಲ್ಲ ಸದಸ್ಯರ ಪರವಾಗಿ ನಾನು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಿದ್ದೇನೆ. (ಚಪ್ಪಾಳೆ) ಭಾರತವು ಸ್ವಾತಂತ್ರ್ಯ ಪಡೆದ ಶುಭ ಸಂದರ್ಭದಲ್ಲಿ ರಾಷ್ಟ್ರಕ್ಕೆ ಹಸ್ತಾಂತರಿಸಲು ಹಲವು ವರ್ಷಗಳ ಕಾಲ ಈ ಸುಂದರ ಭಾವಚಿತ್ರವನ್ನು ರಕ್ಷಿಸಿಟ್ಟುಕೊಂಡಿದ್ದ ದಿವಂಗತ ಗೌರವಾನ್ವಿತ ಪ್ರಭಾಶಂಕರ್ ಪಟ್ಟಾಣಿಯವರ ಸ್ಫೂರ್ತಿ ಸಂತೋಷವೂ ಈ ಸಂದರ್ಭದಲ್ಲಿ ನೆನಪಿಗೆ ಬರಲಿ ಮತ್ತು ನಮ್ಮೆಲ್ಲರಿಗೂ ಈ ಸಂದರ್ಭದಲ್ಲಿ ಈ ಸದನದಲ್ಲಿ ಈ ಭಾವಚಿತ್ರ ಅನಾವರಣಗೊಂಡುದನ್ನು ನೋಡಲು ನಾವೆಲ್ಲ ಜೀವಿಸಿರುವುದು ನಮಗೆಲ್ಲ ಒಂದು ಸಂತೋಷದ ಕ್ಷಣ. ವಿಶಿಷ್ಟವಾಗಿ ನನ್ನ ಪಾಲಿಗೆ ಇದು ಒಂದು ಪ್ರತಿಷ್ಠೆಯ ಸಂಗತಿ. ಏಕೆಂದರೆ, ಹಲವು ವರ್ಷಗಳ ಕಾಲ ಮಹಾತ್ಮ ಗಾಂಧಿಯವರಡಿ ಕೆಲಸಮಾಡಲು ದೊರೆತ ಅದೃಷ್ಟವಂತರು ಮತ್ತು ಭಾಗ್ಯಶಾಲಿಗಳಾದ ಹಲವರಲ್ಲಿ ನಾನೂ ಒಬ್ಬನಾಗಿರುವುದೇ ಆಗಿದೆ (ಹರ್ಷ) ಹಾಗೂ ಅವರು ಸಾಧಿಸಿದ ಕೆಲಸ ಕುರಿತು ಏನಾದರೊಂದು ಮಾತಾಡುವುದೂ ಆಗಿದ್ದೆ. ದೇಶವು ಕಷ್ಟದಿಂದ ಪಾರಾಗಲು ಯಾರಾದರೊಬ್ಬರನ್ನು ನೋಡುತ್ತಿರುವಾಗ ಅವರು ನಮ್ಮಲ್ಲಿಗೆ ಬಂದರು. ವಿಫಲಗೊಂಡ ಹಲವು ಯತ್ನಗಳ ಅನಂತರ ಉಂಟಾಗುವ ಮಹಾನ್ ನಿರಾಶಾಭಾವನೆಯನ್ನು ನಾವು ಅನುಭವಿಸಿದ್ದೆವು. ದೇಶವು ಸ್ವತಂತ್ರವಾಗಲು ಹಲವು ಯತ್ನಗಳನ್ನು ಮಾಡಿ ಅದು ಅದಕ್ಕೆ ಅವಶ್ಯ ಚಾಲಕಶಕ್ತಿಯನ್ನು ಕೊಡಬಲ್ಲಂಥ ಶಕ್ತಿಯ ನಿರೀಕ್ಷೆಯಲ್ಲಿತ್ತು. ಮಿಗಿಲಾಗಿ ತನ್ನ ಸ್ವಾತಂತ್ರ್ಯವನ್ನು ಗಳಿಸಲು ನೆರವಾಗುವಂಥ ಒಂದು ವಿಧದ ಅಸ್ತ್ರಕ್ಕಾಗಿ ಕಾಯುತ್ತಿತ್ತು. ಮಹಾತ್ಮ ಗಾಂಧಿ ಎಂಬ ಆ ಚೈತನ್ಯ ಉದಯಿಸಿ, ಆ ಅಸ್ತ್ರವನ್ನು ಜನಗಳ ಕೈಗಳಲ್ಲಿ ಕೊಟ್ಟರು ಮತ್ತು ಅವರ ನಿರೀಕ್ಷೆಗಳಷ್ಟು, ನಾವು ಬಂದಿಲ್ಲದೆ ಹೋಗಿರಬಹುದಾದರೂ ಅವರ ಮಾರ್ಗದರ್ಶನದಲ್ಲಿ ಮತ್ತು ಅವರ ಸ್ಫೂರ್ತಿಯಿಂದ ಹಲವು ವರ್ಷಗಳ ಕಾಲ ಸ್ವಾತಂತ್ರ್ಯವನ್ನು ಗಳಿಸಲು ಹಂಬಲಿಸುತ್ತಿದ್ದ ನಾವು ಕಡೆಗೂ ಯಶಸ್ವಿಯಾದೆವು.

ಮಹಾತ್ಮ ಗಾಂಧಿಯವರು ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲದೇ ಮಾನವಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸ್ಪರ್ಶಿಸದ ಮತ್ತು ಪ್ರಕಾಶಗೊಳಿಸದ ಯಾವುದೇ ಕ್ಷೇತ್ರವಿಲ್ಲ. (ಚಪ್ಪಾಳೆ). ನಾವು ಒಂದು ಹಳ್ಳಿಯ ಕೊಳಚೆ ಪ್ರದೇಶಕ್ಕೆ ಹೋಗಲಿ ಅಥವಾ ಶ್ರೀಮಂತ ಲಕ್ಷಾಧೀಶ್ವರ ಅಥವಾ ದೊಡ್ಡ ಮಹಾರಾಜನ ದೊಡ್ಡ ಅರಮನೆಗೆ ಹೋಗಲಿ, ಅವರ ಪ್ರಭಾವ ಸ್ಪಂದಿಸದ ಯಾವುದೇ ಸ್ಥಳವಿಲ್ಲ ಹಾಗೂ ಚೆನ್ನಾಗಿಯೇ ಪರಿಗಣಿಸಿದೆ. ಆ ಪ್ರಭಾವ ನಮ್ಮ ಜೀವನದಲ್ಲಿ ಎಷ್ಟು ಒಳಹೊಕ್ಕಿದೆ ಎಂದರೆ, ಬಹುಶಃ ನಾವು ನಾವೇ ಅದನ್ನು ಎಳ್ಳಷ್ಟೂ ಪ್ರಶಂಸಿಸಲಾರೆವು ಮತ್ತು ಪೂರಾ ಅರ್ಥಮಾಡಿಕೊಳ್ಳಲಾರೆವು. ಮಹಾತ್ಮರ ಹಿರಿಮೆ ಇಲ್ಲೆ ಇರುವುದು. ಕಾಲ ಸರಿದಂತೆ, ಯುಗಗಳು ಉರುಳಿದಂತೆ ಅವರು ಬೀರಿರುವ ಪ್ರಭಾವ ನಮ್ಮ ಜೀವಗಳ ಮೇಲಷ್ಟೇ ಅಲ್ಲ. ಪ್ರಸಕ್ತ ವಿಶ್ವದ ಇತಿಹಾಸದ ಮೇಲಿದ್ದು, ಹೆಚ್ಚು ಹೆಚ್ಚು ಪ್ರಶಂಸೆಗೆ ಒಳಗಾಗಿ, ಹೆಚ್ಚು ಹೆಚ್ಚು ಅರ್ಥಮಾಡಿಕೊಳ್ಳಲಾಗುತ್ತದೆ. ಅಂತಹ ವ್ಯಕ್ತಿಗಳು ಆಗಾಗ್ಗೆ ಅಥವಾ ಸುಲಭವಾಗಿ ಹುಟ್ಟುವುದಿಲ್ಲ. ಅವರು ವಿಶ್ವದ ಇತಿಹಾಸದಲ್ಲಿ ಎಲ್ಲೋ ಒಮ್ಮೊಮ್ಮೆ ಅದರ ಪಥ ತಿರುಗಿಸಲು ಅದರ ಮಾರ್ಗ ಬದಲಾಯಿಸಲು ಬರುವರು. ಇಲ್ಲಿ ಮಹಾತ್ಮ ಗಾಂಧಿ ಇರುವುದು ಹಾಗೂ ಅವರ ಪದತಲದಡಿ ಸೇವೆ ಮಾಡುವುದು ನಮ್ಮ ಭಾಗ್ಯ ಮತ್ತು ಅದೃಷ್ಟ. ಅವರು, ಮಾನವಕುಲದ ಇತಿಹಾಸಕ್ಕೆ ಒಂದು ತಿರುವು ಕೊಟ್ಟರು ಮತ್ತು ಅವರು ತಮ್ಮ ಸ್ವಂತ ಜೀವಿತ ಕಾಲದಲ್ಲಿ ತಾವು ಆರಂಭಿಸಿದ ಕೆಲಸ ಹೇಗೆ ಫಲ ಕೊಟ್ಟಿತು ಎಂದು ನೋಡಿದರು ಮತ್ತು ಪ್ರತಿ ದಿನ ಅದು ಹೆಚ್ಚು ಹೆಚ್ಚು ಅಮೂಲ್ಯ ಫಲ ಕೊಡುತ್ತಿದೆ. ನಮ್ಮ ಜೀವನದಲ್ಲಿ ಅವರು ತಂದ ಪವಾಡಗಳು ಹಲವು. ಅವನ್ನೆಲ್ಲ ಒಂದು ಸಣ್ಣ ಭಾಷಣದಲ್ಲಿ ವರ್ಣಿಸಲು ನಮ್ಮಿಂದ ಯಾರಿಗೂ ಸಾಧ್ಯವಿಲ್ಲ. ಅವರು, ಹೇಗೆ ಇದೇ ಮಣ್ಣಿನಿಂದ ವೀರಯೋಧರನ್ನು ಸೃಷ್ಟಿಸಿದರು ಹಾಗೂ ಸಾಧಾರಣ ಸಾಮರ್ಥ್ಯದ ಮನುಷ್ಯರನ್ನು ಮಹಾಸಂಸ್ಕೃತಿಯ ಮತ್ತು ಮಹಾನ್ ಸಾಧನೆಗಳ ಮಹಾನ್ ಸಾಮರ್ಥ್ಯದ ಮನುಷ್ಯರಾಗುವಂತೆ

ಮಾಡಿದರು ಎಂದು ನಾವು ಬಲ್ಲೆವು. ಅವರು ಅಷ್ಟೇ ಮಾಡಿದ್ದಲ್ಲ. ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿದ್ದವರಿಗಾಗಿ ಸ್ವಾತಂತ್ರ್ಯ ದೊರಕಿಸಿಕೊಟ್ಟರಲ್ಲದೇ ತಮ್ಮ ಸಾಧನೆಯ ಮಾರ್ಗದಲ್ಲಿ ಸಾಧಿಸಬಯಸಿದ್ದನ್ನೆಲ್ಲ ಸಾಧಿಸಿ ಸಫಲಗೊಳಿಸಿದರು. ಆದುದರಿಂದ, ಇಂದು ನಾವು ಅವರಿಗೆ ಗೌರವಾರ್ಪಣೆ ಮಾಡಲು ಇಲ್ಲಿ ಇದ್ದೇವೆ. ನಮಗೆ ಕೊಡುಗೆಯಾಗಿ ಬಂದಿರುವ ಈ ಭಾವಚಿತ್ರ ಈ ಸದನದಲ್ಲಿ ಇದ್ದು, ಇಲ್ಲಿನ ಆಸನಗಳ ಮೇಲೆ ಕುಳಿತುಕೊಳ್ಳುವ ಪ್ರತಿಯೊಬ್ಬ ಸದಸ್ಯರಿಗೆ ನಮ್ಮ ಇತಿಹಾಸ ಮತ್ತು ಜಗತ್ತಿನ ಇತಿಹಾಸದಲ್ಲಿ ಅತ್ಯಂತ ಸಂದಿಗ್ಧ ಹಾಗೂ ಮಹತ್ತ್ವಪೂರ್ಣ ಕಾಲದಲ್ಲಿ ಅವರು ವಹಿಸಿದ ಮಹಾಪಾತ್ರವನ್ನು ನೆನಪಿಗೆ ತರುತ್ತದೆ. ಅದು, ಸದಸ್ಯರು ಈ ದೇಶಕ್ಕೆ ಸಲ್ಲಿಸಬೇಕಾದ ಮಹಾನ್ ಕರ್ತವ್ಯವನ್ನು ಅವರಿಗೆ ನೆನಪುಮಾಡಿಕೊಡುತ್ತದೆ. ಅದು ನಮ್ಮೆಲ್ಲರಿಗೆ, ಅವರು ಪ್ರತಿನಿಧಿಸುವ ಮಹತ್ತ್ವದ ಪರಂಪರೆಯನ್ನು ಮತ್ತು ಯಾವುದನ್ನು ನಾವೆಲ್ಲ ನಮ್ಮ ಪೂರ್ವಜರಿಂದ ಗಳಿಸಿರುವೆವೂ ಅವನ್ನು ನೆನಪಿಗೆ ತರುತ್ತದೆ. ಎಲ್ಲಕ್ಕೂ ಮಿಗಿಲಾಗಿ ಅದು ನಮಗೆ ನಾವು ಗೆದ್ದುಕೊಂಡ ಸ್ವಾತಂತ್ರ್ಯವನ್ನು ಎಲ್ಲರ ಒಳಿತಿಗೆ ಹೇಗೆ ಬಳಸಿಕೊಳ್ಳಬೇಕೆಂಬುದ ಕುರಿತು ನೆನಪು ಮೂಡಿಸುತ್ತದೆ. ಈ ಭಾವಚಿತ್ರವು ಆ ಉದ್ದೇಶವನ್ನು ಪೂರೈಸುತ್ತದೆ ಎಂದು ನಾವು ಆಶಿಸೋಣ ಹಾಗೂ ಈ ಗುರಿಗೆ ನಮ್ಮನ್ನು ಮುನ್ನಡೆಸಿದ ಮಹಾತ್ಮರ ಗೌರವಾರ್ಹತೆಗಳನ್ನು ಸಾಬೀತುಮಾಡೋಣ (ಗಟ್ಟಿಯಾಗಿ ಚಪ್ಪಾಳೆ ತಟ್ಟಿದರು)

ಸದನದ ಪರವಾಗಿ ನಾನು ಈ ಭಾವಚಿತ್ರವನ್ನು ಔಪಚಾರಿಕವಾಗಿ ಸ್ವೀಕರಿಸುತ್ತೇನೆ. ಇದಕ್ಕೆ ನೀವೆಲ್ಲ ಒಪ್ಪುವಿರೆಂದು ಆಶಿಸುತ್ತೇನೆ.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪಿತಾಮಹ ಮಹಾತ್ಮ ಗಾಂಧಿಯವರ ಈ ಶ್ರೇಷ್ಠ ಭಾವಚಿತ್ರಗಳ ಸಾಲಿನಲ್ಲಿ ವಿಧಾಯಕಸಭೆಯ ಈ ಸಭಾಂಗಣದಲ್ಲಿ ಭಾರತದ ಶಾಂತಿಯ ಪಿತಾಮಹ, ಲೋಕಮಾನ್ಯ ಬಾಲಗಂಗಾಧರ ತಿಲಕ್ ಮತ್ತು ಭಾರತೀಯ ಕ್ರಾಂತಿಯ ಪಿತಾಮಹ, ನೇತಾಜಿ ಸುಭಾಷ್ ಚಂದ್ರಬೋಸ್ ಅವರ ಭಾವಚಿತ್ರಗಳು ಅಲಂಕರಿಸಿದಲ್ಲಿ ವಿಶೇಷವಿರುತ್ತವೆ ಎಂದು ನಮ್ರತೆಯಿಂದ ಸಲಹೆ ಮಾಡಲು ಧೈರ್ಯಮಾಡಬಹುದೆ? ಮಾನ್ಯರೆ, ಅದು ಪೂರಾ ಸಮರ್ಪಕವಾಗುತ್ತದೆ ಹಾಗೂ ರಾಜಕೀಯ ದಾಸ್ಯವಿಮೋಚನೆಯಲ್ಲಿ ನಮ್ಮ ಹೋರಾಟದ ಮೂರು ಸ್ಪಷ್ಟ ಹಂತಗಳನ್ನು ಭಾವಚಿತ್ರಗಳ ಸಾಂಕೇತಿಕ ಪ್ರಾತಿನಿಧ್ಯವಾಗಿರುತ್ತದೆ. ಮಾನ್ಯರೆ, ಈ ಸಭೆಯು, ಅಂತಹ ಭಾವಚಿತ್ರಗಳನ್ನು ಸಂತೋಷ ಮತ್ತು ಕೃತಜ್ಞತಾಭಾವದಿಂದ ಸ್ವೀಕರಿಸುತ್ತದೆ ಎನ್ನುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ಮಾನ್ಯರೆ, ಮುಂದಿನ ಸಂದರ್ಭಗಳಲ್ಲಿ ಅಂತಹ ಭಾವಚಿತ್ರಗಳನ್ನು ಕೊಡುಗೆಯಾಗಿ ನೀಡುವುದಕ್ಕೆ ಅನುಮತಿಸುವಿರಾ?

**ಮಾನ್ಯ ಸಭಾಧ್ಯಕ್ಷರು :** ಈಗ ಸದನವನ್ನು ನಾಳೆ ಬೆಳಗ್ಗೆ ೧೦ ಗಂಟೆಗೆ ಮುಂದೂಡಲಾಗಿದೆ.

ಅನಂತರ ಸಭೆಯನ್ನು ಶುಕ್ರವಾರ, ೧೯೪೭ರ ಆಗಸ್ಟ್ ೨೯ರ ಬೆಳಗ್ಗೆ ೧೦ ಗಂಟೆಯ ವರೆಗೆ ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ.]*

**ಅನುಬಂಧ**

ಸಂಖ್ಯೆ ಸಿಎ/೯೮/ಕಾನ್ಸ್/೪೭

ಭಾರತದ ಸಂವಿಧಾನ ರಚನಾಸಭೆ

ಇಂದ

ಶ್ರೀ ಜಿ.ವಿ. ಮಾವಳಂಕರ್

ಅಧ್ಯಕ್ಷರು

ಭಾರತದ ಸ್ವಾತಂತ್ರ್ಯ ಅಧಿನಿಯಮದ ಅಡಿಯಲ್ಲಿ, ಸಂವಿಧಾನ ರಚನಾಸಭೆಯ ಕರ್ತವ್ಯಗಳ ಕುರಿತ ಸಮಿತಿ

ಇವರಿಗೆ

ಮಾನ್ಯ ಸಭಾಧ್ಯಕ್ಷರು

ಭಾರತದ ಸಂವಿಧಾನ ರಚನಾಸಭೆ

ಮಾನ್ಯರೆ,

ಸಂವಿಧಾನ ರಚನಾಸಭೆಯು ಇನ್ನು ಮುಂದೆ ಮಾಡಬೇಕಾದ ಕಾರ್ಯಗಳಿಗೆ ಸಂಬಂಧಿಸಿದ ಕೆಲವು ವಿಷಯಗಳ ಪರಿಗಣಿಸಲು ಮತ್ತು ಅದರ ಬಗ್ಗೆ ವರದಿ ಮಾಡಲು ತಾವು ೧೯೪೭ರ ಆಗಸ್ಟ್ ೨೧ರಂದು ನೇಮಕಮಾಡಿದ ಸಮಿತಿಯ ಸದಸ್ಯರ ಪರವಾಗಿ ನಾನು ಈ ವರದಿಯನ್ನು ಸಲ್ಲಿಸಲು ಅನುಮತಿಗಾಗಿ ಪ್ರಾರ್ಥಿಸುತ್ತೇನೆ.

೧. ಪೂರ್ವಭಾವಿ ಕಾರ್ಯ:

೨. ೨೨ರ ಶುಕ್ರವಾರದ ನಮ್ಮ ಮೊದಲ ಸಭೆಯಲ್ಲಿ ನಾನು ಅಧ್ಯಕ್ಷನಾಗಿ ಆಯ್ಕೆಯಾದೆ. ಸಮಿತಿಯು ೨೩ ಮತ್ತು ೨೫ರಂದು ಕೂಡ ಸಭೆ ಸೇರಿತು.

೩. ನಮ್ಮ ಪರಿಶೀಲನಾಂಶಗಳು.

(೧) ಭಾರತದ ಸ್ವಾತಂತ್ರ್ಯ ಅಧಿನಿಯಮದ ಅಡಿ ಸಂವಿಧಾನ ರಚನಾಸಭೆಯ ನಿಖರ ಕರ್ತವ್ಯಗಳೇನು?

(೨) ಸಂವಿಧಾನ ರೂಪಿಸುವ ಸಂಸ್ಥೆಯಾಗಿ ಸಂವಿಧಾನ ರಚನಾಸಭೆಯ ಕಾರ್ಯಕಲಾಪಗಳು ಮತ್ತು ಅದರ ಇತರ ಕಾರ್ಯಾಕಲಾಪಗಳ ನಡುವೆ ವ್ಯತ್ಯಾಸ ತೋರಿಸಲು ಸಾಧ್ಯವಾಗಿದೆ. ಸಂವಿಧಾನ ರಚನಾಸಭೆಯ ಕೆಲವು ದಿನಗಳನ್ನು ಅಥವಾ ಅವಧಿಗಳನ್ನು ಸಂವಿಧಾನ ರಚನೆಗೆ ಸಂಬಂಧಿಸಿದ ಕಲಾಪಗಳನ್ನೇ ತೆಗೆದಿರಿಸಿತ್ತು.

(೩) ಸಂವಿಧಾನ ರೂಪಿಸುವುದಕ್ಕೆ ಅಥವಾ ಅವರು ಒಪ್ಪಿದುದರಲ್ಲಿನ ಸಂಬಂಧದ ವಿಷಯಗಳಿಗೆ ಸಂಬಂಧಿಸಿದ ನಡವಳಿಗಳಲ್ಲಿ ಸಂವಿಧಾನ ರಚನಾಸಭೆಯಲ್ಲಿ ಭಾರತೀಯ ರಾಜ್ಯಗಳನ್ನು ಪ್ರತಿನಿಧಿಸುತ್ತಿರುವ ಸದಸ್ಯರು ಪಾಲ್ಗೊಳ್ಳಲು ಹಕ್ಕು ಕೊಡಲಾಗುವುದೆ?

(೪) ಹಾಲಿ ನಿಯಮಗಳಲ್ಲಿ ಅಥವಾ ಸ್ಥಾಯಿ ಆದೇಶಗಳಲ್ಲಿ ಸಂವಿಧಾನ ರಚನಾಸಭೆಯ ಅಥವಾ ಅದರ ಅಧ್ಯಕ್ಷರು ಯಾವ ಹೊಸ ನಿಯಮಗಳನ್ನು ಅಥವಾ ಸ್ಥಾಯಿ ಆದೇಶಗಳನ್ನು, ಏನಾದರೂ ಇದ್ದರೆ, ತಿದ್ದುಪಡಿಗಳು ಯಾವುವಾದರೂ ಇದ್ದರೆ, ಅವುಗಳನ್ನು ಮಾಡತಕ್ಕದ್ದು.

ನಮೂದಿಸಿದ ಆದೇಶಗಳಲ್ಲಿ ಈ ಪರಿಶೀಲನಾಂಶಗಳನ್ನು ಕುರಿತು ನಾವು ನಮ್ಮ ಅಭಿಪ್ರಾಯಗಳನ್ನು ಹೇಳಲು ಮುಂದುವರಿಯುತ್ತೇವೆ.

**II. ಮೊದಲನೇಯ ಪರಿಶೀಲನಾಂಶ:**

೪. ಸಂವಿಧಾನ ರಚನಾಸಭೆಯು ನಿರ್ವಹಿಸಬೇಕಾದ ಕಾರ್ಯಕಲಾಪಗಳು ಎರಡು ಪ್ರವರ್ಗಗಳಡಿ ಬರುತ್ತದೆ.

(ಎ) ೧೯೪೬ರ ಡಿಸೆಂಬರ್ ೯ರಂದು ಆರಂಭವಾದ ಸಂವಿಧಾನ ರೂಪಿಸುವ ಕೆಲಸವನ್ನು ಮುಂದುವರಿಸಿ ಪೂರ್ಣಗೊಳಿಸುವುದು ಮತ್ತು

(ಬಿ) ಹೊಸ ಸಂವಿಧಾನದಡಿ ಒಂದು ಶಾಸನಸಭೆ ಜಾರಿಗೆ ಬರುವವರೆಗೆ ಪ್ರಭುತ್ವದ (ಡೊಮಿನಿಯನ್) ಶಾಸನಸಭೆಯಾಗಿ ಕೆಲಸಮಾಡುವುದು.

**III. ಎರಡನೇಯ ಪರಿಶೀಲನಾಂಶ:**

೫. ತನ್ನ ಎರಡು ಸಾಮರ್ಥ್ಯಗಳಲ್ಲಿ, ಸಂವಿಧಾನ ರಚನಾಸಭೆಯು ಸೂಕ್ತ ಕಾರ್ಯನಿರ್ವಹಣೆ ಮಾಡುವುದು ಎಂದರೆ, ಮೊದಲನೆದಾಗಿ ಸಂವಿಧಾನ ರೂಪಿಸುವ ಅಂಗವಾಗಿ ಹೇಗೆ ಕಾರ್ಯಕಲಾಪಗಳನ್ನು ನಡೆಸುತ್ತಿದೆಯೋ ಅದಕ್ಕೆ ಭಿನ್ನವಾಗಿ ಪ್ರಭುತ್ವ ಶಾಸನಸಭೆಯಾಗಿ ಹೇಗೆ ಕಾರ್ಯಕಲಾಪಗಳನ್ನು ನಡೆಸಬೇಕೋ ಅದನ್ನು ಸ್ಪಷ್ಟವಾಗಿ ಹೇಳುವುದು ಸಾಧ್ಯವಲ್ಲವಷ್ಟೇ ಅಲ್ಲ, ಆವಶ್ಯಕವೂ ಹೌದು. ನಾವು, ಜಟಿಲತೆಗಳನ್ನು ಮತ್ತು ಗೊಂದಲವನ್ನು ತಪ್ಪಿಸುವ ಉದ್ದೇಶಕ್ಕಾಗಿ, ಎರಡೂ ವಿಧಗಳ ವ್ಯವಹಾರಕ್ಕಾಗಿ ಬೇರೆ ಬೇರೆ ದಿನಗಳನ್ನು ಅಥವಾ ಅದೇ ದಿನದಂದು ಪ್ರತ್ಯೇಕ ಸಮಾವೇಶಗಳನ್ನು ಬೇರೆಯಾಗಿ ನಡೆಸಬೇಕು.

**IV. ಮೂರನೆಯ ಪರಿಶೀಲನಾಂಶ:**

೬. ಪರಿಶೀಲನಾಂಶಗಳನ್ನು ಹೇಳುವುದಕ್ಕೆ ಬಳಸಿದ ಪದಗಳಿಂದ ಸೂಚಿತವಾದಂತೆ ಸಂವಿಧಾನ ರೂಪಿಸುವ ಕಾರ್ಯಕಲಾಪಗಳಿಗಾಗಿ ಪ್ರತ್ಯೇಕವಾಗಿ ಇಟ್ಟಿರುವ ಎಲ್ಲ ದಿನಗಳಂದು ವಿಧಾಯಕಸಭೆಯ ನಡವಳಿಗಳಲ್ಲಿ ಭಾರತೀಯ ರಾಜ್ಯಗಳನ್ನು ಪ್ರತಿನಿಧಿಸುವ ವಿಧಾಯಕಸಭೆಯ ಸದಸ್ಯರು ಪಾಲ್ಗೊಳ್ಳಲು ಅರ್ಹರಿರುತ್ತಾರೆ ಎಂಬುದನ್ನು ನಾವು ಒಪ್ಪುತ್ತೇವೆ. ಅವರು ಪ್ರಭುತ್ವ ಶಾಸನಸಭೆ ಆಗಿ ಕಾರ್ಯಕಲಾಪಗಳಿಗಾಗಿ ಪ್ರತೇಕವಾಗಿ ಇಟ್ಟ ದಿನಗಳಲ್ಲಿ ಪ್ರಭುತ್ವ ಡೊಮಿನಿಯನ್ ಅಂಗೀಕಾರವಾಗಿರುವ ರಾಜ್ಯಗಳ ಸಂಬಂಧದಲ್ಲಿ ವಿಷಯಗಳಿಗೆ ಸಂಬಂಧಿಸಿದ ಕಾರ್ಯಕಲಾಪಗಳಲ್ಲಿ ಪಾಲ್ಗೊಳ್ಳಲು ಹಕ್ಕು ಹೊಂದಿರುತ್ತಾರೆ. ಅಂಗೀಕರಿಸದೆ ಇರುವ ರಾಜ್ಯಗಳ ಸಂಬಂಧದಲ್ಲಿಯ ವಿಷಯಗಳಿಗೆ ಸಂಬಂಧಿಸಿದ ಕಾರ್ಯಕಲಾಪಗಳಲ್ಲಿ ಅದು ಪಾಲ್ಗೊಳ್ಳಲು ನಿರಾಕರಿಸಲು ಅಥವಾ ಸೀಮಿತಗೊಳಿಸಲು ಸಂವಿಧಾನ ರಚನಾಸಭೆಯು ಸಮರ್ಥವಿದ್ದರೂ, ನಾವು ಅಂತಹ ಕಾರ್ಯಕಲಾಪಗಳಲ್ಲಿ ಅದು ಪಾಲ್ಗೊಳ್ಳಲು ಯಾವುದೇ ನಿಯಮದ ಮೂಲಕ ನಿಷೇಧ ಅಥವಾ ನಿರ್ಬಂಧ ಇರಿಸಬಾರದೆಂದು ಶಿಫಾರಸು ಮಾಡುತ್ತೇವೆ.

**V. ನಾಲ್ಕನೆಯ ಪರಿಶೀಲನಾಂಶ:**

೭. ಸಂವಿಧಾನ ರೂಪಿಸುವುದು ಸಂಬಂಧಿಸಿರುವಷ್ಟರ ಮಟ್ಟಿಗೆ ಹಾಲಿ ಇರುವ ಕಾರ್ಯವಿಧಾನ ನಿಯಮಗಳು ಮತ್ತು ಸಂವಿಧಾನ ರಚನಾಸಭೆ ಮತ್ತು ಅದರ ಅಧ್ಯಕ್ಷರು ಮಾಡಿದ, ಸ್ಥಾಯಿ ಆದೇಶಗಳು ಸಾಕಷ್ಟಾಗಿವೆ ಮತ್ತು ಏನಿದ್ದರೂ ಅನುಭವದ ತಿಳಿವಳಿಕೆಯಲ್ಲಿ ಆವಶ್ಯಕವೆಂದು ಪರಿಗಣಿಸಿದಂತೆ ಕಾಲಕಾಲಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡಬಹುದು. ಭಾರತದ ಸ್ವಾತಂತ್ರ್ಯ

ಅಧಿನಿಯಮ ಸೆಕ್ಷನ್ ೮(೨) ಅಡಿಯಲ್ಲಿ ಸಂವಿಧಾನ ರಚನಾಸಭೆಯು, ಪ್ರಭುತ್ವ ಶಾಸನಸಭೆಯಾಗಿ ಕಾರ್ಯನಿರ್ವಹಿಸುವುದು ಕುರಿತಂತೆ ಅಳವಡಿಸಿದ ಭಾರತ ಸರ್ಕಾರದ ಅಧಿನಿಯಮ ಪ್ರಸ್ತುತ ಉಪಬಂಧ ಮತ್ತು ಭಾರತದ ವಿಧಾನಸಭಾ ನಿಯಮಗಳು ಮತ್ತು ಸ್ಥಾಯಿ ಆದೇಶಗಳನ್ನು ಸಾಮಾನ್ಯವಾಗಿ ಅನುಸರಿಸಬೇಕು. ಹೇಗೇ ಇರಲಿ, ಲೋಕಸಭೆಯು ನಡೆಸಬೇಕಾದ ಕಾರ್ಯಕಲಾಪಗಳ ಎರಡು ವರ್ಗಗಳಿಗೆ ಒಂದೇ ಆದ ವಿಷಯಗಳ ಸಂಬಂಧದಲ್ಲಿ ಈ ನಿಯಮಗಳಲ್ಲೂ ಮತ್ತು ಸ್ಥಾಯಿ ಆದೇಶಗಳಲ್ಲಿ ಮಾರ್ಪಾಡುಗಳನ್ನು ಮತ್ತು ಅಳವಡಿಕೆಗಳನ್ನು ಮಾಡುವುದು ಆವಶ್ಯಕ. ನಮಗಿರುವ ವೇಳೆಯೊಳಗೆ, ಆವಶ್ಯಕವಿರಬಹುದಾದ ಮಾರ್ಪಾಡುಗಳು, ಅಳವಡಿಕೆಗಳು ಮತ್ತು ಸೇರಿಕೆಗಳು ಕುರಿತಂತೆ ಸಲಹೆಗಳನ್ನು ಮಾಡುವ ದೃಷ್ಟಿಯಿಂದ, ಈ ನಿಯಮಗಳಲ್ಲಿ ಮತ್ತು ಸ್ಥಾಯಿ ಆದೇಶಗಳಲ್ಲಿ ನಮಗೆ ನೀಡಿರುವ ಕಾಲಾವಕಾಶದೊಳಗೆ ವಿವರವಾದ ಪರೀಕ್ಷೆಗೆ ಯತ್ನಿಸಲು ನಾವು ಸಮರ್ಥರಾಗಿಲ್ಲ. ನಾವು ಅಧ್ಯಕ್ಷರ ಆದೇಶಗಳ ಅಡಿ ಆವಶ್ಯಕ ಮಾರ್ಪಾಡುಗಳನ್ನು, ಅಳವಡಿಕೆಗಳನ್ನು ಮತ್ತು ಸೇರಿಕೆಗಳನ್ನು ಮಾಡಬಹುದೆಂದು ಸಲಹೆ ಮಾಡುತ್ತೇವೆ.

೮. ನಾವು ಪ್ರಮುಖವಾದ ಮೂರು ವಿಷಯಗಳನ್ನು ಉಲ್ಲೇಖಿಸಲು ಇಚ್ಛಿಸುತ್ತೇವೆ. ಇವು ಪರಿಗಣನೆಗೆಂದು ನಮಗೆ ಕೊಡಲಾಗಿರುವ ಮುಖ್ಯ ವಿಷಯಕ್ಕೆ ಪ್ರಸ್ತುತವಿರುತ್ತವೆ. ಮೂರು ವಿಷಯಗಳು ಹೊಸ ನಿಯಮಗಳನ್ನು ಅಥವಾ ಸ್ಥಾಯಿ ಆದೇಶಗಳನ್ನು ಮತ್ತು ಹಾಲಿ ನಿಯಮಗಳಿಗೆ ಅಥವಾ ಸ್ಥಾಯಿ ಆದೇಶಗಳಿಗೆ ತಿದ್ದುಪಡಿಯನ್ನು ಸಂವಿಧಾನ ರಚನಾಸಭೆ ಅಥವಾ ಅದರ ಸಭಾಧ್ಯಕ್ಷರು ಮಾಡಬೇಕಾದ ಅಗತ್ಯದ ಪ್ರಶ್ನೆಗೆ ಸಂಬಂಧಿಸಿವೆ.

೯. ೧೯೩೫ರ ಭಾರತ ಸರ್ಕಾರದ ಅಧಿನಿಯಮ ಪ್ರಕರಣ ೨೨ರಲ್ಲಿ ಒಬ್ಬ ಸಭಾಧ್ಯಕ್ಷರ ಆಯ್ಕೆಗೆ ಉಪಬಂಧಗಳನ್ನು ಕೈಬಿಡಲಾಗಿದೆ. ಆ ಕಾಯಿದೆಯಲ್ಲಿ, ಮಾಡಲಾದ ಇತರ ಮಾರ್ಪಾಡುಗಳೊಂದಿಗೆ ಓದಿಕೊಳ್ಳುವುದರಿಂದ ಸಾಧಾರಣ ಶಾಸನಸಭೆ ವ್ಯವಹಾರ ನಡೆಸುವಾಗ ಲೋಕಸಭೆಯ ಅಧ್ಯಕ್ಷತೆ ವಹಿಸುವ ಉದ್ದೇಶಕ್ಕಾಗಿ ಒಬ್ಬ ಅಧಿಕಾರಿಯ ಚುನಾವಣೆಗೆ ಸಂವಿಧಾನ ರಚನಾಸಭೆಯ ಕಾರ್ಯವಿಧಾನ ನಿಯಮಗಳಲ್ಲಿ ಇತರ ಉಪಬಂಧಗಳನ್ನು ಮಾಡುವವರೆಗೆ ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರೇ ಪ್ರಭುತ್ವ ಶಾಸನಸಭೆಯಾಗಿಯೂ ಕೆಲಸಮಾಡುವಾಗ ಅಧ್ಯಕ್ಷತೆ ವಹಿಸಬೇಕಾದ ವ್ಯಕ್ತಿ ಎಂಬುದನ್ನು ತೋರಿಸುತ್ತದೆ. ಎರಡು ವಿಧದ ಕಾರ್ಯಕಲಾಪಗಳನ್ನೂ ನಡೆಸುತ್ತಿದ್ದರೂ ಲೋಕಸಭೆ ಒಂದೇ ಮತ್ತು ಅದರ ಚರ್ಚೆಯ ಹಾಗೂ ಅದರ ಆಡಳಿತಾತ್ಮಕ ಭಾಗಗಳು ಹೀಗೆ ಈ ಎರಡಕ್ಕೂ ಪರಮೋಚ್ಚ ಮುಖ್ಯಸ್ಥರಾದವರೇ ಅಧ್ಯಕ್ಷರಾಗಿರಬೇಕು ಎಂಬುದನ್ನು ನೆನಪಿನಲ್ಲಿಡಬೇಕು. ಹೇಗೆ ಇರಲಿ, ನಾವು, ಪ್ರಭುತ್ವ ಸರ್ಕಾರದ ಒಬ್ಬ ಮಂತ್ರಿಯಾಗಿಯು, ಪ್ರಭುತ್ವ ಶಾಸನಸಭೆಯಾಗಿ ಕೆಲಸ ನಿರ್ವಹಿಸುವಾಗ ಸಂವಿಧಾನ ರಚನಾಸಭೆಯ ಸಭಾಧ್ಯಕ್ಷತೆ ವಹಿಸುವುದು ಆ ವ್ಯಕ್ತಿಗೆ ಸಾಂವಿಧಾನಿಕವಾಗಿ ಸೂಕ್ತವಲ್ಲ ಎಂದು ಎತ್ತಿ ಹೇಳುತ್ತಿದ್ದೇವೆ. ಈ ಅಸಮಂಜಸತೆಯನ್ನು ತಪ್ಪಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕಾದುದು ಸ್ಪಷ್ಟವಾಗಿ ಅಪೇಕ್ಷಣೀಯ. ನಾವು, ಈ ಉದ್ದೇಶಕ್ಕಾಗಿ ಕೆಳಗಿನ ಪರ್ಯಾಯಗಳನ್ನು ಪರಿಗಣಿಸಬಹುದೆಂದು ಸಲಹೆ ಮಾಡುತ್ತೇವೆ.

(ಎ) ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರು ಸಂವಿಧಾನ ರೂಪಿಸುವುದಕ್ಕೆ ತೊಡಗಿದಾಗಲೂ ಹಾಗೂ ಪ್ರಭುತ್ವ ಶಾಸನಸಭೆಯ ವ್ಯವಹಾರವನ್ನು ನಡೆಸುವಾಗಲೂ ಈ ಎರಡೂ ಸಂದರ್ಭಗಳಲ್ಲಿ ಲೋಕಸಭೆಯ ಕೆಲಸಕ್ಕೆ ಸಮಯವನ್ನು ಕೊಡಬೇಕಾಗುತ್ತದೆ.

(ಬಿ) ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರು ಒಬ್ಬ ಸಚಿವರು ಆದರೆ, ಪ್ರಭುತ್ವ ಶಾಸನಸಭೆ ಕಾರ್ಯನಿರ್ವಹಿಸುವಾಗ ಲೋಕಸಭೆಯ ಚರ್ಚೆಗಳಲ್ಲಿ ಅಧ್ಯಕ್ಷರಾಗಿರಲು ಒಬ್ಬ ಅಧಿಕಾರಿಯ ಆಯ್ಕೆಮಾಡಲು ಸಂವಿಧಾನ ರಚನಾಸಭೆಯ ನಿಯಮಗಳಲ್ಲಿ ಅವಕಾಶಮಾಡಬಹುದು.

೧೦. ಭಾರತ ಸರ್ಕಾರದ ಅಧಿನಿಯಮದಡಿ ಅಳವಡಿಸಿದಂತೆ, ಪ್ರಭುತ್ವ ಶಾಸನಸಭೆಯನ್ನು ಕರೆಯುವ ಮತ್ತು ಮುಂದೂಡುವ ಅಧಿಕಾರ ಗವರ್ನರ್–ಜನರಲ್ ಅವರಲ್ಲಿ ಇರುತ್ತದೆ. ನಾವು, ಸಂವಿಧಾನ ರಚನಾಸಭೆಗೆ ಸೇರಿದ ಅಧಿಕಾರಗಳು ಮತ್ತು ಅದು ಈಗಾಗಲೇ ಮಾಡಿದ ನಿಯಮಗಳಿಗೆ ಸೇರಿದ ಹಕ್ಕುಗಳ ಸಂಬಂಧದ ಅಧಿಕಾರಗಳಿಗೆ ಸಂಗತವಾಗಿವೆ ಮತ್ತು ಅದರ ಎರಡು ವಲಯಗಳಲ್ಲಿ ವಿಧಾಯಕಸಭೆಯ ಕಾರ್ಯನಿರ್ವಹಣೆಯನ್ನು ಸೂಕ್ತ ಸಮನ್ವಯಗೊಳಿಸುವ ದೃಷ್ಟಿಯಿಂದ ಪ್ರಭುತ್ವ ಶಾಸನಸಭೆಯಾಗಿ ಕೆಲಸಮಾಡಲು ಆ ಲೋಕಸಭೆ ಕರೆಯುವ ಮತ್ತು ಮುಂದೂಡುವ, ಈ ಅಧಿಕಾರವು ರಾಷ್ಟ್ರಪತಿಗಳಲ್ಲಿ ಮಾತ್ರ ಇರಬೇಕು, ಇದು ಸಮಂಜಸ ಎಂದು ಪರಿಗಣಿಸುತ್ತೇವೆ. ಇದಕ್ಕಾಗಿ ಸಂವಿಧಾನ ರಚನಾಸಭೆ ಕಾರ್ಯವಿಧಾನ ನಿಯಮಗಳಿಗೆ ಒಂದು ಹೊಸ ನಿಯಮವನ್ನು ಸೇರಿಸಬಹುದು ಮತ್ತು ಭಾರತ ಸರ್ಕಾರದ ಅಧಿನಿಯಮದ ಪ್ರಸ್ತುತ ಪ್ರಕರಣಕ್ಕೆ ಇನ್ನಷ್ಟು ಅಳವಡಿಕೆಗಳನ್ನು ಹಾಗೂ ಈ ಹೊಸ ನಿಯಮದೊಂದಿಗಿನ ಸುಸಂಗತವಾಗುವಂತೆ ಮಾಡಬಹುದು.

೧೧. ಪ್ರಸ್ತುತ ಪ್ರಭುತ್ವ ಸರ್ಕಾರದ ಐವರು ಸದಸ್ಯರಿಗೆ, ಸಂವಿಧಾನ ರಚನಾಸಭೆಯಲ್ಲಿ ಸ್ಥಾನಗಳು ಇರುವುದಿಲ್ಲ. ಈ ಸಚಿವರು ಮತಹಾಕಲು ಹಕ್ಕು ಹೊಂದಿಲ್ಲದಿದ್ದರೂ, ಪ್ರಭುತ್ವ ಶಾಸನಸಭೆಯಾಗಿ ಕಾರ್ಯನಿರ್ವಹಿಸುವಾಗ ಸಂವಿಧಾನ ರಚನಾಸಭೆಯ ವ್ಯವಹಾರದಲ್ಲಿ ಪಾಲ್ಗೊಳ್ಳಲು ಹಕ್ಕು ಹೊಂದಿರುವರು. ಹೇಗೇ ಇರಲಿ, ಸಂವಿಧಾನ ರಚನಾಸಭೆಯು ಸಂವಿಧಾನ ರೂಪಿಸುವುದರೊಂದಿಗಿನ ಸಂಬಂಧದ ಕಾರ್ಯಮಾಡುವಾಗ, ಸಂವಿಧಾನ ರಚನಾಸಭೆಯಲ್ಲಿ ಭಾಗವಹಿಸಲು ಹಕ್ಕು ಹೊಂದಿರುವುದಿಲ್ಲ. ಹೇಗೇ ಇರಲಿ, ನಾವು ಅಂತಹ ಸಚಿವರಿಗೆ ಸಂವಿಧಾನ ರಚನಾಸಭೆಯ ನಿಯಮಗಳಿಗೆ ಸೂಕ್ತ ಸೇರ್ಪಡೆ ಮಾಡಿದ ಅವರು ಸಂವಿಧಾನ ರಚನಾಸಭೆಯ ಸದಸ್ಯರಾಗುವವರೆಗೂ ಮತ ನೀಡುವ ಯಾವ ಹಕ್ಕೂ ಹೊಂದಿರುವುದಿಲ್ಲವಾದರೂ ಸಂವಿಧಾನ ರೂಪಿಸುವ ಕೆಲಸದಲ್ಲಿ ಹಾಜರಿದ್ದು, ಭಾಗವಹಿಸಲು ಹಕ್ಕು ಕೊಡಬಹುದೆಂದು ಶಿಫಾರಸು ಮಾಡುತ್ತೇವೆ

ತಮ್ಮ ವಿಶ್ವಾಸಿ,
ಮಾವಳಂಕರ್ ಜಿ.ವಿ.
ಅಧ್ಯಕ್ಷ

ನವದೆಹಲಿ, ದಿನಾಂಕ ೨೫ನೇ ಆಗಸ್ಟ್, ೧೯೪೭.